# 01-01-2021

## 3 ರಾಜ್ಯಗಳ ಕೈಗಾರಿಕಾ ಪ್ರದೇಶಗಳು ಮತ್ತು ಲಾಜಿಸ್ಟಿಕ್ಸ್ ಹಬ್‌ಗೆ ಕೇಂದ್ರ ಸಂಪುಟ ಅನುಮೋದನೆ



* ಇತ್ತೀಚೆಗೆ ಪ್ರಧಾನಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಆಂಧ್ರಪ್ರದೇಶ, ಉತ್ತರಪ್ರದೇಶ ಹಾಗೂ ಕರ್ನಾಟಕದ ಕೈಗಾರಿಕಾ ಪ್ರದೇಶಗಳು ಮತ್ತು ಲಾಜಿಸ್ಟಿಕ್ಸ್ ಹಬ್‌ಗೆ ಅನುಮೋದನೆ ನೀಡಲಾಯಿತು.
* ಆಂಧ್ರಪ್ರದೇಶದ ಕೃಷ್ಣಪಟ್ಟಣಂ ಪ್ರದೇಶವು ಕೈಗಾರಿಕೀಕರಣ ಮಾಡುವದರಿಂದ ಜನರಿಗೆ ಉದ್ಯೋಗವನ್ನುಒದಗಿಸಲಿದೆ. ಈ ಕೈಗಾರಿಕಾ ಪ್ರದೇಶವು 2,139.44 ಕೋಟಿ ರೂ. ಅಂದಾಜು ವೆಚ್ಚದಲ್ಲಿ ತಯಾರಾಗಲಿದೆ.
* ಕರ್ನಾಟಕದ ತುಮಕೂರು ಪ್ರದೇಶವು ಕೈಗಾರಿಕೀಕರಣದಿಂದ ಉದ್ಯೋಗ ನೀಡಲಿದ್ದು, ಈ ಕೈಗಾರಿಕಾ ಪ್ರದೇಶವು 1,701.81 ಕೋಟಿ ರೂ. ಅಂದಾಜು ವೆಚ್ಚದಲ್ಲಿ ತಯಾರಾಗಲಿದೆ.
* ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದಲ್ಲಿ, ಮಲ್ಟಿ ಮೋಡಲ್ ಲಾಜಿಸ್ಟಿಕ್ಸ್ ಹಬ್ ಮತ್ತು ಮಲ್ಟಿ ಮೋಡಲ್ ಟ್ರಾನ್ಸ್‌ಪೋರ್ಟ್ ಹಬ್ 3,883.8 ಕೋಟಿ ರೂ. ವೆಚ್ಚದಲ್ಲಿ ತಯಾರಾಗಲಿದೆ ಎಂದು ಕೇಂದ್ರ ಸಚಿವ ಸಂಪುಟ ತಿಳಿಸಿದೆ.

## ಏಷ್ಯಾದ ನಂಬರ್ 1 ಶ್ರೀಮಂತ ವ್ಯಕ್ತಿಯಾದ ಝೂಂಗ್ ಶಾನ್ಶನ್



* ಚೀನಾ ದೇಶದ 66 ವಯಸ್ಸಿನ ಝೂಂಗ್ ಶಾನ್ಶನ್ ರವರು ಏಷ್ಯಾದ ನಂಬರ್ 1 ಶ್ರೀಮಂತ ವ್ಯಕ್ತಿಯಾಗಿದ್ದಾರೆ, ಎಂದು ಬ್ಲೂಮ್‌ಬರ್ಗ್ ಬಿಲಿಯನೇರ್ಸ್ ಇಂಡೆಕ್ಸ್ ಪ್ರಕಟಿಸಿದೆ.
* ಇತೀಚಿನ ದಿನಗಳಲ್ಲಿ ಅತಿ ಹೆಚ್ಚು ಸಮಯದವರೆಗೆ ಏಷ್ಯಾದ ಶ್ರೀಮಂತ ವ್ಯಕ್ತಿಯಾಗಿರುವ ಮುಕೇಶ್ ಅಂಬಾನಿಯನ್ನು ಹಿಂದಿಕ್ಕಿ, ಏಷ್ಯಾದ ಬಹುದೊಡ್ಡ ಉದ್ಯಮಿಯಾದ ಝೂಂಗ್ ಶಾನ್ಶನ್ ಪ್ರಥಮ ಸ್ಥಾನ ಪಡೆದುಕೊಂಡು, ಈಗ ಇವರು ವಿಶ್ವದ 11ನೇ ಅತಿದೊಡ್ಡ ಶ್ರೀಮಂತ ವ್ಯಕ್ತಿ ಎನಿಸಿಕೊಂಡಿದ್ದಾರೆ.
* ಪ್ರಸ್ತುತ ಝೂಂಗ್ ರವರು ಪತ್ರಿಕೋದ್ಯಮ, ಅಣಬೆ ಕೃಷಿ ಮತ್ತು ಹೆಲ್ತ್ ಕೇರ್ ಉತ್ಪನ್ನಗಳ ಉದ್ಯಮಿಯಾಗಿದ್ದಾರೆ. ಈ ವರ್ಷದ ಲಾಭವು 70.9 ಬಿಲಿಯನ್ ಡಾಲರ್ ನಿಂದ 77.8 ಬಿಲಿಯನ್ ಡಾಲರ್‌ಗೆ ಏರಿಕೆ ಕಂಡಿದೆ, ಹಾಗೂ ಇವರಿಗೆ ಸ್ಥಳೀಯವಾಗಿ ಲೋನ್ ವುಲ್ಫ್ ಎಂಬ ಹೆಸರಿನಿಂದ ಕರಿಯಲಾಗುತ್ತದೆ.

## ಯೆಮನ್ ವಿಮಾನ ನಿಲ್ದಾಣದಲ್ಲಿ ಸ್ಫೋಟ, ಸಾವು ನೋವು



* ದಕ್ಷಿಣ ಯೆಮನ್ ನಗರದ ಏಡೆನ್ ವಿಮಾನ ನಿಲ್ದಾಣದಲ್ಲಿ ಭಾರಿ ಸ್ಫೋಟ ಸಂಭವಿಸಿರುವುದಾಗಿ ಇಲ್ಲಿನ ಭದ್ರತಾ ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ. ಈ ಸ್ಫೋಟದಲ್ಲಿ ಪ್ರಸ್ತುತ 25 ಜನರು ಸಾವಿಗೀಡಾಗಿದ್ದು, ಸಾವಿನ ಸಂಖ್ಯೆ ಇನ್ನು ಹೆಚ್ಚುವ ಸಾಧ್ಯತೆಯಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ ಮತ್ತು 110 ಮಂದಿ ಗಾಯಾಳುಗಳಾಗಿದ್ದಾರೆ.
* ಇರಾನ್ ಬೆಂಬಲಿತ ಹೌತಿ ಬಂಡುಕೋರರು ಯೆಮನ್ ವಿಮಾನ ನಿಲ್ದಾಣದಲ್ಲಿ 4 ಕ್ಷಿಪಣಿಗಳನ್ನು ಸಿಡಿಸಿ ಈ ಕೃತ್ಯವನ್ನು ಮಾಡಿದ್ದಾರೆ ಎಂದು ಯೆಮನ್‌ನ ಸರ್ಕಾರ ಹೇಳಿದೆ.

## ಹಿಂದೂ ಮಹಾಸಾಗರದಲ್ಲಿ ಜಲಾಂತರ್ಗಾಮಿ ಗ್ಲೈಡರ್ ಡ್ರೋನ್‌ಗಳನ್ನು ನಿಯೋಜಿಸಿದ ಚೀನಾ




* ಚೀನಾ ದೇಶವು 'ಸೀ ವಿಂಗ್' ಎಂಬ ಜಲಾಂತರ್ಗಾಮಿ ಗ್ಲೈಡರ್ ಡ್ರೋನ್‌ಗಳನ್ನು ಹಿಂದೂ ಮಹಾಸಾಗರದಲ್ಲಿ ನಿಯೋಜನೆ ಮಾಡಿರುವುದಾಗಿ ರಕ್ಷಣಾ ವಿಶ್ಲೇಷಕ ಎಚ್‌ಐ ಸುಟ್ಟಾನ್ ತಿಳಿಸಿದ್ದಾರೆ. ನೌಕಾ ಗುಪ್ತ ಕಾರ್ಯಚರಣೆಗಾಗಿ ಗ್ಲೈಡರ್ ಡ್ರೋನ್‌ಗಳನ್ನೂ ಬಳಸಿಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.
* ಈ ಸಮುದ್ರ ಗ್ಲೈಡರ್‌ಗಳು ಚಾಲಕ ರಹಿತ ಜಲಾಂತರ್ಗಾಮಿ ಡ್ರೋನ್ ಗಳಾಗಿದ್ದು, ವಾಜಪೇಯಿ ಪ್ರಧಾನಿಯಾಗಿದ್ದ ಸಮಯದಲ್ಲಿ ಭಾರತ ಮತ್ತು ಚೀನಾ ಈ ಒಪ್ಪಂದಕ್ಕೆ ಸಹಿ ಹಾಕಿದ್ದವು. ಈ ಮೊದಲು ಇವುಗಳನ್ನು ಡಿಸೆಂಬರ್ 2019ರಲ್ಲಿ ನಿಯೋಜನೆ ಮಾಡಲಾಗಿತ್ತು, ಇವುಗಳಿಂದ 3,400ಕ್ಕೂ ಹೆಚ್ಚು ಮಾಹಿತಿಗಳನ್ನು ಪಡೆದು

ಮತ್ತು ಕೆಲ ತಿಂಗಳ ನಂತರ ಈ ಡ್ರೋನ್‌ಗಳನ್ನು ಹಿಂಪಡೆಯಲಾಗಿತ್ತು, ಎಂದು ಫೋರ್ಬ್ಸ್ ತಿಳಿಸಿದೆ.

## ಐಸಿಸಿ ಟೆಸ್ಟ್ ರ್ಯಾಂಕಿಂಗ್ ನಲ್ಲಿ ನಂಬರ್ 1 ಸ್ಥಾನ ಪಡೆದ ಕೇನ್ ವಿಲಿಯಮ್ಸನ್



ಪ್ರಸ್ತುತ ಐಸಿಸಿ ಟೆಸ್ಟ್ ರ್ಯಾಂಕಿಂಗ್ ನಲ್ಲಿ ನ್ಯೂಜಿಲ್ಯಾಂಡ್ ಕ್ರಿಕೆಟ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಪ್ರಥಮ ಸ್ಥಾನದಲಿದ್ದಾರೆ. ಈ ಮೊದಲು ಕೇನ್ ವಿಲಿಯಮ್ಸನ್ ರವರು 3ನೇ ಸ್ಥಾನದಲ್ಲಿದ್ದರು, ಪ್ರಸ್ತುತ ಇವರು ವಿರಾಟ್ ಕೊಹ್ಲಿ ಮತ್ತು ಸ್ಟೀವ್ ಸ್ಮಿತ್ ರನ್ನು ಹಿಂದಾಕಿ ನಂಬರ್ 1 ಸ್ಥಾನಪಡೆದುಕೊಂಡಿದ್ದಾರೆ.

* ಐಸಿಸಿ ಟೆಸ್ಟ್ ರ್ಯಾಂಕಿಂಗ್ : ಪ್ರಥಮ ಸ್ಥಾನ ಕೇನ್ ವಿಲಿಯಮ್ಸನ್. ಎರಡನೇ ಸ್ಥಾನ ವಿರಾಟ್ ಕೊಹ್ಲಿ. ಮೂರನೇ ಸ್ಥಾನ ಸ್ಟೀವ್ ಸ್ಮಿತ್.

## ಇಸ್ರೋದಿಂದ ಚಂದ್ರಯಾನ 3 ಯೋಜನೆ



* ಭಾರತದ ಹೆಮ್ಮೆ ಇಸ್ರೋ ಸಂಸ್ಥೆಯು ಈ ವರ್ಷ ಚಂದ್ರಯಾನ 3 ಯೋಜನೆಯಡಿ ಚಂದ್ರನತ್ತ ನೌಕೆ ಹಾರಿಸಲು ನಿರ್ಧರಿಸಿದೆ. ಈ ಯೋಜನೆಯಡಿ ಲ್ಯಾಂಡರ್ ಮತ್ತು ರೋವರ್‌ಗಳನ್ನು ಒಳಗೊಂಡ ಬಾಹ್ಯಾಕಾಶ ನೌಕೆಯು ಚಂದ್ರನತ್ತ ಹಾರಲಿದೆ ಎಂದು ಇಸ್ರೋ ಮಾಹಿತಿಯನ್ನು ನೀಡಿದೆ.
* ಭಾರತ ದೇಶದ ಮೊಟ್ಟಮೊದಲ ಮಾನವ ಸಹಿತ ಗಗನಯಾನ ಯೋಜನೆಗೆ ತಯಾರಿ ಬರದಿಂದ ಸಾಗಿದ್ದು, 3 ಭಾರತೀಯರನ್ನು ಆಯ್ಕೆ ಮಾಡಿ ಈಗಾಗಲೇ ತರಬೇತಿ ನೀಡಲಾಗುತ್ತಿದೆ. ಈ ಗಗನಯಾನಿಗಳು 5 7 ದಿನಗಳ ಕಾಲ ಬಾಹ್ಯಾಕಾಶದಲ್ಲೇ ಇರುತ್ತಾರೆ ಎಂದು ತಿಳಿದುಬಂದಿದೆ.
* ಈ ಮುಂಚೆ ಬಾಹ್ಯಾಕಾಶಕ್ಕೆ ಮಾನವನನ್ನು ಕಳುಹಿಸಿದ ದೇಶಗಳೆಂದರೆ ಅಮೆರಿಕ, ರಷ್ಯಾ ಮತ್ತು ಚೀನಾ ಈ ಸಾಲಿನಲ್ಲಿ ಭಾರತವು ಶೀಘ್ರ ಸ್ಥಾನ ಪಡೆಯಲಿದೆ.
* 2021ರ ಅಂತ್ಯಕ್ಕೆ ಈ ಗಗನ ಯಾನವನ್ನು ಲಾಂಚ್ ಮಾಡುವ ಸಾಧ್ಯತೆ ಇದೆ.

## ಭಾರತದ ಹಾಕಿ ಆಟಗಾರ ಒಲಿಂಪಿಕ್ಸ್ ಪದಕ ವಿಜೇತ ಮೈಕಲ್ ಕಿಂಡೋ ನಿಧನ



* ಒಡಿಶಾ ರಾಜ್ಯದ ಮೂಲದ ಹಾಕಿ ಆಟಗಾರ ಮೈಕಲ್ ಕಿಂಡೋ ತಮ್ಮ 73ನೇ ವಯಸ್ಸಿನಲ್ಲಿ ಡಿಸೆಂಬರ್ 31ರಂದು ವಿಧಿವಶರಾಗಿದ್ದಾರೆ.
* ಭಾರತದ ಹಾಕಿ ತಂಡದ ಆಟಗಾರ ಮೈಕಲ್ ಕಿಂಡೋ ರವರು 1972ರಲ್ಲಿ ನಡೆದ ಒಲಿಂಪಿಕ್ಸ್ ನಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದರು.
* 1975ರ ಮಲೇಶಿಯಾದ ಕೌಲಲಾಂಪುರದಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ಹಾಕಿ ವಿಶ್ವಕಪ್‌ನಲ್ಲಿ ಇವರು ಆಟವಾಡಿದ್ದರು ಮತ್ತು ಭಾರತವು ವಿಶ್ವಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

# 03-01-2021

## ಮೇಕ್ ಇನ್ ಇಂಡಿಯಾ ಅಭಿಯಾನದಡಿ ಕೇಂದ್ರ ಸರ್ಕಾರದಿಂದ 12 ತಿಂಗಳಲ್ಲಿ 36 ಸಾವಿರ ವೆಂಟಿಲೇಟರ್ ಮತ್ತು ಪಿಪಿಇ ಕಿಟ್‌ಗಳ ಪೂರೈಕೆ



* ಆತ್ಮ ನಿರ್ಭರ್ ಯೋಜನೆ ಅಡಿಯಲ್ಲಿ ತಯಾರಾದ 36,433 ಮೇಕ್ ಇನ್ ಇಂಡಿಯಾ ವೆಂಟಿಲೇಟರ್ ಗಳನ್ನೂ ದೇಶದ ಸರಕಾರಿ ಆಸ್ಪತ್ರೆಗಳಿಗೆ ಪೂರೈಕೆಮಾಡಲಾಗಿದೆ, ಪ್ರಸ್ತುತ ಮೇಕ್ ಇನ್ ಇಂಡಿಯಾ ಅಡಿಯಲ್ಲಿ ತಯಾರಾದ ವೆಂಟಿಲೇಟರ್‌ಗಳ ಬೆಲೆ 2 ರಿಂದ 10 ಲಕ್ಷ.ರೂ ಇರುವುದಾಗಿ ಆರೋಗ್ಯ ಸಚಿವಾಲಯವು ಮಾಹಿತಿಯನ್ನು ನೀಡಿದೆ.
* ಪ್ರಸ್ತುತ ಭಾರತ ದೇಶವು ಪ್ರತಿದಿನ 10 ಲಕ್ಷಕ್ಕೂ ಹೆಚ್ಚು ಪಿಪಿಇ ಕಿಟ್‌ಗಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದ್ದು, ಅಲ್ಲದೆ ಬೇರೆ ಬೇರೆ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ, ಹಾಗೂ ಪಿಪಿಇ ಕಿಟ್‌ಗಳ ತಯಾರಿಕೆಯಲ್ಲಿ ಎರಡನೆಯ ದೊಡ್ಡ ದೇಶವಾಗಿದೆ.

## ಸಿಯಾಚಿನ್ ಸಮೀಕ್ಷೆ ನಡೆಸಿದ ಅಧಿಕಾರಿ ಕರ್ನಲ್ ನರೇಂದ್ರ ಬುಲ್ ಕುಮಾರ್ ಇನ್ನಿಲ್ಲ



* ನಿವೃತ್ತ ಅಧಿಕಾರಿ ಕರ್ನಲ್ ನರೇಂದ್ರ ಬುಲ್ ಕುಮಾರ್ ರವರು ಇತ್ತೀಚಿಗೆ ತಮ್ಮ 87ನೇ ವಯಸ್ಸಿನಲ್ಲಿ ವಿಧಿವಶರಾದರು. ಇವರು ಸಿಯಾಚಿನ್ ಹಿಮನದಿಯ ಸಮೀಕ್ಷೆ ನಡೆಸಿ ಭಾರತೀಯ ಸೈನ್ಯಕ್ಕೆ ಸಹಾಯವನ್ನು ಮಾಡಿದ್ದರು.
* ಕರ್ನಲ್ ನರೇಂದ್ರ ಬುಲ್ ಕುಮಾರ್ ರವರು ಏಪ್ರಿಲ್ 13, 1984 ರಂದು ಸಿಯಾಚಿನ್‌ನ ಕಾರ್ಯತಂತ್ರದ ಮಾಹಿತಿಯನ್ನು ಪ್ರಧಾನಿ ಇಂದಿರಾ ಗಾಂಧಿಯವರಿಗೆ ನೀಡಿದ್ದರು, ಇದರಿಂದ ಪ್ರೇರಣೆಗೊಂಡ ಪ್ರಧಾನಿಯವರು, 'ಆಪರೇಷನ್ ಮೇಘದೂತ್' ಕಾರ್ಯಾಚರಣೆಯ ಮೂಲಕ ಪಾಕಿಸ್ತಾನ ಸೈನ್ಯವನ್ನು ಸೋಲಿಸಿ ಸಿಯಾಚಿನ್ ಹಿಮನದಿಯನ್ನು ಭಾರತದ ವಶಕ್ಕೆ ಪಡೆದುಕೊಂಡರು.

## ಕೇಂದ್ರದ ಮಾಜಿ ಗೃಹ ಸಚಿವ ಬುಟಾ ಸಿಂಗ್ ವಿಧಿವಶ



* ಕೇಂದ್ರದ ಮಾಜಿ ಗೃಹ ಸಚಿವ ಮತ್ತು ಮಾಜಿ ಸಂಸದರಾದ ಬುಟಾ ಸಿಂಗ್ ರವರು ತಮ್ಮ 86ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ. ಇವರು 21 ಮಾರ್ಚ್ 1934 ಪಂಜಾಬ್ ರಾಜ್ಯದ, ಜಲಂಧರ್ ಜಿಲ್ಲೆಯ, ಮುಸ್ತಫಾಪುರ ಎಂಬಲ್ಲಿ ಜನಿಸಿದ್ದರು.
* ಬುಟಾ ಸಿಂಗ್ ರವರು ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಇದ್ದಾಗ ಇಂದಿರಾ ಗಾಂಧಿ ಸಚಿವ ಸಂಪುಟದಲ್ಲಿ ಸೇವೆ ಸಲ್ಲಿಸಿದ ಹಿರಿಯ ಕಾಂಗ್ರೆಸ್ ನಾಯಕ ಎಂದು ಗುರುತಿಸಿಕೊಂಡಿದ್ದರು, ಜೊತೆಗೆ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗದ ನಾಯಕರಾಗಿದ್ದರು, ಮತ್ತು ಬಿಹಾರ ಮತ್ತು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದ ಅನುಭವವನ್ನು ಇವರು ಹೊಂದಿದ್ದರು.

## ಸೇನೆಯ ಉಪ ಮುಖ್ಯಸ್ಥರಾಗಿ ಲೆ. ಜನರಲ್ ಶಂತನು ದಯಾಳ್ ಅಧಿಕಾರ ಸ್ವೀಕಾರ



* ಲೆಫ್ಟಿನೆಂಟ್ ಜನರಲ್ ಶಂತನು ದಯಾಳ್ ರವರು ಜನವರಿ 1 ರಂದು ಭಾರತೀಯ ಸೇನೆಯ ನೂತನ ಸೇನಾ ಉಪ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದರು. ಪ್ರಸ್ತುತ ಇವರು ತೇಜ್ ಪುರ್ ಮೂಲದ 4 ಕಾರ್ಪ್ಸ್ ನ ಕಾರ್ಪ್ಸ್ ಕಮಾಂಡರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಮೊದಲು ಸೇನೆಯ ಉಪ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಎಸ್ ಎಸ್ ಹಸಬ್ನಿಸ್ ಅವರು ಕಾರ್ಯ ನಿರ್ವಹಿಸುತ್ತಿದ್ದರು.

## 8ನೇ 'ಲ್ಯಾಂಡಿಂಗ್ ಕ್ರಾಫ್ಟ್ ಯುಟಿಲಿಟಿ' ಯುದ್ಧನೌಕೆ ಭಾರತೀಯ ನೌಕಾಪಡೆಗೆ ಸೇರ್ಪಡೆ



* ಇತೀಚಿಗೆ ಭಾರತೀಯ ನೌಕಾಪಡೆಗೆ 8ನೇ ಲ್ಯಾಂಡಿಂಗ್ ಕ್ರಾಫ್ಟ್ ಯುಟಿಲಿಟಿ ನೌಕೆ ಸೇರ್ಪಡೆಗೊಂಡಿತು. ಈ ಯುದ್ಧನೌಕೆಯು ರಕ್ಷಣಾ ಕಾರ್ಯಾಚರಣೆ ನಡೆಸಲು ಸಹಕರಿಸುವುದರ ಜೊತೆಗೆ ಇದರಿಂದ ನೌಕಾಪಡೆಗೆ ಬಲ ಹೆಚ್ಚಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.
* ಈ ನೌಕೆಯಲ್ಲಿನ ಶೇ 90ರಷ್ಟು ಬಿಡಿ ಭಾಗಗಳು ಭಾರತದಲ್ಲಿ ತಯಾರಿಸಲಾಗಿದೆ, ಮತ್ತು ಈ ನೌಕೆಯಲ್ಲಿ 216 ಜನ ಇರಲು ಸ್ಥಳಅವಕಾಶ ಕಲ್ಪಿಸಲಾಗಿದೆ. ಲ್ಯಾಂಡಿಂಗ್ ಕಾರ್ಯಾಚರಣೆ ಸಮಯದಲ್ಲಿ ರಕ್ಷಣೆಗೆ ಅನುಕೂಲವಾಗಲೆಂದು ಆತ್ಮ ನಿರ್ಭರ್ ಯೋಜನೆಯಡಿ ನಿರ್ಮಿತವಾದ ಎರಡು ಸಿಆರ್‌ಎನ್ 91 ಗನ್ ಗಳನ್ನು ಈ ನೌಕೆಯಲ್ಲಿ ಅಳವಡಿಸಲಾಗಿದೆ.
* ಸರ್ಕಾರಿ ರಕ್ಷಣಾ ವಲಯದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆಯಂಡ್ ಎಂಜಿನಿಯರ್ಸ್ ಭಾರತೀಯ ನೌಕಾಪಡೆಗೆ ಯುದ್ಧನೌಕೆಯಾದ 8ನೇ ಲ್ಯಾಂಡಿಂಗ್ ಕ್ರಾಫ್ಟ್ ಯುಟಿಲಿಟಿ ನೌಕೆಯನ್ನು ನಿರ್ಮಿಸಿದೆ, ಮತ್ತು ಈ ಯುದ್ಧನೌಕೆಯನ್ನು ಅಂಡಮಾನ್ ನಿಕೊಬಾರ್ ದ್ವೀಪದಲ್ಲಿ ನಿಯೋಜನೆ ಮಾಡಲಾಗುವದು ಎಂದು ನೌಕಾಪಡೆ ಮಾಹಿತಿಯನ್ನು ನೀಡಿದೆ.

## ಭಾರತೀಯ ಮತ್ತು ಪಾಕಿಸ್ತಾನ ಕೈದಿಗಳ ವಿವರ ವಿನಿಮಯ



* ಭಾರತೀಯ ಮತ್ತು ಪಾಕಿಸ್ತಾನ ದೇಶಗಳು ಕೈದಿಗಳ ವಿವರವನ್ನು ಪರಸ್ಪರ ವಿನಿಮಯ ಮಾಡಿಕೊಂಡಿವೆ. ಎರಡು ದೇಶಗಳು 21 ಮೇ 2008ರಲ್ಲಿ ಕೈದಿಗಳ ವಿವರವನ್ನು ವಿನಿಮಯ ಮಾಡಿಕೊಳ್ಳಲು ಮಾಡಿಕೊಂಡ ಒಪ್ಪಂದ ಅನುಸಾರ ಈ ವಿನಿಮಯ ನಡೆದಿದೆ.
* ಈ ಒಪ್ಪಂದದ ಪ್ರಕಾರ ಪ್ರತಿ ವರ್ಷ ಜನವರಿ 1 ಮತ್ತು ಜುಲೈ 1ರಂದು ಕೈದಿಗಳ ವಿವರಗಳನ್ನು ಹಂಚಿಕೊಳ್ಳಲಾಗುತ್ತದೆ.
* ಪಾಕಿಸ್ತಾನದ ಜೈಲುಗಳಲ್ಲಿರುವ 319 ಭಾರತೀಯ (49 ನಾಗರಿಕರು ಮತ್ತು 270 ಮೀನುಗಾರರು) ಕೈದಿಗಳ ಪಟ್ಟಿಯನ್ನು ಪಾಕಿಸ್ತಾನವು ಭಾರತದ ಹೈಕಮಿಷನ್‌ಗೆ ಸಲ್ಲಿಸಿದೆ.
* ಭಾರತದ ಜೈಲುಗಳಲ್ಲಿರುವ 340 ಪಾಕಿಸ್ತಾನದ (263 ನಾಗರಿಕರು ಮತ್ತು 77 ಮೀನುಗಾರರು) ಕೈದಿಗಳ ಪಟ್ಟಿಯನ್ನು ಭಾರತವು ಪಾಕಿಸ್ತಾನಕ್ಕೆ ನೀಡಿದೆ.

## ಲಡಾಖ್‌ಗೆ ಪಂಗೊಂಗ್ ತ್ಸೋ ಸರೋವರಕ್ಕೆ ವೇಗದ 12 ಗಸ್ತು ದೋಣಿ



* ಭಾರತೀಯ ಸೇನೆಯು ಗೋವಾ ಶಿಪ್‌ಯಾರ್ಡ್‌ನೊಂದಿಗೆ 12 ವೇಗದ ಗಸ್ತು ದೋಣಿಗಳನ್ನು ಖರೀದಿಸಲು ಶುಕ್ರವಾರದಂದು ಒಪ್ಪಂದ ಮಾಡಿಕೊಂಡಿದೆ.
* ಈ ಗಸ್ತು ದೋಣಿಗಳನ್ನೂ ಮೇ 2021ರ ವೇಳೆಗೆ ಲಡಾಖ್ ಎತ್ತರದ ಪ್ರದೇಶದಲ್ಲಿ ನಿಯೋಜಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ. ಲಡಾಖ್ ಹತ್ತಿರದ ಪಂಗೊಂಗ್ ತ್ಸೋ ಸರೋವರದಲ್ಲಿ ರಕ್ಷಣಾ ಕಾರ್ಯಾಚರಣೆ ಸುಧಾರಿಸಲು ಗಸ್ತು ದೋಣಿಗಳು ಬಳಸಲಾಗುತ್ತದೆ ಎಂದು ತಿಳಿಸಿದ್ದಾರೆ.

# 04-01-2021

## ಪ್ರಧಾನಿ ಮೋದಿ ಲೈಟ್ ಹೌಸ್ ಯೋಜನೆಗೆ ಚಾಲನೆ




* ಪ್ರಧಾನಿ ನರೇಂದ್ರ ಮೋದಿ ಅವರು ಗ್ಲೋಬಲ್ ಹೌಸಿಂಗ್ ಟೆಕ್ನಾಲಜಿ ಚಾಲೆಂಜ್ ಅಡಿಯಲ್ಲಿ ಲೈಟ್ ಹೌಸ್ ಯೋಜನೆಯನ್ನು ಇತ್ತೀಚಿಗೆ ವರ್ಚುವಲ್ ಸಭೆಯ ಮೂಲಕ 6 ನಗರದಲ್ಲಿ ಇಂದೋರ್, ರಾಜ್‌ಕೋಟ್, ಚೆನ್ನೈ, ರಾಂಚಿ, ಅಗರ್ತಲಾ ಮತ್ತು ಲಕ್ನೋ ರಾಜ್ಯಗಳಿಗೆ ಚಾಲನೆ ನೀಡಿದರು.
* ಈ ಸಭೆಯಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಭಾರತದ "ಆಶಾ ಇಂಡಿಯಾ" ವಿಜೇತರನ್ನು ಘೋಷಿಸಿದರು, ಅಲ್ಲದೆ ಪ್ರಧಾನ ಮಂತ್ರಿ ಆವಾಸ್ ಯೋಜನೆ ನಗರ ಮಿಷನ್ ನ ವಾರ್ಷಿಕ ಪ್ರಶಸ್ತಿಗಳನ್ನು ಅರ್ಹರಿಗೆ ಪ್ರಧಾನ ಮಾಡಿದರು.

## ಆತ್ಮನಿರ್ಭರ ಯೋಜನೆ ಅಡಿಯ ಕೋವಿಡ್ ಲಸಿಕೆಗೆ ಪ್ರಧಾನಿ ಮೋದಿ ಅನುಮತಿ



* ಭಾರತ ದೇಶದ ಆತ್ಮನಿರ್ಭರ ಯೋಜನೆ ಅಡಿಯಲ್ಲಿ ತಯಾರಿಸಿದ ಸ್ವದೇಶಿ ನಿರ್ಮಿತ 2 ಕೊವಿಡ್ ಲಸಿಕೆಗಳು ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾದಿಂದ ಅನುಮತಿ ಪಡೆದಿವೆ.
* ಆಕ್ಸ್ ಫರ್ಡ್ ಆಸ್ಟ್ರಾಜನಿಕಾ ಕೊವಿಡ್ ಲಸಿಕೆ ಹಾಗೂ ಹೈದರಾಬಾದ್ ನ ಭಾರತ್ ಬಯೋಟೆಕ್ ಸಂಸ್ಥೆಯ ಕೋವ್ಯಾಕ್ಸಿನ್ ಈ ಕೋವಿಡ ಲಸಿಕೆಗಳ ಬಳಕೆಗೆ ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾದಿಂದ ಅನುಮತಿ ಪಡೆದಿದ್ದು, ಆದರೆ ಈ ಕೋವಿಡ್ ಲಸಿಕೆಗಳನ್ನು ತುರ್ತು ಸಂದರ್ಭಗಳಲ್ಲಿ ಮಾತ್ರ ಬಳಕೆ ಮಾಡಬಹುದು ಎಂದು ಡಿಸಿಜಿಐ ಮಾಹಿತಿಯನ್ನು ನೀಡಿದೆ.

## ಅಮೆರಿಕದ ಸಂಸ್ಥೆಯಿಂದ ಜಾಗತಿಕ ಜನಪ್ರಿಯತೆ ಪಟ್ಟಿ ಬಿಡುಗಡೆ ಮೋದಿ ನಂ.1



* ಇತ್ತೀಚಿಗೆ ಜಗತ್ತಿನ ಅತೀ ಜನಪ್ರಿಯತೆ ರಾಷ್ಟ್ರ ನಾಯಕರ ಪಟ್ಟಿಯನ್ನು ಅಮೆರಿಕದ ಮಾರುಕಟ್ಟೆ ಅಧ್ಯಯನ ಹಾಗೂ ಡೇಟಾ ಇಂಟೆಲಿಜೆನ್ಸ್ ಸಂಸ್ಥೆ ಮಾರ್ನಿಂಗ್ ಕನ್ಸಲ್ಟ್, ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ 13 ರಾಷ್ಟ್ರಗಳ ನಾಯಕರ ಪಟ್ಟಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮೊದಲ ಸ್ಥಾನದಲ್ಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಜನಪ್ರಿಯತೆ ರಾಷ್ಟ್ರ ನಾಯಕ ಎಂಬ ವಿಷಯವನ್ನು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಟ್ವಿಟರ್‌ನ ಮೂಲಕ ಹೇಳಿದ್ದಾರೆ.

## ರಾಜ್ಯದಲ್ಲಿ 24X7 ಅಂಗಡಿ, ಮಳಿಗೆ ಸೇವೆ : ರಾಜ್ಯಸರಕಾರ ಮಹತ್ವದ ಆದೇಶ




* ಕರ್ನಾಟಕ ರಾಜ್ಯದಲ್ಲಿ ಇನ್ನು ಮುಂದೆ ವರ್ಷದ 365 ದಿನ ಹಾಗೂ ದಿನದ 24 ಗಂಟೆಯ ಕಾಲ ಅಂಗಡಿ, ವಾಣಿಜ್ಯ ಮಳಿಗೆಗಳು ತೆರೆಯಲು ರಾಜ್ಯ ಸರಕಾರ ಮಹತ್ವದ ಆದೇಶ ಹೊರಡಿಸಿದೆ. ಇದರಿಂದ ರಾಜ್ಯದಲ್ಲಿನ ನಿರುದ್ಯೋಗ ಸಮಸ್ಯೆ ಸುಧಾರಿಸಬಹುದು ಮತ್ತು ಅದರ ಜೊತೆಗೆ ವಾಣಿಜ್ಯ ಚಟುವಟಿಕೆಗಳನ್ನು ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ.
* ಕಾರ್ಮಿಕ ಇಲಾಖೆ ಅಧಿಸೂಚನೆ ಪ್ರಕಾರ 10ಕ್ಕಿಂತ ಹೆಚ್ಚು ಕೆಲಸಗಾರರನ್ನು ಹೊಂದಿರುವ ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳು ದಿನದ 24 ಗಂಟೆಯೂ ತೆರೆಯಲು ಅವಕಾಶ ನೀಡಲಾಗಿದ್ದು, ಮತ್ತು ಈ ಅಧಿಸೂಚನೆಯು ಮುಂದಿನ 3 ವರ್ಷಗಳಿಗೆ ಅನ್ವಯವಾಗಲಿದೆ ಎಂದು ಕಾರ್ಮಿಕ ಇಲಾಖೆ ಮಾಹಿತಿ ನೀಡಿದೆ.
* 1963ರ ಸಂಬಳ ಮತ್ತು ಭತ್ಯೆ ಕಾಯ್ದೆ ಅಡಿಯಲ್ಲಿ ಕಾರ್ಮಿಕರ ಸಂಬಳ ಮತ್ತು ಹೆಚ್ಚಿನ ಸಮಯದ ಭತ್ಯೆಯನ್ನು ನೀಡಬೇಕು ಎಂದು ಕಾರ್ಮಿಕ ಇಲಾಖೆ ಹೇಳಿದೆ.

## ಶಿವಣ್ಣ, ಹಾಗೂ ರಕ್ಷಿತ್ ಶೆಟ್ಟಿ, ರಶ್ಮಿಕಾ ಮಂದಣ್ಣಗೆ 2020ನೇ ಸಾಲಿನ ದಾದಾಸಾಹೇಬ್ ಫಾಲ್ಕೆ ದಕ್ಷಿಣ ಪ್ರಶಸ್ತಿ



* 2020ನೇ ಸಾಲಿನ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ದಕ್ಷಿಣ (ಸೌತ್) ಪ್ರಶಸ್ತಿ ಘೋಷಣೆ ಮಾಡಲಾಗಿದ್ದು, ಕನ್ನಡ ಚಿತ್ರರಂಗದ ಸ್ಟಾರ್ ನಟ ಶಿವರಾಜ್ ಕುಮಾರ್, ರಕ್ಷಿತ್ ಶೆಟ್ಟಿ ಅತ್ಯುತ್ತಮ ನಟ ಪ್ರಶಸ್ತಿ ಹಾಗೂ ರಶ್ಮಿಕಾ ಮಂದಣ್ಣಗೆ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಘೋಷಿಸಲಾಗಿದೆ.
* ಈ ಪ್ರತಿಷ್ಠಿತ ಪ್ರಶಸ್ತಿಯನ್ನು ತಮಿಳು, ಮಲಯಾಳಂ, ತೆಲುಗು ಹಾಗೂ ಕನ್ನಡ ಈ ನಾಲ್ಕು ಭಾಷೆಗಳಲ್ಲಿನ ಚಿತ್ರರಂಗದಲ್ಲಿನ ಉತ್ತಮ ನಟ, ನಟಿಯರನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

# 05-01-2021

## ಮರಣದಂಡನೆ ಶಿಕ್ಷೆ ನಿಲ್ಲಿಸಿದ ಕಜಕಸ್ತಾನ




* ಕಜಕಸ್ತಾನ ರಾಷ್ಟ್ರದಲ್ಲಿ ಮರಣದಂಡನೆ ಶಿಕ್ಷೆಯನ್ನು ರದ್ದುಮಾಡಲಾಗಿರುವುದಾಗಿ ಇಲ್ಲಿನ ರಾಷ್ಟ್ರಪತಿಯವರು ತಮ್ಮ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಮಾಡಿದ್ದಾರೆ.
* 2003 ರಿಂದ ಕಜಕಸ್ತಾನದಲ್ಲಿ ಮರಣದಂಡನೆಯನ್ನು ರದ್ದುಮಾಡಲಾಗಿತ್ತು, ಆದರೂ ಭಯೋತ್ಪಾದಕ ಕೃತ್ಯ ಮತ್ತು ಗಂಭೀರ ಅಪರಾಧ ಮಾಡಿದ ವ್ಯಕ್ತಿಗಳಿಗೆ ಈ ಶಿಕ್ಷೆಯನ್ನು ನ್ಯಾಯಾಲಯಗಳು ನೀಡುತ್ತಿದ್ದವು, ಪ್ರಸ್ತುತ ಈಗ ಸಂಪೂರ್ಣ ಮರಣದಂಡನೆ ರದ್ದು ಮಾಡಲು ಕಜಕಸ್ತಾನ ರಾಷ್ಟ್ರಪತಿ "ಕಾಸಿಮ ಜೋಮಾರ್ಟ್" ಟೋಕಾಯೆವ್ ಅವರು ಒಪ್ಪಿಗೆ ನೀಡಿ ಸಹಿ ಮಾಡಿದ್ದಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

## ದೇಶದ ಎಲ್ಲ ಜನರಿಗೂ ಉಚಿತ ಕೊರೋನಾ ಲಸಿಕೆ : ಕೇಂದ್ರ ಆರೋಗ್ಯ ಸಚಿವ




* ಇತ್ತೀಚಿಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್ ಇದೀಗ ದೇಶಾದ್ಯಂತ ಕೋವಿಡ್ ಡ್ರೈ ರನ್ ಪ್ರಾರಂಭವಾಗಿದೆ, ಕೊರೋನಾ ಲಸಿಕೆಯನ್ನು ದೇಶದ ಎಲ್ಲ ಜನರಿಗೂ ಉಚಿತವಾಗಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ. ಈ ಲಸಿಕೆಗೆ ಯಾವುದೇ ತರಹದ ಶುಲ್ಕ ಪಾವತಿ ಇರುವದಿಲ್ಲ ಹಾಗೂ ದೇಶದ ಎಲ್ಲ ಜನರಿಗೂ ಉಚಿತವಾಗಿ ನೀಡಲು ನಿರ್ಧರಿಸಿದೆ ಎಂದು ಹೇಳಿದ್ದಾರೆ.

## 2020ನೇ ವರ್ಷದ ಜಾನಪದ ಅಕಾಡೆಮಿ ಪ್ರಶಸ್ತಿ ಪ್ರಕಟಣೆ




* 2020ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿಯು ಪ್ರಶಸ್ತಿಯನ್ನು ಘೋಷಣೆಮಾಡಲಾಗಿದ್ದು, ರಾಜ್ಯದ 30 ಜಿಲ್ಲೆಗಳಿಂದ ಒಬ್ಬ ಜಾನಪದ ಕಲಾವಿದ ಮತ್ತು ಇಬ್ಬರು ಜಾನಪದ ತಜ್ಞರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಮಾತಾ ಬಿ. ಮಂಜಮ್ಮ ಜೋಗತಿ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.
* ಕರ್ನಾಟಕ ಜಾನಪದ ಅಕಾಡೆಮಿಯು ಪ್ರಶಸ್ತಿಯನ್ನು ಪಡೆದ ಜಾನಪದ ಕಲಾವಿದರಿಗೆ 25 ಸಾವಿರ ರೂ. ಹಾಗೂ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುತ್ತದೆ, ಮತ್ತು ಜಾನಪದ ತಜ್ಞ ಪ್ರಶಸ್ತಿ ಲಭಿಸಿದವರಿಗೆ 50 ಸಾವಿರ ರೂ. ಹಾಗೂ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುತ್ತದೆ, ಎಂದು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಮಾತಾ ಬಿ.ಮಂಜಮ್ಮ ಜೋಗತಿ ಅವರು ಮಾಹಿತಿಯನ್ನು ನೀಡಿದ್ದಾರೆ.

## ಶಾಲಾ ವಿದ್ಯಾರ್ಥಿನಿಯರಿಗೆ ಪ್ರತಿದಿನ 100 ರೂ ಪ್ರೋತ್ಸಾಹ ಧನ = ಅಸ್ಸಾಂ ಸರ್ಕಾರ



* ಅಸ್ಸಾಂ ರಾಜ್ಯವು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಲು ಹೊಸ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಿಂದ ಶಾಲೆಗೆ ಹೋಗುವ ಪ್ರತಿ ವಿದ್ಯಾರ್ಥಿನಿಯರಿಗೆ ಪ್ರತಿದಿನ 100 ರೂ. ಪ್ರೋತ್ಸಾಹ ಧನ ನೀಡುವದಾಗಿ ಅಸ್ಸಾಂ ರಾಜ್ಯ ಸರ್ಕಾರವು ನೂತನ ಯೋಜನೆಯನ್ನು ರೂಪಿಸಿದೆ ಎಂದು ಅಸ್ಸಾಂ ರಾಜ್ಯದ ಶಿಕ್ಷಣ ಸಚಿವರಾದ ಹಿಮಂತ್ ಬಿಸ್ವ ಶರ್ಮಾ ಅವರು ಮಾಹಿತಿಯನ್ನು ನೀಡಿದ್ದಾರೆ.
* ಅಸ್ಸಾಂ ಸರ್ಕಾರವು ಪ್ರಗ್ಯಾನ್ ಭಾರತ ಯೋಜನೆ ಅಡಿಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ತೇರ್ಗಡೆಹೊಂದಿದವರಿಗೆ ಸ್ಕೂಟರ್ ನೀಡಲಾಗುತ್ತದೆ, ಇದರ ಜೊತೆಯಲ್ಲಿ ಪದವಿ ವಿದ್ಯಾರ್ಥಿಗಳಿಗೆ1500 ರೂ. ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 2000 ರೂ. ಗಳನ್ನೂ ಪಠ್ಯಪುಸ್ತಕ ಖರೀದಿಸಲು ಅಸ್ಸಾಂ ಸರ್ಕಾರವು ಹಣ ನೀಡುತ್ತದೆ ಎಂದು ಮಾಹಿತಿಯನ್ನು ನೀಡಲಾಗಿದೆ.

## ಕೇಂದ್ರದಿಂದ ಕರ್ನಾಟಕಕ್ಕೆ GST ಹಣ ಬಿಡುಗಡೆ




* ಕೇಂದ್ರ ಸರ್ಕಾರವು ಕರ್ನಾಟಕಕ್ಕೆ GST ಹಣವನ್ನು ಬಿಡುಗಡೆಗೊಳಿಸಿದ್ದು, ಕರ್ನಾಟಕ ರಾಜ್ಯಕ್ಕೆ ಬರಬೇಕಾದ GST ಪರಿಹಾರದ ಹಣದಲ್ಲಿ 7694 ಕೋಟಿ ರೂ.ಗಳನ್ನೂ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಮಾಹಿತಿಯನ್ನು ನೀಡಿದೆ.
* ಕರ್ನಾಟಕ ರಾಜ್ಯಕ್ಕೆ 13 ಸಾವಿರ ಕೋಟಿ ರೂ. GST ಪರಿಹಾರದ ಹಣ ಬರಬೇಕಾಗಿದೆ, ಆದರೆ ಪ್ರಸ್ತುತ ಕೇಂದ್ರ ಸರ್ಕಾರವು 7,694 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದೆ.

# 06-01-2021

## ಪ್ರಧಾನಿ ಮೋದಿಯಿಂದ ಕೊಚ್ಚಿ ಮಂಗಳೂರು ನ್ಯಾಚುರಲ್ ಗ್ಯಾಸ್ ಪೈಪ್ ಲೈನ್ ಉದ್ಘಾಟಣೆ




* GAIL ಇಂಡಿಯಾ ಲಿಮಿಟೆಡ್ ವತಿಯಿಂದ ನಿರ್ಮಿತವಾದ, ಕೇರಳದ ಕೊಚ್ಚಿಯಿಂದ ಕರ್ನಾಟಕದ ಮಂಗಳೂರಿಗೆ ನೈಸರ್ಗಿಕ ಅನಿಲ ಪೈಪ್‌ಲೈನ್ ನನ್ನು ಪ್ರಧಾನಿ ನರೇಂದ್ರ ಮೋದಿಯವರು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಣೆಮಾಡಿದರು.
* 450 ಕಿ.ಮೀ ದೂರದ ನ್ಯಾಚುರಲ್ ಗ್ಯಾಸ್ ಪೈಪ್ ಲೈನ್ ನಿರ್ಮಾಣದ ಕಾರ್ಯವು 2009ರಲ್ಲಿ ಪ್ರಾರಂಭವಾಗಿತ್ತು. ಪ್ರಸ್ತುತ ಇದೀಗ ಸರಿ ಸುಮಾರು 3,000 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದೆ.
* ಕೊಚ್ಚಿಯಿಂದ ಮಂಗಳೂರಿನವರೆಗೂ ಪ್ರತಿ ದಿನ 12 ಮಿಲಿಯನ್ ಮೆಟ್ರಿಕ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ ನೈಸರ್ಗಿಕ ಅನಿಲವನ್ನು ಈ ಗ್ಯಾಸ್ ಪೈಪ್ ಲೈನ್ ಮೂಲಕ ಸಾಗಿಸಲಾಗುತ್ತದೆ.

## ಭಾರತದಿಂದ ವಿಯೆಟ್ನಾಂ ದೇಶಕ್ಕೆ ಅಕ್ಕಿ ರಫ್ತು ಆರಂಭ



* ಇತ್ತೀಚೀನ ದಿನಗಳಲ್ಲಿ ವಿಯೆಟ್ನಾಂ ದೇಶವು ಭಾರತದಿಂದ ಆಹಾರ ಪದಾರ್ಥಗಳನ್ನೂ, ಹಾಗೂ ಅಕ್ಕಿಯನ್ನು ಖರೀದಿಸಲು ಶುರುಮಾಡಿದೆ.
* ಪ್ರಸ್ತುತ ಅಕ್ಕಿಯನ್ನು ರಫ್ತು ಮಾಡುವ ವಿಶ್ವದ ಮೂರನೇ ಅತಿ ದೊಡ್ಡ ದೇಶ ವಿಯೆಟ್ನಾಂ ಆದರೂ ಕೂಡ ಭಾರತದಿಂದ ಅಕ್ಕಿ ಆಮದು ಮಾಡಿಕೊಳ್ಳಲು ಆರಂಭಿಸಿದೆ.
* ಪ್ರಸ್ತುತ ಭಾರತವು 2021ರ ಜನವರಿ ಮತ್ತು ಫೆಬ್ರುವರಿಯಲ್ಲಿ ವಿಯೆಟ್ನಾಂಗೆ 70,000 ಟನ್ ತುಂಡರಿಸಿದ ಅಕ್ಕಿಯನ್ನು ರಫ್ತು ಮಾಡಲಿದೆ.
* 2020 ರಲ್ಲಿ ವಿಯೆಟ್ನಾಂನ ಅಕ್ಕಿ ರಫ್ತು 3.5% ರಷ್ಟು ಕುಸಿತ ಕಂಡಿದೆ, ಮತ್ತು ಸಾಂಕ್ರಾಮಿಕ ರೋಗ ಕೋವಿಡ್ 19 ಕಾರಣದಿಂದ ಆಹಾರ ಧಾನ್ಯಗಳ ಬೇಡಿಕೆ ಹೆಚ್ಚಿದ ಕಾರಣ ವಿಯೆಟ್ನಾಂ ಅಕ್ಕಿ ಆಮದುವನ್ನು ಅವಲಂಬಿಸಿಬೇಕಾಗಿದೆ.

## ಗಣರಾಜ್ಯೋತ್ಸವಕ್ಕೆ ಬೋರಿಸ್ ಜಾನ್ಸನ್ ಭಾರತ ಭೇಟಿ ರದ್ದು



* 2021ನೇ ವರ್ಷದ ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಬೇಕಾಗಿದ್ದ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ರವರು, ತಮ್ಮ ಬ್ರಿಟನ್ ರಾಷ್ಟ್ರದಲ್ಲಿ ರೂಪಾಂತರ ವೈರಸ್ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಕಾರಣದಿಂದಾಗಿ ಭಾರತದ ಭೇಟಿಯನ್ನು ರದ್ದುಗೊಳಿಸಿದ್ದಾರೆ.
* ಬ್ರಿಟನ್‌ನಲ್ಲಿ ರೂಪಾಂತರ ವೈರಸ್‌ನ ಹೆಚ್ಚಾಗುತ್ತಿರುವ ಕಾರಣ ಭಾರತಕ್ಕೆ ಭೇಟಿ ಕೊಡುವದನ್ನು ರದ್ದುಗೊಳಿಸಲಾಗಿದೆ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಸ್ವತಃ ತಾವೇ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಹಿತಿಯನ್ನು ನೀಡಿರುವುದಾಗಿ ತಿಳಿದು ಬಂದಿದೆ.

## ಮಿಷನ್ ಅಂತ್ಯೋದಯ 2020 = ಹುಲಕೋಟಿ ಗ್ರಾ.ಪಂ.ಗೆ ಪ್ರಥಮ ಸ್ಥಾನ




* ಗದಗ ತಾಲ್ಲೂಕಿನ ಹುಲಕೋಟಿ ಗ್ರಾಮ ಪಂಚಾಯಿತಿಯು ಮಿಷನ್ ಅಂತ್ಯೋದಯ 2020ರ ರಾಷ್ಟ್ರ ಮಟ್ಟದ ಸಮೀಕ್ಷೆಯ ರ್ಯಾಂಕಿಂಗ್ನಲ್ಲಿ ನಂಬರ್ 1 ಸ್ಥಾನ ಪಡೆದುಕೊಂಡಿದೆ, ಎಂದು ಕೇಂದ್ರ ಗಾಮೀಣಾಭಿವೃದ್ಧಿ ಸಚಿವಾಲಯ ಮಾಹಿತಿಯನ್ನು ನೀಡಿದೆ.
* ಗದಗಿನ ಹುಲಕೋಟಿ ಗ್ರಾಮ ಪಂಚಾಯಿತಿಯು ಗ್ರಾಮೀಣ ಜನರ ಮೂಲಸೌಕರ್ಯ ಅಭಿವೃದ್ಧಿ, ಸಾಕ್ಷರತೆ, ಕೃಷಿ, ಪಶುಸಂಗೋಪನೆ, ಕುಡಿಯುವ ನೀರಿನ ಸೌಕರ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ, ರಸ್ತೆ ಅಭಿವೃದ್ಧಿ, ಈ ಎಲ್ಲ ಅಭಿವೃದ್ಧಿ ಕಾಮಗಾರಿಗಳನ್ನು ಪರಿಗಣಿಸಿ ಈ ಶ್ರೇಣಿ ನೀಡಲಾಗಿದೆ.
* ಈ ಮೊದಲು ಹುಲಕೋಟಿ ಗ್ರಾಮ ಪಂಚಾಯಿತಿಯು ಎರಡು ವರ್ಷಗಳಿಂದ ಐದನೇ ಸ್ಥಾನದಲ್ಲಿತ್ತು, ಪ್ರಸ್ತುತ ಈಗ ಹುಲಕೋಟಿ ಗ್ರಾಮ ಪಂಚಾಯಿತಿ ಮೊದಲನೇ ರ‍್ಯಾಂಕ ಪಡೆದಿದೆ ಎಂದು ಗದಗ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಚ್.ಎಸ್.ಜನಗಿ ಹೇಳಿದ್ದಾರೆ. ಇದರ ಜೊತೆಯಲ್ಲಿ ತೆಲಂಗಾಣದ ರಾಜ್ಯದ 2 ಗ್ರಾಮ ಪಂಚಾಯ್ತಿಗಳು ಕೂಡ ಮೊದಲ ಸ್ಥಾನ ಪಡೆದುಕೊಂಡಿರುವ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

## ರಾಜ್ಯಪಾಲರಿಂದ ಗೋಹತ್ಯೆ ನಿಷೇಧ ಕಾಯ್ದೆ ಜಾರಿ, ಸುಗ್ರೀವಾಜ್ಞೆಗೆ ಸಹಿ



* ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ 2020 ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಗಿತ್ತು, ಆದರೆ ಬಹುಮತ ಇಲ್ಲದ ಕಾರಣ ವಿಧಾನ ಪರಿಷತ್‌ನಲ್ಲಿ ಮಂಡನೆಯಾಗಿರಲಿಲ್ಲ, ಪ್ರಸ್ತುತ ಇದೀಗ ಕರ್ನಾಟಕ ರಾಜ್ಯದ ರಾಜ್ಯಪಾಲ ವಜುಭಾಯಿ ವಾಲಾ ಅವರು ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಸುಗ್ರೀವಾಜ್ಞೆಗೆ ಸಹಿ ಹಾಕಿ ಜಾರಿಮಾಡಿದರು.
* ಗೋಹತ್ಯೆ ನಿಷೇಧ ಕಾಯ್ದೆ ನಿಯಮ ಉಲ್ಲಂಘಿಸಿದರೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತದೆ, ಆದರೆ ಕೃಷಿ ಮತ್ತು ಪಶು ಸಂಗೋಪನೆಗಾಗಿ ಜಾನುವಾರಗಳನ್ನೂ ಸ್ಥಳಾತರಿಸಬಹುದಾಗಿದೆ ಎಂದು ಸುಗ್ರೀವಾಜ್ಞೆಯಲ್ಲಿ ಉಲ್ಲೇಖಿಸಲಾಗಿದೆ.

# 07-01-2021

## ಎನ್‌ಡಿಆರ್‌ಎಫ್‌ಗೆ (NDRF) ಮೊದಲ ಮಹಿಳಾ ತಂಡ ಸೇರ್ಪಡೆ




* ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗೆ (NDRF) ಇದೆ ಮೊದಲ ಬಾರಿ ಮಹಿಳಾ ತಂಡವನ್ನು ಸೇರ್ಪಡೆಮಾಡಲಾಗಿದೆ, ಈ ತಂಡದಲ್ಲಿ ಸುಮಾರು 100ಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ.
* ಮೊದಲ NDRF ಮಹಿಳಾ ತಂಡವನ್ನು ಇತೀಚಿಗೆ ಉತ್ತರ ಪ್ರದೇಶದ ಘರ್ ಮುಕ್ತೇಶ್ವರ ಪಟ್ಟಣದಲ್ಲಿ ಕರ್ತವ್ಯದ ಮೇರೆಗೆ ಕಾರ್ಯ ನಿರ್ವಹಿಸಲು ನಿಯೋಜನೆಮಾಡಲಾಗಿತ್ತು, ಇಲ್ಲಿ ಈ ತಂಡ ಸಮರ್ಥವಾಗಿ ಕಾರ್ಯನಿರ್ವಹಿಸಿದೆ, ಎಂದು NDRFನ ನಿರ್ದೇಶಕ ಜನರಲ್ ಎಸ್.ಎನ್. ಪ್ರಧಾನ್ ಅವರು ಮಾಹಿತಿಯನ್ನು ನೀಡಿದ್ದಾರೆ.

## ಭಾರತ ಇಸ್ರೇಲ್ ಜಂಟಿಯಾಗಿ ಅಭಿವೃದ್ಧಿಪಡಿಸಿದ MRSAM ಕ್ಷಿಪಣಿ ಪ್ರಯೋಗ ಯಶಸ್ವಿ



* ಭಾರತ ಮತ್ತು ಇಸ್ರೇಲ್ ದೇಶ ಜಂಟಿಯಾಗಿ ಅಭಿವೃದ್ಧಿಪಡಿಸಿದ ಎಂಆರ್‌ಎಸ್‌ಎಎಂ ಕ್ಷಿಪಣಿಯನ್ನು ರಕ್ಷಣಾ ವ್ಯವಸ್ಥೆಯಡಿಯಲ್ಲಿ ಪ್ರಯೋಗ ಪರೀಕ್ಷೆಯನ್ನು ಯಶಸ್ವಿಯಾಗಿ ನಡಸಲಾಗಿದೆ.
* ಆಕಾಶದಲ್ಲಿನ ಶತ್ರು ವಿಮಾನಗಳು ಗುರಿ ತಲುಪುವ ಮೊದಲೇ ಹೊಡೆದುರುಳಿಸುವ ಸಾಮಥ್ಯವನ್ನು ಎಆರ್‌ಎಸ್‌ಎಎಂ ಕ್ಷಿಪಣಿ ಹೊಂದಿದೆ, ಮತ್ತು 50 ರಿಂದ 70 ಕಿ.ಮೀ. ದೂರದಲ್ಲಿರುವ ಶತ್ರು ವಿಮಾನವನ್ನು ಪತ್ತೆ ಹಚ್ಚಿ ನಾಶ ಮಾಡಲಿದೆ, ಎಂದು ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್ ಮಾಹಿತಿಯನ್ನು ನೀಡಿದೆ.

## ಭಾರತದ ಮೊದಲ "ಫೈರ್ ಪಾರ್ಕ್" ಒಡಿಶಾ ರಾಜ್ಯದಲ್ಲಿ ಲೋಕಾರ್ಪಣೆ




* ಒಡಿಶಾ ರಾಜ್ಯದಲ್ಲಿ ಭಾರತದ ಮೊದಲ "ಫೈರ್ ಪಾರ್ಕ್" ಗೆ ಇತ್ತೀಚಿಗೆ ಚಾಲನೆ ನೀಡಲಾಯಿತು. ದೇಶದಲ್ಲಿ ಮೊದಲ ಬಾರಿಗೆ ಜನರಲ್ಲಿ ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಈ ಫೈರ್ ಪಾರ್ಕ್ ಅನ್ನು ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ರವರು ಉದ್ಘಾಟನೆ ಮಾಡಿದರು.
* ಈ ಫೈರ್ ಪಾರ್ಕ್ ಅನ್ನು ಒಡಿಶಾ ರಾಜ್ಯದ ಭುವನೇಶ್ವರದ ಒಡಿಶಾ ಅಗ್ನಿ ಶಾಮಕ ಮತ್ತು ವಿಪತ್ತು ಅಕಾಡೆಮಿಯ ಆವರಣದೊಳಗೆ ಸ್ಥಾಪಿಸಲಾಗಿದ್ದು, ಇದರಿಂದ ರಾಜ್ಯದ ಜನರಿಗೆ ಪ್ರಥಮ ಚಿಕಿತ್ಸೆ, ಅಗ್ನಿ ಶಾಮಕ ಉಪಕರಣಗಳ ಬಳಕೆ, ರಕ್ಷಣಾ ಮತ್ತು ವಿಪತ್ತು ಕಾರ್ಯಾಚರಣೆಗಳ ಬಗ್ಗೆ ಮಾಹಿತಿ ತಿಳಿಯಲು ನೆರವಾಗಲು ಈ ಫೈರ್ ಪಾರ್ಕ್ ಅನ್ನು ಸ್ಥಾಪಿಸಲಾಗಿದೆ.
* ಫೈರ್ ಪಾರ್ಕ್ ಅನ್ನು ಪ್ರತಿ ಶನಿವಾರ ಮಧ್ಯಾಹ್ನ 3.30ರಿಂದ ಸಂಜೆ 5.30ರವರೆಗೆ ಸಾಮಾನ್ಯ ಜನರ ವೀಕ್ಷೆಗಾಗಿ ತೆರದಿರಲಾಗುತ್ತದೆ ಎಂದು ತಿಳಿಸಿದೆ.

## ಪ್ರಧಾನಿ ಮೋದಿ ವಿಶ್ವದ ಮೊದಲ ವಿದ್ಯುತ್ ಚಾಲಿತ ಡಬಲ್ ಸ್ಟ್ಯಾಕ್ ಕಂಟೇನರ್ ರೈಲಿಗೆ ಚಾಲನೆ




* ವಿಶ್ವದ ಮೊದಲ ವಿದ್ಯುತ್ ಚಾಲಿತ ಡಬಲ್ ಸ್ಟ್ಯಾಕ್ ರೈಲಿಗೆ ಭಾರತದ ಪ್ರಧಾನಿ ಮೋದಿ ಇತ್ತೀಚಿಗೆ ಚಾಲನೆ ನೀಡಿದರು. ಈ ರೈಲು ನ್ಯೂ ಅಟೇಲಿ ನ್ಯೂ ಕಿಶನ್ ಘರ್ ನಡುವೆ ಸಂಚರಿಸಲಿದೆ. ಮತ್ತು ಇದು ಒಟ್ಟು 1.5 ಕಿ.ಮೀ ಉದ್ದದ ಕಂಟೇನರ್ ಹೊಂದಿದೆ.
* ಈ ರೈಲುಗಳ ಮೂಲಕ ಕಡಿಮೆ ಸ್ವಳಾವಕಾಶದಲ್ಲಿ ದುಪ್ಪಟ್ಟು ಸರಕನ್ನು ಒಂದೇ ರೈಲಿನ ಮೂಲಕ ಸಾಗಿಸಬಹುದಾಗಿದ್ದು, ಇದರಿಂದ ಇಂಧನ ಮತ್ತು ಸಮಯದ ಉಳಿತಾಯವಾಗಲಿದೆ.
* ಭಾರತದ ಹೊಸ ಅಭಿವೃದ್ಧಿಗೆ ಪೂರ್ವ ಮತ್ತು ಪಶ್ಚಿಮ ಸರಕು ಕಾರಿಡಾರ್‌ಗಳು ಸಹಾಯವಾಗಲಿವೆ ಎಂದು ಪ್ರಧಾನಿಯವರು ತಿಳಿಸಿದ್ದಾರೆ, ವೆಸ್ಟರ್ನ್ ಡೆಡಿಕೇಟೆಡ್ ಫ್ರೈಟ್ ಕಾರಿಡಾರ್ ನಿರ್ಮಾಣದಲ್ಲಿ, ಜಪಾನ್ ದೇಶವು ಭಾರತಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ್ದು, ಪ್ರಧಾನಿ ಮೋದಿಯವರು ಜಪಾನ್ ದೇಶದ ಜನರಿಗೆ ಅಭಿನಂಧನೆಗಳನ್ನು ತಿಳಿಸಿದರು.

# 08-01-2021

## ರಾಜ್ಯ ಸರ್ಕಾರದ ಕೃಷಿಸಂಜೀವಿನಿ ವಾಹನಗಳಿಗೆ ಸಿಎಂ ಬಿಎಸ್ ವೈ ಚಾಲನೆ



* ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ರೈತರಿಗೆ ಅನುಕೂಲವಾಗಲೆಂದು ಕೃಷಿಸಂಜೀವಿನಿ ಎಂಬ ನೂತನ ವಾಹನಗಳಿಗೆ ಚಾಲನೆ ನೀಡಿದರು, ಈ ಕೃಷಿಸಂಜೀವಿನಿ ವಾಹನಗಳು ರೈತರ ಹೊಲಗಳಿಗೆ ಹೋಗಿ ಮಣ್ಣು, ಕೀಟ ರೋಗ, ನೀರು ಪರೀಕ್ಷೆಯನ್ನು ಮಾಡುತ್ತವೆ, ಜೊತೆಗೆ ರೈತರಿಗೆ ತಾಂತ್ರಿಕ ನೆರವನ್ನು ನೀಡುವಲ್ಲಿ ಪ್ರಮುಖ ಪಾತ್ರ ವಹಿಸುವುದಾಗಿ ಕೃಷಿ ಇಲಾಖೆ ಮಾಹಿತಿಯನ್ನು ನೀಡಿದೆ.

* ಪ್ರಸ್ತುತ ರಾಜ್ಯದಲ್ಲಿ ಕೃಷಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದ ಮೂಲಕ ಒಟ್ಟು 40 ವಾಹನಗಳಿಗೆ ಅವಕಾಶ ಕಲ್ಪಿಸಲಾಗಿದೆ.

* ರೈತರು ಇನ್ನು ತಮ್ಮ ಕೃಷಿ ಸಮಸ್ಯೆಗಳನ್ನು ಕೃಷಿ ಇಲಾಖೆಗೆ ತಿಳಿಸುವ ಸಲುವಾಗಿ ಸಹಾಯವಾಣಿ 155313 ಫ್ರೀ ನಂಬರ್ ಗೆ ಕರೆಮಾಡಬಹುದು ಇದು ಆಯಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಹೋಗುತ್ತದೆ, ಇದರಿಂದ ರೈತರು ಕೃಷಿ ಸಮಸ್ಯೆಗಳನ್ನು ಹೇಳಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

## ಪಾಕಿಸ್ತಾನದ ಸ್ವದೇಶಿ ನಿರ್ಮಿತ ರಾಕೆಟ್ ಉಡಾವಣೆಯಶಸ್ವಿ



* ಪಾಕಿಸ್ತಾನವು ಸ್ವದೇಶಿ ನಿರ್ಮಿತ "ಗೈಡೆಡ್ ಮಲ್ಟಿ ಲಾಂಚ್ ರಾಕೆಟ್"ಅನ್ನುಯಶಸ್ವಿಯಾಗಿ ಉಡಾವಣೆ ಮಾಡಿದೆ ಎಂದು ಪಾಕಿಸ್ತಾನ ಸೇನೆಯ ಮಾಧ್ಯಮ ವಿಭಾಗದ ಮೇಜರ್ ಜನರಲ್ ಬಾಬರ್ ಇಫ್ತಿಕಾರ್ ರವರು ಮಾಹಿತಿಯನ್ನು ನೀಡಿದ್ದಾರೆ.

* ಪಾಕಿಸ್ತಾನವು ತಯಾರಿಸಿದ ಈ ರಾಕೆಟ್ ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ, ಅಲ್ಲದೆ 140 ಕಿ.ಮೀ. ವರೆಗಿನ ಗುರಿಯನ್ನು ತಲುಪುವ ಸಾಮರ್ಥ್ಯವನ್ನುಕೂಡ ಹೊಂದಿದೆ ಎಂದು ತಿಳಿಸಿದ್ದಾರೆ.

* ಈ ರಾಕೆಟ್ ಯಶಸ್ವಿ ಉಡಾವಣೆಗೆ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ರವರು ವಿಜ್ಞಾನಿಗಳಿಗೆ ಮತ್ತು ಸೇನಾಪಡೆಗೆ ಅಭಿನಂದನೆ ಸಲ್ಲಿಸಿದ್ದಾರೆ.

## ಲಡಾಖ್‌ನಲ್ಲಿ 8 ಜಲವಿದ್ಯುತ್ ಯೋಜನೆಗಳಿಗೆ ಗ್ರೀನ್ ಸಿಗ್ನಲ್

* ಲಡಾಖ್‌ನಲ್ಲಿ 144 mv ವಿದ್ಯುತನ್ನು ತಯಾರಿಸುವ 8



ವಿವಿಧ ಜಲವಿದ್ಯುತ್ ಯೋಜನೆಗಳಿಗೆ ಕೇಂದ್ರ ಸರಕಾರವು ಇತ್ತೀಚಿಗೆ ಅನುಮತಿಯನ್ನು ನೀಡಿದೆ, ಈ ಯೋಜನೆಯನ್ನು ಸಿಂಧೂ ನದಿ ಮತ್ತು ಅದರ ಉಪನದಿಗಳಿಂದ ವಿದ್ಯುತನ್ನು ಉತ್ಪಾದಿಸಲಾಗುತ್ತದೆ ಎಂದು ಕೇಂದ್ರ ಸರಕಾರ ಮಾಹಿತಿ ನೀಡಿದೆ.

* ಈ ಜಲವಿದ್ಯುತ್ ಯೋಜನೆಗಳನ್ನೂ ಕಾರ್ಗಿಲ್ ಮತ್ತು ಲೇಹ್ ಜಿಲ್ಲೆಗಳಲ್ಲಿ ಕೈಗೊಳ್ಳಲಾಗುವದು ಎಂದು ಕೇಂದ್ರ ಜಲಶಕ್ತಿ ಸಚಿವಾಲಯವು ಮಾಹಿತಿಯನ್ನು ನೀಡಿದೆ.

## ಅಮೆರಿಕದಿಂದ ಅಧಿಕೃತ ಘೋಷಣೆ 46ನೇ ಅಧ್ಯಕ್ಷರಾಗಿ ಜೋ ಬಿಡನ್ ಆಯ್ಕೆ



* ಇತ್ತೀಚಿಗೆ ಅಮೇರಿಕಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಾಟ್ ಪಕ್ಷದ ಜೋ ಬಿಡನ್ ಅವರು 306 ಎಲೆಕ್ಟೋರಲ್ ಕಾಲೇಜ್ ಮತಗಳನ್ನು ಪಡೆದು ಗೆಲುವು ಸಾಧಿಸಿದ್ದ ಕಾರಣ, ಪ್ರಸ್ತುತ ಅಮೆರಿಕವು 46ನೇ ಅಧ್ಯಕ್ಷರಾಗಿ ಜೋ ಬಿಡನ್ ರವರನ್ನು ಆಯ್ಕೆ ಮಾಡಿದೆ ಮತ್ತು ಇವರು ಜನವರಿ 20ರಂದು ತಮ್ಮ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಹಾಗು ಭಾರತದ ಮೂಲದ ಕಮಲಾ ಹ್ಯಾರಿಸ್ ಅವರನ್ನು ಉಪಾಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ.

## ಟೆಸ್ಲಾ ಎಲೆಕ್ಟ್ರಿಕ್ ಕಾರು ಕಂಪನಿ ಸ್ಥಾಪಕ ಎಲಾನ್ ಮಸ್ಕ್ ವಿಶ್ವದ ನಂ.1 ಶ್ರೀಮಂತ



* ಇತ್ತೀಚಿಗೆ ಬ್ಲೂಮ್ ಬರ್ಗ್ ಪ್ರಕಟಿಸಿದ ವರದಿಯ ಪ್ರಕಾರ ಟೆಸ್ಲಾ ಎಲೆಕ್ಟ್ರಿಕ್ ಕಾರು ಕಂಪನಿ ಮತ್ತು ಸ್ಪೇಸ್ ಎಕ್ಸ್ ಬಾಹ್ಯಾಕಾಶ ಕಂಪನಿಯ ಸ್ಥಾಪಕರಾದ ಎಲಾನ್ ಮಸ್ಕ್ ರವರು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ ಎಂದು ವರದಿಯಾಗಿದೆ. ಈ ಹಿಂದೆ ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಅಮೆಝಾನ್ ಸ್ಥಾಪಕ ಜೆಫ್ ಬೆಝೋಸ್ ರವರಿದ್ದರು ಎಂದು ಬ್ಲೂಮ್ ಬರ್ಗ್ ತಿಳಿಸಿತ್ತು.
* ಟೆಸ್ಲಾ ಕಂಪೆನಿಯ ಎಲಾನ್ ಮಸ್ಕ್ ರ ಆಸ್ತಿಯಲ್ಲಿ 1.5 ಬಿಲಿಯನ್ ಡಾಲರ್ ಹೆಚ್ಚಳ ಕಂಡಿದ್ದು, ಈಗಿನ ಅವರ ಒಟ್ಟು ಆಸ್ತಿಯು 188.5 ಬಿಲಿಯನ್ ಡಾಲರ್ ಹೆಚ್ಚಾಗಿದೆ, ಇದರಿಂದ ಎಲಾನ್ ಮಸ್ಕ್ ರವರು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

# 09-01-2021

## ಭಾರತದಲ್ಲಿ ಲಿಥಿಯಂ ಸಂಸ್ಕರಣಾ ಘಟಕ ಆರಂಭವಾಗಲಿದೆ



* ಭಾರತದಲ್ಲಿ ಪ್ರಥಮವಾಗಿ ಲಿಥಿಯಂ ಸಂಸ್ಕರಣಾ ಘಟಕವನ್ನು ಗುಜರಾತ್ ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇನ್ನು ಸಂಸ್ಥೆ ಸ್ಥಾಪನೆಗಾಗಿ ಅತಿ ದೊಡ್ಡ ಇಂಧನ ವ್ಯವಹಾರ ಹಾಗೂ ಪರ್ಯಾಯ ಇಂಧನ ಕಂಪನಿಗಳಲ್ಲಿ ಒಂದಾದ ಮಾಣಿಕರ್ಣ ಪವರ್ ಸಂಸ್ಥೆಯೂ 1000 ಕೋಟಿ ರೂ. ಬಂಡವಾಳ ಹೂಡಲು ತಯಾರಾಗಿದೆ.
* ಇನ್ನು ಭಾರತವು ಲಿಥಿಯಂ ಅದಿರು ಪಡೆಯಲು ಲ್ಯಾಟಿನ್ ಅಮೇರಿಕ ದೇಶವಾದ ಬೊಲಿವಿಯಾದೊಂದಿಗೆ 2019 ರಲ್ಲೇ ಒಪ್ಪಂದಕ್ಕೆ ಸಹಿ ಹಾಕಿದೆ.
* ಪ್ರಸ್ತುತ ಆಸ್ಟ್ರೇಲಿಯಾ, ಚಿಲಿ, ಚೀನಾ, ಆರ್ಜೆಂಟೇನಾ, ಜಿಂಬಾಂಬೆ, ಪೋರ್ಚುಗಲ್ ರಾಷ್ಟ್ರಗಳು ಲಿಥಿಯಂ ಉತ್ಪಾದನೆಯಲ್ಲಿ ಜಗತ್ತಿನ ಟಾಪ್ 6 ದೇಶಗಳಾಗಿವೆ. ಮುಂದಿನ ದಿನಗಳಲ್ಲಿ ಭಾರತ ಕೂಡ ಈ ಪಟ್ಟಿಯನ್ನು ಸೇರುವ ಸಾಧ್ಯತೆ ಇದೆ.

## ಅಯೋಧ್ಯೆ ನಗರ ಅಭಿವೃದ್ಧಿಗೆ ಅಯೋಧ್ಯೆ ನಗರ ಪಾಲಿಕೆ ಜೊತೆ ಐಐಎಂ ಇಂದೋರ್ ಒಪ್ಪಂದ



* ಸುಪ್ರೀಂ ಕೋರ್ಟ್ ನ ತೀರ್ಪಿನ ಅನ್ವಯ ಅಯೋಧ್ಯೆ ನಗರದಲ್ಲಿ ರಾಮ ಮಂದಿರ ನಿರ್ಮಾಣವಾಗುತ್ತಿರುವ ಕಾರಣ, ಅಯೋಧ್ಯೆಯನ್ನು ವಿಶ್ವದರ್ಜೆಯ ನಗರ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಮಾರ್ಪಡಿಸಲು ಅಯೋಧ್ಯೆ ನಗರ ಪಾಲಿಕೆ ಹಾಗೂ ಐಐಎಂ ಇಂದೋರ್ ಪರಸ್ಪರ ಒಪ್ಪಂದಮಾಡಿಕೊಂಡಿವೆ.
* ಪ್ರಸ್ತುತ ಇಂದೋರ್ ನಗರವು ಕೇಂದ್ರದ ಸ್ವಚ್ಛ ನಗರ ಎಂಬ ಪ್ರಶಸ್ತಿಗೆ ಭಾಜನವಾಗಿದೆ, ಇಂದೋರ್ ನಗರದಲ್ಲಿ ಅನುಸರಿಸಿದ ಅಭಿವೃದ್ಧಿ ಕ್ರಮಗಳನ್ನು ಪರಿಗಣಿಸಿ, ಐಐಎಂ ಇಂದೋರ್ ನಿರ್ದೇಶಕ ಹಿಮಾಂಶು ರೈ ಹಾಗೂ ಅಯೋಧ್ಯೆ ನಗರ ಪಾಲಿಕೆಯ ಆಯುಕ್ತರಾದ ವಿಶಾಲ್ ಸಿಂಗ್ ರವರು ಅಯೋಧ್ಯೆಯನ್ನು ಅಭಿವೃದ್ಧಿಪಡಿಸಲು ಈ ಒಪ್ಪಂದಕ್ಕೆ ಪರಸ್ಪರ ಸಹಿ ಹಾಕಿದ್ದಾರೆ.

# 10-01-2021

## 18ನೇ ಪ್ರವಾಸಿ ಭಾರತೀಯ ದಿವಸ್




* ಮಹಾತ್ಮಾ ಗಾಂಧೀಜಿ ಅವರು 1915ರ ಜನೇವರಿ 9 ರಂದು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ ದಿನ, ಇದರ ನೆನೆಪಿಗೊಸ್ಕರ 2003 ರಲ್ಲಿ ಪ್ರವಾಸಿ ಭಾರತೀಯ ದಿನವನ್ನು ಆಚರಣೆ ಮಾಡಲು ಪ್ರಾರಂಭಿಸಲಾಗಿದೆ. ಇದು 18ನೇ ಪ್ರವಾಸಿ ಭಾರತೀಯ ದಿನ ಹಾಗು ಇದನ್ನು ಅನಿವಾಸಿ ಭಾರತೀಯರ(NRI) ದಿನ ಎಂದೂ ಕರೆಯುತ್ತಾರೆ.
* ಈ ವರ್ಷ "ಆತ್ಮನಿರ್ಭರ ಭಾರತಕ್ಕೆ ಕೊಡುಗೆ" ಎಂಬ ಧ್ಯೇಯವಾಕ್ಯದಡಿಯಲ್ಲಿ ಪ್ರವಾಸಿ ಭಾರತೀಯ ದಿನವನ್ನು ಆಚರಿಸಲಾಗುತ್ತಿದೆ.

NRI ಎಂದರೆ ಯಾರು ?

* ಒಬ್ಬ ವ್ಯಕ್ತಿ ಕನಿಷ್ಠ ವರ್ಷದ 240 ದಿನಗಳು ಭಾರತದಲ್ಲಿ ವಾಸಿಸಬೇಕು, ಇಲ್ಲದಿದ್ದಲ್ಲಿ ಅಂತಹ ವ್ಯಕ್ತಿಗಳಿಗೆ NRI ಎಂದು ಗುರಿತಿಸಲಾಗುತ್ತದೆ. ಅನಿವಾಸಿ ಭಾರತೀಯ ಎಂದರೆ

ಭಾರತೀಯರು ವಿದೇಶದಲ್ಲಿ ಕೆಲಸಕ್ಕಾಗಿ ಅಥವಾ ವಲಸೆ ಹೋಗಿದ್ದರೆ ಅಂಥವರನ್ನು ಅನಿವಾಸಿಗಳು ಎಂದು ಪರಿಗಣಿಸಲಾಗುತ್ತದೆ.

## ಕರ್ನಾಟಕ ರಾಜ್ಯದ ರೈತರಿಗೆ "ಸ್ವಾಭಿಮಾನಿ ರೈತ" ಎಂಬ ಗುರುತಿನ ಚೀಟಿ



* ದೇಶಕ್ಕೆ ಅನ್ನ ಒದಗಿಸುವ ರೈತರಿಗಾಗಿ ಕರ್ನಾಟಕ ಸರ್ಕಾರದಿಂದ 'ಸ್ವಾಭಿಮಾನಿ ರೈತ' ಎಂಬ ಗುರುತಿನ ಚೀಟಿಯನ್ನು ನೀಡಲಾಗುತ್ತಿದೆ. ಕೃಷಿ ಸಚಿವ ಬಿ.ಸಿ.ಪಾಟೀಲ್ ತಮ್ಮ ಉಸ್ತುವಾರಿ ಜಿಲ್ಲೆಯಾಗಿರುವ ಕೊಪ್ಪಳ ಜಿಲ್ಲೆಯಿಂದ ಜನವರಿ 9 ರಂದು ಗುರುತಿನಚೀಟಿ ನೀಡುವ ಕಾರ್ಯಕ್ರಮಕ್ಕೆ ಇತ್ತೀಚಿಗೆ ಚಾಲನೆ ನೀಡಿದರು.

* ಕರ್ನಾಟಕ ರಾಜ್ಯವು ರೈತರಿಗೆ ಗುರುತಿನಚೀಟಿ ನೀಡುವ ಸಲುವಾಗಿ ರಾಜ್ಯವು ಇ ಆಡಳಿತ ಇಲಾಖೆಯು ಎನ್.ಐ.ಸಿ ಅಡಿಯಲ್ಲಿ FRUITS ಸಾಫ್ಟ್ ವೇರ್ ಅನ್ನು ಅಭಿವೃದ್ಧಿ ಪಡಿಸಿದೆ, ಇದರಲ್ಲಿ ರಾಜ್ಯದ ರೈತರು ತಮ್ಮ ವಿವರಗಳನ್ನು ನೊಂದಾಯಿಸುವದರಿಂದ ಪ್ರತಿಯೊಬ್ಬ ರೈತರಿಗೆ ಒಂದು ಪ್ರತ್ಯೇಕ ಗುರುತಿನ ಚೀಟಿಯನ್ನು ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

## ಗುಜರಾತ್ ಮಾಜಿ ಮುಖ್ಯಮಂತ್ರಿ, ಮಾಧವ ಸಿಂಗ್ ಸೋಲಂಕಿ ವಿಧಿವಶ



* ಗುಜರಾತ್ ರಾಜ್ಯದ ಮಾಜಿ ಮುಖ್ಯಮಂತ್ರಿ, ಮಾಧವ ಸಿಂಗ್ ಸೋಲಂಕಿ ಯವರು ಇತ್ತೀಚಿಗೆ ತಮ್ಮ 94ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.
* ಮಾಧವ್ ಸಿಂಗ್ ಸೋಲಂಕಿ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದರು ಮತ್ತು ಭಾರತದ ಮಾಜಿ ವಿದೇಶಾಂಗ ಸಚಿವರಾಗಿದ್ದರು. ಇವರು ನಾಲ್ಕು ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರು 1980 ರ ದಶಕದಲ್ಲಿ ಗುಜರಾತ್‌ನಲ್ಲಿ ಅಧಿಕಾರಕ್ಕೆ ಬಂದಾಗ ಕ್ಷತ್ರಿಯ, ಹರಿಜನ, ಆದಿವಾಸಿ, ಮುಸ್ಲಿಂ (KHAM) ಸಮುದಾಯದ ಹೋರಾಟಕ್ಕೆ ಹೆಸರುವಾಸಿಯಾದ ರಾಜಕಾರಣಿಯಾಗಿದ್ದರು.

# 11-01-2021

## ಕೊಂಕಣಿ ಅಕಾಡೆಮಿ ಸ್ಥಾಪಿಸಲು ಕೇಜ್ರಿವಾಲ್ ಸಂಪುಟ ಅನುಮೋದನೆ



* ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ರವರು ಕೊಂಕಣಿ ಅಕಾಡೆಮಿಯನ್ನು ಸ್ಥಾಪಿಸಲು ದೆಹಲಿಯಲ್ಲಿನ ಸಚಿವ ಸಂಪುಟಕ್ಕೆ ಅನುಮೋದನೆ ನೀಡಿದರು. ಕೊಂಕಣಿ ಇಂಡೊ ಆರ್ಯನ್ ಭಾಷೆಯಾಗಿದೆ, ಹಾಗೂ ಈ ಭಾಷೆಯನ್ನು ಹೆಚ್ಚಾಗಿ ಪಶ್ಚಿಮ ಕರಾವಳಿ ಪ್ರದೇಶದಲ್ಲಿನ ಜನರು ಬಳಸುತ್ತಿದ್ದಾರೆ.
* ಪ್ರಸ್ತುತ ಕೊಂಕಣಿ ಭಾಷೆಯು ಗೋವಾ ರಾಜ್ಯದ ಅಧಿಕೃತ ಭಾಷೆಯಾಗಿದ್ದು, ಹಾಗೂ ಇದನ್ನು ಪ್ರೋತ್ಸಾಹಿಸಲು ಮತ್ತು ಭಾಷೆಯನ್ನು ಇಷ್ಟಪಟ್ಟು ಮಾತನಾಡುವ ಜನರಿಗಾಗಿ ರಾಷ್ಟ್ರ ರಾಜ್ಯಧಾನಿ ದೆಹಲಿಯಲ್ಲಿ ಕೊಂಕಣಿ ಅಕಾಡೆಮಿಯನ್ನು ತೆರೆಯಲಾಗುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ರವರು ತಮ್ಮ ಟ್ವೀಟರ ಖಾತೆ ಮೂಲಕ ಮಾಹಿತಿಯನ್ನು ತಿಳಿಸಿದ್ದಾರೆ.

## ಇತಿಹಾಸ ಬರೆದ ಭಾರತೀಯ ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ಮಹಿಳಾ ಪೈಲಟ್‌ಗಳು.



* ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ನಾಲ್ಕು ಮಹಿಳಾ ಪೈಲಟ್‌ಗಳಾದ, ಕ್ಯಾಪ್ಟನ್ ಜೋಯಾ ಅಗರ್‌ವಾಲ್, ಕ್ಯಾಪ್ಟನ್ ಪಾಪಗರಿ ತನ್ಮೈ, ಕ್ಯಾಪ್ಟನ್ ಆಕಾಶಾ ಸೋನಾವೇರ್ ಮತ್ತು ಕ್ಯಾಪ್ಟನ್ ಶಿವಾನಿ ಮನ್ಹಾಸ್ ಅವರನ್ನು ಒಳಗೊಂಡ ತಂಡವು ಸ್ಯಾನ್ ಫ್ರಾನ್ಸಿಸ್ಕೊ ದಿಂದ ಬೆಂಗಳೂರಿನ ನಡುವಣ ವಿಶ್ವದ ಅತೀ ಹೆಚ್ಚು ದೂರದ ವಾಯು ವಿಮಾನ ಮಾರ್ಗದ ಸಂಚಾರವನ್ನು ಸಂಪೂರ್ಣವಾಗಿ ಈ ಮಹಿಳಾ ಪೈಲಟ್‌ಗಳು ನಿರ್ವಹಿದ್ದಾರೆ ಎಂದು ತಿಳಿಸಿದೆ.

* ವಿಶ್ವದ ಅತಿ ದೀರ್ಘ ವಾಯು ಮಾರ್ಗವಾದ ಸ್ಯಾನ್ ಫ್ರಾನ್ಸಿಸ್ಕೊ ದಿಂದ ಬೆಂಗಳೂರಿನ ನಡುವಿನ ಮಾರ್ಗವು, ಅಟ್ಲಾಂಟಿಕ್ ಮೂಲಕ 16,000 ಕಿ.ಮೀ ದೂರವನ್ನು ಕ್ರಮಿಸಿ ಬೆಂಗಳೂರಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಲು 17 ಗಂಟೆಗಳು ಬೇಕಾಯಿತು ಎಂದು ಕ್ಯಾಪ್ಟನ್ ಜೊಯಾ ಅಗರ್ವಾಲ್ ಮತ್ತು ಪೈಲಟ್ ಶಿವಾನಿ ಮನ್ಹಾಸ್ ಮಾಹಿತಿಯನ್ನು ನೀಡಿದರು.

## ಈ ಬಾರಿ ಗಣರಾಜ್ಯೋತ್ಸವಕ್ಕೆ ಅತಿಥಿಯಾಗಿ ಸುರಿನಾಮ್ ರಿಪಬ್ಲಿಕ್‌ನ ಅಧ್ಯಕ್ಷರ ಆಗಮನ



* ಈ ವರ್ಷ ಗಣರಾಜ್ಯೋತ್ಸವಕ್ಕೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಬರಬೇಕಾಗಿತ್ತು, ಆದರೆ ಬ್ರಿಟನ್ ದೇಶದಲ್ಲಿ ವ್ಯಾಪಿಸುತ್ತಿರುವ ಕೋರೋಣ ಸೋಂಕಿನ ಎರಡನೇ ಅಲೆಯಿಂದಾಗಿ ಅವರ ತಮ್ಮ ಪ್ರವಾಸವನ್ನು ರದ್ದುಗೊಳಿಸಿದ ಹಿನ್ನಲೆ, ಅವರ ಬದಲು ಭಾರತೀಯ ಮೂಲದ ಸುರಿನಾಮ್ ರಿಪಬ್ಲಿಕ್‌ನ ಅಧ್ಯಕ್ಷರಾಗಿರುವ ಚಂದ್ರಿಕಾಪ್ರಸಾದ್ ಸಂತೋಖೀ ರವರು ಈ ವರ್ಷದ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ರಾಜಪಥದ ಪರೇಡ್‌ನಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ಮಾಹಿತಿಯನ್ನು ನೀಡಿದೆ.

## ಕರ್ನಾಟಕದಿಂದ ಅಕ್ಕಿ ಖರೀದಿಗೆ ರಿಲಯನ್ಸ್ ಒಪ್ಪಂದ




* APMC ಕಾಯ್ದೆ ತಿದ್ದುಪಡಿಯ ಬಳಿಕ ಇದೆ ಮೊದಲ ಬಾರಿ, ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ರೈತರಿಂದ 1000 ಕ್ವಿಂಟಲ್ ಭತ್ತವನ್ನು (ಅಕ್ಕಿ) ಖರೀದಿ ಮಾಡಲು ರಿಲಯನ್ಸ್ ರೀಟೈಲ್ ಲಿಮಿಟೆಡ್ ಕಂಪನಿಯು ಸುಮಾರು 1100 ರೈತರೊಂದಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ತಿಳಿದು ಬಂದಿದೆ.
* ರೈತರು ಬೆಳೆದ ಉತ್ಪನ್ನ ಶೇಕಡ 16ಕ್ಕಿಂತ ಕಡಿಮೆ ತೇವಾಂಶ ಹೊಂದಿದ ಅಕ್ಕಿಯಾಗಿರಬೇಕು ಎಂಬ ಷರತ್ತು ಹಾಕಿರುವ ಸಂಸ್ಥೆಯು, ಅಂತಹ ಸೋನಾ ಮಸೂರಿ ಅಕ್ಕಿಗೆ ಪ್ರತಿ 100 ಕೆಜಿಗೆ 1,950 ರೂಪಾಯಿ ಬೆಲೆ ನೀಡಿ ಖರೀದಿ ಮಾಡುವುದಾಗಿ ರಿಲಯನ್ಸ್ ರೀಟೈಲ್ ಲಿಮಿಟೆಡ್ ಕಂಪನಿಯು ತಿಳಿಸಿದೆ.

## ಸರ್ಜಿಕಲ್ ದಾಳಿಯಲ್ಲಿ 300 ಉಗ್ರರ ಹತ್ಯೆಯಾಗಿರುವುದನ್ನು ಒಪ್ಪಿಕೊಂಡ ಪಾಕಿಸ್ತಾನ




* ಫೆಬ್ರುವರಿ 14, 2019 ರಂದು "ಜಮ್ಮು ಕಾಶ್ಮೀರದ" ಪುಲ್ವಾಮಾದಲ್ಲಿ ನಡೆದ ಸೈನಿಕರ ಮೇಲೆ ಜೈಷ್ ಇ ಮೊಹಮ್ಮದ್ ಉಗ್ರ ಸಂಘಟನೆ ಆತ್ಮಾಹುತಿ ಬಾಂಬ್ ದಾಳಿ ನಡೆಸಿತ್ತು, ಇದರಿಂದ ಸರಿಸುಮಾರು 44 ಯೋಧರು ಹುತಾತ್ಮರಾದರು.
* ಈ ದಾಳಿಯ ಪ್ರತಿಕಾರವಾಗಿ ಭಾರತೀಯ ಸೇನೆಯು ಫೆಬ್ರುವರಿ 26, 2019 ರಂದು ಪಾಕಿಸ್ತಾನದ ಬಾಲಾಕೋಟ್ ಉಗ್ರರ ಶಿಬಿರದ ಮೇಲೆ ಸರ್ಜಿಕಲ್ ದಾಳಿಯನ್ನು ನಡೆಸಿತು, ಇದರಲ್ಲಿ 300ಕ್ಕೂ ಹೆಚ್ಚು ಉಗ್ರರ ಹತ್ಯೆಯಾಗಿದ್ದಾರೆ ಎಂದು ಪಾಕಿಸ್ತಾನ ಇದೀಗ ಒಪ್ಪಿಕೊಂಡಿದೆ. ಈ ವಿಷಯವನ್ನು ಪಾಕಿಸ್ತಾನದ ಮಾಜಿ ರಾಜತಾಂತ್ರಿಕ ಅಧಿಕಾರಿ ಆಘಾ ಹಿಲಾಲಿ ರವರು ಸುದ್ದಿಘೋಷ್ಠಿಯಲ್ಲಿ ಹೇಳಿಕೆಯನ್ನು ನೀಡಿದ್ದಾರೆ.

## ಅಸ್ಸಾಂನಲ್ಲಿ ಪಿಂಕ್ ಬಸ್ ಗೆ ಚಾಲನೆ ನೀಡಿದ ಸಿಎಂ ಸರ್ಬಾನಂದ ಸೋನೊವಾಲ್



* ಅಸ್ಸಾಂ ರಾಜ್ಯ ಸರ್ಕಾರದಿಂದ ಅಸ್ಸಾಂನ ಗುವಾಹಟಿ ಎಂಬಲ್ಲಿ ಭ್ರಮನ್ ಸಾರಥಿ ಯೋಜನೆಯ ಭಾಗವಾಗಿ ಮಹಿಳೆಯರಿಗೆ ಮತ್ತು ಹಿರಿಯ ನಾಗರಿಕರಿಗೆ ಉಚಿತ ಸಾರಿಗೆ ಸೇವೆ ನೀಡಲು ಅಸ್ಸಾಂ ಸರ್ಕಾರ ಈ ನೂತನ ಯೋಜನೆಯನ್ನು ಜಾರಿಗೆ ತಂದಿದೆ.
* ಅಸ್ಸಾಂನ ಮುಖ್ಯಮಂತ್ರಿ ಸರ್ಬಾನಂದ ಸೋನೊವಾಲ್ ರವರು ಹಿರಿಯ ನಾಗರಿಕರಿಗೆ ಮತ್ತು ಮಹಿಳೆಯರಿಗೆ ಪ್ರಯಾಣಿಸಲು ಅನುಕೂಲವಾಗಲೆಂದು 25 ಪಿಂಕ್ ಬಸ್ ಗಳಿಗೆ ಚಾಲನೆ ನೀಡಿದರು.

## ತಮಿಳುನಾಡು ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಪ್ರತಿದಿನ 2GB ಡೇಟಾ ಉಚಿತ



* ತಮಿಳುನಾಡು ಸರ್ಕಾರವು ಕೋವಿಡ್ ಕಾರಣದಿಂದ ಆನ್ ಲೈನ್ ತರಗತಿಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುವ ಸಲುವಾಗಿ ತಮಿಳುನಾಡಿನ ಪ್ರತಿ ವಿದ್ಯಾರ್ಥಿಗಳಿಗೆ ಸಂಕ್ರಾಂತಿ ಹಬ್ಬದ ಪ್ರಯುಕ್ತ ಪ್ರತಿ ದಿನ 2GB ಡೇಟಾವನ್ನು ಕಲಿಕೆಯ ಸಲುವಾಗಿ ಉಚಿತವಾಗಿ ನೀಡಲು ನಿರ್ಧರಿಸಿದೆ ಎಂದು ತಮಿಳುನಾಡಿನ ಸಿಎಂ ಪಳನಿ ಸ್ವಾಮಿ ಅವರ ಸರ್ಕಾರ ಆದೇಶ ಹೊರಡಿಸಿದೆ.
* ಈ ನೂತನ ಯೋಜನೆಯಿಂದಾಗಿ ತಮಿಳುನಾಡು ರಾಜ್ಯದ 9,69,047 ವಿದ್ಯಾರ್ಥಿಗಳಿಗೆ ಪ್ರತಿದಿನ 2GB ಡೇಟಾ ಉಚಿತವಾಗಿ ನೀಡಲಾಗುತ್ತದೆ. ಸರ್ಕಾರಿ ಅನುದಾನಿತ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜುಗಳು, ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜುಗಳಿಗೆ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಯ ಉಪಯೋಗ ಪಡೆಯಲಿದ್ದಾರೆ.
* ಆನ್‌ಲೈನ್ ತರಗತಿಯ ಕಾಲೇಜು ವಿದ್ಯಾರ್ಥಿಗಳಿಗೆ ಜನವರಿ ಯಿಂದ ಏಪ್ರಿಲ್‌ವರೆಗೆ ಉಚಿತ ಇಂಟರ್‌ನೆಟ್ ಸೌಲಭ್ಯ ಒದಗಿಸಲಾಗುತ್ತದೆ ಎಂದು ತಮಿಳುನಾಡು ಸರ್ಕಾರ ತಿಳಿಸಿದೆ.

# 12-01-2021

## ಕೇಂದ್ರ ಸಚಿವ ಅಮಿತ್ ಷಾ ಅವರಿಂದ ಏಕಗವಾಕ್ಷಿ ಯೋಜನೆಗೆ ಚಾಲನೆ




* ಕೇಂದ್ರ ಗೃಹ ಸಚಿವ ಅಮಿತ್ ಷಾರವರು ಆನ್ ಲೈನ್ ಮೂಲಕ ಕಲ್ಲಿದ್ದಲು ಗಣಿಗಾರಿಕೆಗೆ ಅನುಮತಿ ಪಡೆಯುವ ಏಕ ಗವಾಕ್ಷಿ ಅನುಮೋದನೆ ಪಡೆಯುವ ಯೋಜನೆಗೆ ಚಾಲನೆ ನೀಡಿದರು.
* ಇದೀಗ ಕೇಂದ್ರ ಗೃಹ ಸಚಿವ ಅಮಿತ್ ಷಾರವರು ಕಲ್ಲಿದ್ದಲು ಕ್ಷೇತ್ರದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಮತ್ತು ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಳ್ಳಲು ಕೇಂದ್ರ ಸರ್ಕಾರದ ಈ ಏಕ ಗವಾಕ್ಷಿ ಯೋಜನೆ ಆರಂಭವಾಗಿದೆ ಎಂದು ತಿಳಿಸಿದ್ದಾರೆ.
* ಭಾರತದ ಕಲ್ಲಿದ್ದಲು ಕ್ಷೇತ್ರ 5 ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ದೊಡ್ಡ ಪಾಲು ಒದಗಿಸಲಿದೆ. ಈ ಕಲ್ಲಿದ್ದಲು ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಲು ಬೇರೆ ಬೇರೆ ಜನರಿಗೆ ಈ ಯೋಜನೆಯಿಂದ ಅವಕಾಶ ದೊರೆಯಲಿದೆ ಎಂದು ತಿಳಿಸಿದ್ದಾರೆ.

## ಜನವರಿ 12: ರಾಷ್ಟ್ರೀಯ ಯುವ ದಿನ




* ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ 12 ರಂದು ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಗುತ್ತದೆ. 1984 ರಲ್ಲಿ ಭಾರತ ಸರ್ಕಾರ ಈ ದಿನವನ್ನು ರಾಷ್ಟ್ರೀಯ ಯುವ ದಿನವೆಂದು ಘೋಷಿಸಿತು, ಮತ್ತು 1985 ರಿಂದ ಈ ಕಾರ್ಯಕ್ರಮವನ್ನು ಭಾರತದಲ್ಲಿ ಪ್ರತಿವರ್ಷ ಆಚರಿಸಲಾಗುತ್ತದೆ. ವಿಶ್ವದ ಅತ್ಯಂತ ಪ್ರಸಿದ್ಧ ತತ್ವಜ್ಞಾನಿ ಅಥವಾ ಸನ್ಯಾಸಿಗಳಲ್ಲಿ ಸ್ವಾಮಿ ವಿವೇಕಾನಂದರು ಕೂಡ ಒಬ್ಬರು ಆಗಿದ್ದವರು.
* ಪ್ರಪಂಚದಲ್ಲೇ ಅತೀಹೆಚ್ಚು ಯುವಕರನ್ನು ಹೊಂದಿರುವ ದೇಶ ಭಾರತ. ರಾಷ್ಟ್ರದ ಅಭಿವೃದ್ಧಿಯಲ್ಲಿ ಭಾರತದ ಯುವ ಜನಾಂಗದ ಪಾತ್ರ ಪ್ರಮುಖವಾಗಿದೆ, ಮತ್ತು ಭಾರತದ ಶಕ್ತಿಯೂ ಯುವ ಜನಾಂಗವೇ ಆಗಿದೆ ಎಂದು ತಿಳಿಸಿದೆ. ಆದ್ದರಿಂದ ಜನವರಿ 12 ರಂದು ರಾಷ್ಟ್ರೀಯ ಯುವ ದಿನದ ಜೊತೆಗೆ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ಆಚರಿಸಲಾಗುತ್ತದೆ.

## ಇದೆ ಮೊದಲ ಬಾರಿಗೆ ಮೋದಿ ಸರ್ಕಾರದಿಂದ ಬಜೆಟ್ ಪುಸ್ತಕ ಮುದ್ರಣ ಸ್ಥಗಿತ




* ಸ್ವತಂತ್ರ ಭಾರತದ ಮೊದಲ ಬಜೆಟ್ 1947 ರ ನವೆಂಬರ್ 26 ರಂದು ಮಂಡನೆಯಾಗಿತ್ತು, ಅಲ್ಲಿಂದ ಇಲ್ಲಿಯವರೆಗೂ ಬಜೆಟ್ ಪುಸ್ತಕ ಮುದ್ರಣ ರೂಪದಲ್ಲಿ ನೀಡಲಾಗುತ್ತಿತ್ತು, ಪ್ರಸ್ತುತ ಕೇಂದ್ರ ಸರ್ಕಾರವು ಇದೆ ಮೊದಲ ಬಾರಿಗೆ ಕೋವಿಡ್ ಕಾರಣದ ಹಿನ್ನಲೆಯಿಂದಾಗಿ ಬಜೆಟ್ ಪುಸ್ತಕ ಮುದ್ರಣ ಮಾಡದಿರಲು ನಿರ್ಧರಿಸಿದೆ.
* ಪ್ರಸ್ತುತ ಫೆಬ್ರುವರಿ 1 ರಂದು ಕೇಂದ್ರ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಲಿದ್ದು, ಹಾಗೂ ಕೇಂದ್ರ ಸರ್ಕಾರವು ಸಂಸತ್ ಸದಸ್ಯರಿಗೆ ಬಳಕೆಗೆ ಬಜೆಟ್ ಪುಸ್ತಕದ ಸಾಫ್ಟ್ ಕಾಪಿ, ಅಂದರೆ PDF

ಫೈಲ್ ಒದಗಿಸಿಕೊಡಲಾಗುವದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ಕರಾವಳಿ ರಕ್ಷಣಾ ವ್ಯಾಯಾಮ 'ಸೀ ವಿಜಿಲ್' ಗೆ ಚಾಲನೆ



* ಭಾರತೀಯ ನೌಕಾಪಡೆ ಮತ್ತು ಕೋಸ್ಟ್ ಗಾರ್ಡ್ ಶೀಘ್ರದಲ್ಲೇ 'ಸೀ ವಿಜಿಲ್' ಎಂಬ ಹೆಸರಿನಲ್ಲಿ ಕರಾವಳಿ ಭದ್ರತಾ ಪಡೆಗಳ ಎರಡನೇ ಆವೃತ್ತಿಯ ಕರಾವಳಿ ಸಮರಾಭ್ಯಾಸ ಶುರುಮಾಡಲಿವೆ, ಎಂದು ಕಮಾಂಡ್ ಕೋಸ್ಟಲ್ ಸೆಕ್ಯೂರಿಟಿ ಅಧಿಕಾರಿ ಕ್ಯಾ.ಅಜಯ್ ಯಾದವ್ ತಿಳಿಸಿದ್ದಾರೆ. ಈ ವ್ಯಾಯಾಮದಿಂದ ದೇಶದ ಕರಾವಳಿ ರಕ್ಷಣಾ ಕಾರ್ಯವೈಖರಿ ಹೆಚ್ಚಿಸಲು ಮತ್ತು ಬಲಪಡಿಸುಲು ಅನುಕೂಲವಾಗಲಿದೆ.

* ಪ್ರಸ್ತುತ ಈ ಎರಡನೇಯ ಆವೃತ್ತಿಯ ಕರಾವಳಿ ರಕ್ಷಣಾ ವ್ಯಾಯಾಮವನ್ನು ನೆಡೆಸುವದರಲ್ಲಿ ನೌಕಾ ದಳ, ಭಾರತೀಯ ವಾಯು ಸೇನೆ, ಕೋಸ್ಟ್ ಗಾರ್ಡ್, NSG, BSF, ಪೊಲೀಸ್, ಕಸ್ಟಂಮ್ಸ್, CISF, ಫಿಷರೀಸ್, ಡಿಜಿ ಶಿಪ್ಪಿಂಗ್, ಪೋರ್ಟ್ ಟ್ರಸ್ಟ್, SIDS, ಆಯಿಲ್ ಹ್ಯಾಂಡಲ್ಲಿಂಗ್ ಏಜೆನ್ಸಿಗಳು ಭಾಗವಹಿಸಲಿವೆ ಎಂದು ತಿಳಿದು ಬಂದಿದೆ.

# 13-01-2021

## ಪಾಸ್‌ಪೋರ್ಟ್ ಶ್ರೇಯಾಂಕ ಪಟ್ಟಿಯಲ್ಲಿ ಭಾರತಕ್ಕೆ 85ನೇ ಸ್ಥಾನ




* ಜಗತ್ತಿನ ಅತ್ಯಂತ ಪ್ರಭಾವಶಾಲಿ ಪಾಸ್‌ಪೋರ್ಟ್ ಶ್ರೇಯಾಂಕದ ಪಟ್ಟಿಯನ್ನು ಹೆನ್ಲ ಆಯಂಡ್ ಪಾರ್ಟ್‌ನರ್ಸ್ ಪಾಸ್‌ಪೋರ್ಟ್ ಇಂಡೆಕ್ಸ್ 2021 ಬಿಡುಗಡೆ ಮಾಡಲಾಗಿದ್ದು, ಈ ಪಾಸ್‌ಪೋರ್ಟ್ ಶ್ರೇಯಾಂಕದ ಪಟ್ಟಿಯಲ್ಲಿ ಭಾರತದ ಪಾಸ್‌ಪೋರ್ಟ್ 58 ಅಂಕಗಳನ್ನು ಗಳಿಸಿ 85ನೇ ಸ್ಥಾನ ಪಡೆದುಕೊಂಡಿದೆ.

* ಭಾರತವು ಈ ಅಂಕಗಳಿಂದ ಪೂರ್ವ ನಿಗದಿತ ವೀಸಾ ಇಲ್ಲದೆ 58 ದೇಶಗಳಿಗೆ ಪ್ರಯಾಣ ಮಾಡಲು ಅವಕಾಶ ನೀಡಿದೆ ಎಂದರ್ಥ.

* ಪ್ರಸ್ತುತ ಜಪಾನ್ ದೇಶವು ಪಾಸ್‌ಪೋರ್ಟ್ ಶ್ರೇಯಾಂಕದ ಪಟ್ಟಿಯಲ್ಲಿ ನಂ.1 ಸ್ಥಾನ ಪಡೆದುಕೊಂಡಿದ್ದು, ಇದು 191 ಅಂಕಗಳನ್ನು ಪಡೆದು ಸತತ ಮೂರು ವರ್ಷಗಳಿಂದ ಪಾಸ್ ಪೋರ್ಟ್ ಶ್ರೇಯಾಂಕದ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.

* ಇನ್ನು ಸಿಂಗಾಪುರ ದೇಶವು 190 ಅಂಕಗಳನ್ನು ಪಡೆದುಕೊಂಡು ಎರಡನೇ ಸ್ಥಾನದಲ್ಲಿದೆ.

* ದಕ್ಷಿಣ ಕೊರಿಯಾ ಮತ್ತು ಜರ್ಮನಿ, ಫಿನ್ಲಂಡ್, ಇಟಲಿ, ಲಕ್ಸೆಂಬರ್ಗ್ ಮತ್ತು ಸ್ಪೇನ್ ದೇಶಗಳು 3 ಮತ್ತು 4ನೇ ಸ್ಥಾನಪಡೆದುಕೊಡಿವೆ.

## ರಾಜ್ಯ ಸರ್ಕಾರದಿಂದ ಸುವರ್ಣ ಗ್ರಾಮ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿಗೆ 1 ಕೋಟಿ ರೂ. ಅನುದಾನ



* ರಾಜ್ಯ ಸರ್ಕಾರವು ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಗ್ರಾ.ಪಂ ಅಭಿವೃದ್ಧಿಗಾಗಿ 1ಕೋಟಿ ರೂ.ಅನುದಾನ ನೀಡಲಾಗುತ್ತದೆ ಎಂದು ರಾಜ್ಯ ಸರ್ಕಾರದ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಹೇಳಿದ್ದಾರೆ.

* ಈ ಹಿಂದೆ ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯನ್ನು ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಜಾರಿಗೆ ತಂದಿದ್ದರು, ಇದಾದ ನಂತರ ಕಾಂಗ್ರೆಸ್ ಸರ್ಕಾರ ಈ ಯೋಜನೆ ರದ್ದುಗೊಳಿಸಿ ಗ್ರಾಮವಿಕಾಸ್ ಎಂಬ ಹೊಸ ಯೋಜನೆಯನ್ನು ಜಾರಿ ಮಾಡಿತ್ತು, ಪ್ರಸ್ತುತ ಈಗಿನ ಸರ್ಕಾರವು ಸುವರ್ಣಗ್ರಾಮ ಯೋಜನೆ ಮತ್ತೆ ಮರು ಜಾರಿಗೊಳಿಸಿ, ಮತ್ತು ಈ ಯೋಜನೆ ಮೂಲಕ ಪ್ರತಿ ಗ್ರಾಮಪಂಚಾಯತಿ ಏಳಿಗೆಗಾಗಿ 1ಕೋಟಿ ರೂ.ಅನುದಾನ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

## ಇಸ್ರೋದಿಂದ 100 ಅಟಲ್ ಟಿಂಕರಿಂಗ್ ಲ್ಯಾಬ್ ಗಳ ಅಳವಡಿಕೆ




* ಪ್ರಸ್ತುತ ಭಾರತದಲ್ಲಿ ಏಳು ಸಾವಿರಕ್ಕೂ ಹೆಚ್ಚು ಅಟಲ್ ಟಿಂಕರಿಂಗ್ ಲ್ಯಾಬ್‌ಗಳಿವೆ, ಅದರಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಇತ್ತೀಚೆಗೆ ದೇಶಾದ್ಯಂತ 100 ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಅಳವಡಿಸಿಕೊಳ್ಳಲು ಎಂದು ಘೋಷಿಸಿದೆ.

* 100 ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಅಳವಡಿಸಿಕೊಳ್ಳುವ ಮೂಲಕ, ವಿದ್ಯಾರ್ಥಿಗಳಿಗೆ

ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ತರಬೇತಿ ನೀಡಲು ಇಸ್ರೋ ಸಹಾಯ ಮಾಡುವದರ ಜೊತೆಗೆ ಬಾಹ್ಯಾಕಾಶ ಸಂಬಂಧಿತ ತಂತ್ರಜ್ಞಾನಗಳಿಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ, ಜೊತೆಯಲ್ಲಿ ತಂತ್ರಜ್ಞಾನಗಳ ವಿಷಯಗಳನ್ನು ಹಂಚಿಕೊಳ್ಳಲಿದೆ ಎಂದು ತಿಳಿಸಿದೆ.

* ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ಅಟಲ್ ಇನ್ನೋವೇಶನ್ ಮಿಷನ್ ಕಾರ್ಯಕ್ರಮದಡಿಯಲ್ಲಿ ಎನ್‌ಐಟಿಐ ಆಯೋಗ್ ಸ್ಥಾಪಿಸುತ್ತದೆ.

## ಕೃಷಿ ಕಾಯ್ದೆಗಳಿಗೆ ಸುಪ್ರೀಂ ಕೋರ್ಟ್ ತಡೆ



* ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಸುಧಾರಣೆಯ ಮೂರು ಕಾಯ್ದೆಗಳ ಜಾರಿಗೆಯನ್ನು ಸುಪ್ರೀಂ ಕೋರ್ಟ್ ತನ್ನ ಮುಂದಿನ ಆದೇಶದವರೆಗೆ ಕೃಷಿ ಕಾಯ್ದೆಗಳನ್ನೂ ತಡೆಹಿಡಿದಿದೆ. ಈ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಯಿಂದ ಉಂಟಾಗಿರುವ ಬಿಕ್ಕಟ್ಟು ಪರಿಹಾರಕ್ಕೆ ನಾಲ್ಕು ಸದಸ್ಯರ ಸಮಿತಿಯನ್ನೂ ಸುಪ್ರೀಂ ಕೋರ್ಟ್ ರಚಿಸಿದೆ, ಇದು ರೈತರ ಸಮಸ್ಯೆಗಳಿಗೆ ದನಿಯಾಗಲಿದೆಯೆಂದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

*ರೈತರು ಈ ಕೃಷಿ ಬಿಕ್ಕಟ್ಟು ಪರಿಹಾರಕ್ಕೆ ಸಹಕರಿಸಬೇಕು ಮತ್ತು ವಿಚಾರಣೆಯ ವೇಳೆ ರೈತರು ಸಮಿತಿಯ ಮುಂದೆಹಾಜರಾಗಿ ತಮ್ಮ ಸಮಸ್ಯೆ ಹೇಳಿಕೊಳ್ಳಬೇಕು ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

ಕೃಷಿಯ ಮೂರು ಕಾಯ್ದೆಗಳು :

* ಬೆಲೆ ಖಾತರಿ ಮತ್ತು ಕೃಷಿ ಸೇವೆಗಳಿಗೆ ರೈತರ ಒಪ್ಪಿಗೆ ಕಾಯ್ದೆ
*ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ಮಾರಾಟ ಕಾಯ್ದೆ
*ಅಗತ್ಯ ವಸ್ತುಗಳ ಕಾಯ್ದೆ

## ಜಮ್ಮು ಮತ್ತು ಕಾಶ್ಮೀರದ ಕೈಗಾರಿಕಾ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ 28,400 ಕೋಟಿ ರೂ ಯೋಜನೆ



* ಇತ್ತೀಚೆಗೆ ಭಾರತ ಸರ್ಕಾರವು ಜಮ್ಮು ಮತ್ತು ಕಾಶ್ಮೀರದ ಕೈಗಾರಿಕಾ ಅಭಿವೃದ್ಧಿಯನ್ನು ಹೆಚ್ಚಿಸುವ ಸಲುವಾಗಿ 28,400 ಕೋಟಿ ರೂಗಳ ಯೋಜನೆಗೆ, ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ಮತ್ತು ಈ ಯೋಜನೆಯು ಹಣವನ್ನು 2037 ರವರೆಗೆ ಜಮ್ಮು ಮತ್ತು ಕಾಶ್ಮೀರದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಉಪಯೋಗಿಸಲಾಗುವದು.

* ಈ ಯೋಜನೆಯಿಂದಾಗಿ ಜಮ್ಮು ಮತ್ತು ಕಾಶ್ಮೀರದ ಕೈಗಾರಿಕಾ ಪ್ರದೇಶದಲ್ಲಿ 4.5 ಲಕ್ಷ ನೇರ ಮತ್ತು ಪರೋಕ್ಷ ಉದ್ಯೋಗವನ್ನು ನೀಡಿದಂತಾಗುತ್ತದೆ ಎಂದು ಸರ್ಕಾರ ತಿಳಿಸಿದೆ.

*ಪ್ರಸ್ತುತ ಕೇಂದ್ರ ಸರ್ಕಾರವು ಇಲ್ಲಿಯತನಕ ಒಟ್ಟು 1123 ಕೋಟಿ ರೂ.ಗಳನ್ನು ಜಮ್ಮು ಮತ್ತು ಕಾಶ್ಮೀರದ ಕೈಗಾರಿಕಾ ಪ್ರದೇಶದಲ್ಲಿ ಹೂಡಿಕೆ ಮಾಡಲಾಗಿದೆ ಎಂದು ತಿಳಿಸಿದೆ.

## ಬಿ. ಎಸ್. ಯಡಿಯೂರಪ್ಪನವರ ಸಂಪುಟ ಸೇರಿದ 7 ಸಚಿವರ ಪ್ರಮಾಣ ವಚನ



* ಕರ್ನಾಟಕ ರಾಜ್ಯದ ಸಚಿವ ಸಂಪುಟ ವಿಸ್ತರಣೆ ಇದೀಗ ಮುಗದಿದ್ದು, ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ ನೇತೃತ್ವದ ಸಂಪುಟದಲ್ಲಿ 7 ಸಚಿವರು ಮಂತ್ರಿ ಸ್ಥಾನ ಪಡೆದುಕೊಂಡಿದ್ದಾರೆ.

* ನೂತನವಾಗಿ 7 ಜನ ಸಚಿವರ ಹೆಸರುಗಳು ಇಂತಿವೆ ಎಸ್. ಅಂಗಾರ, ಸಿ.ಪಿ. ಯೋಗೇಶ್ವರ್, ಎಂ.ಟಿ.ಬಿ. ನಾಗರಾಜ್, ಆರ್.ಶಂಕರ್, ಅರವಿಂದ ಲಿಂಬಾವಳಿ, ಮುರುಗೇಶ ನಿರಾಣಿ, ಮತ್ತು ಉಮೇಶ್ ಕತ್ತಿ, ಇತ್ತೀಚಿಗೆ ಈ 7 ಜನ ರಾಜ್ಯಪಾಲರಾದ ವಜುಭಾಯ್ ವಾಲಾ ಅವರ ನೇತೃತ್ವದಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

# 14-01-2021

## ಆಫ್ರಿಕಾದಲ್ಲಿ ಅಪರೂಪದ ಸರಿಸೃಪ ಹಲ್ಲಿ ಪತ್ತೆ



* ಆಫ್ರಿಕಾದಲ್ಲಿನ ವಿಜ್ಞಾನಿಗಳು ಇತ್ತೀಚೆಗೆ ನಡೆಸಿದ ಅಧ್ಯಯನದ ಪ್ರಕಾರ ಅರೆ ಪಾರದರ್ಶಕ ಚರ್ಮವನ್ನ ಹೋಂದಿರುವ ಸರಿಸೃಪಗಳನ್ನ ಪತ್ತೆ ಹಚ್ಚಿದ್ದಾರೆ. ಹಾಗೂ ಈ ವಿಚಿತ್ರ ರೀತಿಯ ಹಲ್ಲಿಗಳು ಕತ್ತಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತವೆ ಹಾಗೂ ತಮ್ಮನ್ನ ತಾವು ರಕ್ಷಿಸಿಕೊಳ್ಳ ಬಲ್ಲ ಜೀವಿಗಳಾಗಿವೆ ಎಂದು ಆಫ್ರಿಕಾದ ವಿಜ್ಞಾನಿಗಳು

ಮಾಹಿತಿಯನ್ನು ನೀಡಿದ್ದಾರೆ.

## ಬೆಂಗಳೂರಿನ ಮಹಿಳಾ ವಿಜ್ಞಾನಿ ರೋಹಿಣಿಗೆ ಫ್ರಾನ್ಸ್ ದೇಶದ ಅತ್ಯುನ್ನತ ಪ್ರಶಸ್ತಿ ಪುರಸ್ಕಾರ



* ಬೆಂಗಳೂರು ನಗರದ ಮಹಿಳಾ ವಿಜ್ಞಾನಿ ರೋಹಿಣಿ ಗೋಡ್ಬೋಲೆ ಅವರು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಮಾಡಿದ ಒಳ್ಳೆಯ ಕೆಲಸ ಮತ್ತು ಕಾರ್ಯ ಸಾಧನೆಯ ಪ್ರತಿಫಲವಾಗಿ ಇವರಿಗೆ ಫ್ರಾನ್ಸ್ ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಆರ್ಡರ್ ನ್ಯಾಷನಲ್ ಡು ಮೆರಿಟ್ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.
* ಫ್ರಾನ್ಸ್ ಮತ್ತು ಭಾರತಿಯ ವಿಜ್ಞಾನ ವಿಭಾಗದಲ್ಲಿ ಮಹಿಳೆಯರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಈ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುತ್ತದೆ.
* ಪ್ರಸ್ತುತ ಬೆಂಗಳೂರಿನ ವಿಜ್ಞಾನಿಯಾದ ರೋಹಿಣಿ ಗೋಡ್ಬೋಲೆ ರವರು ಸೈನ್ಸ್ ಆಫ್ ಇಂಡಿಯಾದ 3 ಅಕಾಡೆಮಿಗಳ ಚುನಾಯಿತ ಸಹವರ್ತಿಯಾಗಿ ಕೆಲಸ ಮಾಡುತ್ತಿದ್ದು, ಮತ್ತು ಇವರು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಹೈ ಎನರ್ಜಿ ಫಿಸಿಕ್ಸ್ ಸೆಂಟರ್ ಫಾರ್ ನಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ.

## 2021ರ ಹರಿದ್ವಾರದ ಕುಂಭಮೇಳಕ್ಕೆ ಜನರ ಸುರಕ್ಷತೆ ಮತ್ತು ರಕ್ಷಣೆಗಾಗಿ NSG ಕಮಾಂಡೋಸ್ ನೇಮಕ



* ಉತ್ತರಾಖಂಡ್ ಸರ್ಕಾರವು 2021ರ ಮಾರ್ಚ್ ಏಪ್ರಿಲ್ ನಲ್ಲಿ ಜರುಗುವ ಕುಂಭಮೇಳದ ಮೆರವಣಿಗೆಯ ಸಮಯದಲ್ಲಿ ಭಯೋತ್ಪಾದನೇ ತಡೆಗಾಗಿ ಮತ್ತು ಅಲ್ಲಿನ ಜನರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಹರಿದ್ವಾರಕ್ಕೆ NSG ಕಮಾಂಡೋಗಳನ್ನು ರವಾನೆ ಮಾಡಲಾಗುತ್ತದೆ ಎಂದು ತಿಳಿಸಿದೆ.
* NSG ಮೇಜರ್ ಜನರಲ್ ವಿಎಸ್ ರಾನಡೆ ರವರು ಉತ್ತರಾಖಂಡ್ ಪ್ರದೇಶದ ಹರಿದ್ವಾರದ ಕುಂಭಮೇಳ ಮೆರವಣಿಗೆಯ ಸಂದರ್ಭದಲ್ಲಿ NSG ಕಮಾಂಡೋಗಳನ್ನೂ ಕಳುಹಿಸಿ ಕೊಡಲಾಗುತ್ತದೆ ಎಂದು ಉತ್ತರಾಖಂಡ್ ಪೊಲೀಸ್ ಕಮೀಷನರ್ ಅಶೋಕ್ ಕುಮಾರ್ ರವರಿಗೆ ಇತ್ತೀಚಿಗೆ ಮಾಹಿತಿಯನ್ನು ನೀಡಿದ್ದಾರೆ.

## HAL ನಿಂದ 83 ತೇಜಸ್ ಲಘು ಯುದ್ಧ ವಿಮಾನ ಖರೀದಿಗೆ ಪ್ರಧಾನಿ ಮೋದಿ ನೇತೃತ್ವದ ಸಂಪುಟ ಒಪ್ಪಿಗೆ



* ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ನಿಂದ 83 ತೇಜಸ್ ಲಘು ಯುದ್ಧ ವಿಮಾನವನ್ನು ಖರೀದಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ, ಹಾಗೂ ಈ ಯುದ್ಧ ವಿಮಾನಗಳಿಗೆ 48 ಕೋಟಿ ರೂ. ನೀಡಿ ಖರೀದಿಸಲಾಗುತ್ತದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.
* ಕೇಂದ್ರ ಸರ್ಕಾರದ ಸಚಿವ ಸಂಪುಟವು ಮಾರ್ಕ್ 1 ಎ ವರ್ಷನ್‌ನ ಲಘು ಯುದ್ಧ ಖರೀದಿಯ ಒಪ್ಪಂದಕ್ಕೆ ಅನುಮತಿಯನ್ನು ನೀಡಿದೆ, ಹಾಗೂ 83 ತೇಜಸ್ ಲಘು ಯುದ್ಧ ವಿಮಾನಗಳು ಮುಂದಿನ ದಿನಗಳಲ್ಲಿ ಭಾರತೀಯ ವಾಯು ಪಡೆಯಲ್ಲಿ ಕಾರ್ಯ ನಿರ್ವಹಿಸಲಿವೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರವರು ಮಾಹಿತಿಯನ್ನು ನೀಡಿದ್ದಾರೆ.


# 15-01-2021

## ಈ ಬಾರಿಯ ಗಣರಾಜ್ಯೋತ್ಸವಕ್ಕೆ ವಿದೇಶಿ ಅತಿಥಿ ಇಲ್ಲ : ವಿದೇಶಾಂಗ ಸಚಿವಾಲಯ



* ಈ ವರ್ಷ ಕೋವಿಡ್ ಕಾರಣದ ಹಿನ್ನೆಲೆಯಿಂದಾಗಿ ಈ ಬಾರಿಯ ಗಣರಾಜ್ಯೋತ್ಸವದ ಪಥ ಸಂಚಲನಕ್ಕೆ ಬೇರೆ ದೇಶದ ಯಾವ ಗಣ್ಯರೂ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಿಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅನುರಾಗ್ ಶ್ರೀವಾಸ್ತವ ಹೇಳಿದ್ದಾರೆ.
* ಸುಮಾರು 50 ವರ್ಷಗಳಲ್ಲೇ ಇದೇ ಮೊದಲ ಬಾರಿ ಮುಖ್ಯ ಅತಿಥಿಯಿಲ್ಲದ ಗಣರಾಜ್ಯೋತ್ಸವ ದಿನವನ್ನು ಆಚರಣೆ ಮಾಡಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿಯನ್ನು ನೀಡಿದೆ.

## ಜನವರಿ 15: ಇಂದು ರಾಷ್ಟ್ರೀಯ ಸೇನಾ ದಿನ (ArmyDay)




* ಭಾರತೀಯ ಯೋಧರ ಶೌರ್ಯ, ಪರಾಕ್ರಮ ಹಾಗೂ ದೇಶಕ್ಕಾಗಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸುವ ಮತ್ತು ಈಗಿನ ಸೈನಿಕರಲ್ಲಿ ಆತ್ಮಸ್ಥೈರ್ಯ ತುಂಬುವ ಸಲುವಾಗಿ ಮತ್ತು ಅವರ ಸೇವೆಯ ಸವಿ ನೆನಪಿಗಾಗಿ ಪ್ರತಿ ವರ್ಷ ಜನವರಿ 15 ರಂದು 'ರಾಷ್ಟ್ರೀಯ ಸೇನಾ ದಿನ'ವನ್ನು ಆಚರಣೆ ಮಾಡುತ್ತ ಬರಲಾಗುತ್ತಿದೆ.
* 1948ರ ಜನವರಿ 15ರಂದು ಭಾರತ ದೇಶದ ಮೊದಲ ಭಾರತೀಯ ಸೇನಾ ಕಮಾಂಡರ್ ಆಗಿ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ರವರು ಅಧಿಕಾರ ಸ್ವೀಕರಿಸಿದರು, ಮತ್ತು ಈ ದಿನದ ಸವಿ ನೆನಪಿಗಾಗಿ ರಾಷ್ಟ್ರೀಯ ಸೇನಾ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಪ್ರಸ್ತುತ ಭಾರತೀಯ ಸೇನೆಯು ವಿಶ್ವದಲ್ಲೇ 2ನೇ ಅತಿ ಹೆಚ್ಚು ಸೈನಿಕರನ್ನು ಹೊಂದಿರುವ ಸೇನಾಪಡೆಯಾಗಿದೆ.

## ಭಾರತ ಯುಎಇ, ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರಕ್ಕಾಗಿ ಒಪ್ಪಂದ



* ಇತ್ತೀಚೆಗೆ ಭಾರತ ಯುಎಇ ಕೇಂದ್ರ ಸಚಿವ ಸಂಪುಟವು ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರ ಒಪ್ಪಂದಕ್ಕೆ ಅನುಮೋದನೆ ನೀಡಿತು.
* ಈ ವೈಜ್ಞಾನಿಕ ಮತ್ತು ತಾಂತ್ರಿಕ ಒಪ್ಪಂದದಿಂದಾಗಿ ಉಪಗ್ರಹಗಳು, ರಾಡಾರ್, ಹವಾಮಾನ ಕೇಂದ್ರಗಳಿಂದ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಅನುಮತಿಯನ್ನು ನೀಡಿದೆ.
* ಭೂಕಂಪನ ಮತ್ತು ಸಾಗರ ಸೇವೆಗಳಿಗಾಗಿ ಕಾರ್ಯಾಚರಣೆಯ ಮತ್ತು ಭೂಕಂಪಶಾಸ್ತ್ರದಲ್ಲಿ ಭೂಕಂಪನ ಚಟುವಟಿಕೆಗಳ ಅಧ್ಯಯನದ ಜ್ಞಾನವನ್ನು ವಿನಿಮಯವನ್ನು ಮಾಡಿಕೊಳ್ಳಲು ದೇಶಗಳಿಗೆ ವಿಶ್ವ ಹವಾಮಾನ ಸಂಸ್ಥೆ ತಿಳಿಸಿದೆ.
* ಇದು ಹವಾಮಾನ ಬದಲಾವಣೆ ಮತ್ತು ಹವಾಮಾನಕ್ಕೆ ಸಂಭಧಿಸಿದ ವಿಪತ್ತುಗಳ ವಿರುದ್ಧ ಹೋರಾಡಲು ಈ ಎರಡು ದೇಶಗಳ ಬಲಪಡಿಸಲು ಈ ಒಪ್ಪಂದ ಅನುಕೂಲವಾಗಲಿದೆ.

# 16-01-2021

## ಗುಜರಾತ್ ರಾಜ್ಯದಲ್ಲಿನ ಏಕತಾ ಪ್ರತಿಮೆಗೆ ಸಂಪರ್ಕ ಕಲ್ಪಿಸುವ ಎಂಟು ರೈಲುಗಳಿಗೆ ಪ್ರಧಾನಿ ಮೋದಿ ಚಾಲನೆ



* ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ ರಾಜ್ಯದಲ್ಲಿನ ಕೆವಾಡಿಯಾದಲ್ಲಿರುವ ಸರ್ದಾರ್ ವಲ್ಲಭಾಯಿ ಪಟೇಲ ಅವರ ಏಕತಾ ಪ್ರತಿಮೆಯಿಂದ ದೇಶದ ವಿವಿಧ ಪ್ರದೇಶಗಳನ್ನು ಸಂಪರ್ಕಿಸುವ ಒಟ್ಟು ಎಂಟು ರೈಲುಗಳಿಗೆ ಜನವರಿ 17 ರಂದು ವಿಡಿಯೋ ಕಾನ್ಫರೆನ್ಸ್ ಸಭೆಯ ಮೂಲಕ ಚಾಲನೆ ನೀಡಲಿದ್ದಾರೆ. ಸಭೆಯಲ್ಲಿ ಪ್ರಧಾನಿ ಮೋದಿ ಚಾಲನೆ ನೀಡುವ ರೈಲುಗಳ ವಿವರ ಇಂತಿವೆ :
* ಕೆವಾಡಿಯಾ ವಾರಣಾಸಿ ಮಹಾಮಣ ಎಕ್ಸ್‌ಪ್ರೆಸ್ ರೈಲು, ವಾರದಲ್ಲಿ 1ದಿನ ಮಾತ್ರ.
* ದಾದರ್ ಕೆವಾಡಿಯಾ ಎಕ್ಸ್‌ಪ್ರೆಸ್ ದೈನಂದಿನ ರೈಲು.
* ಅಹಮದಾಬಾದ್ ಕೆವಾಡಿಯಾ ಜನಶತಾಬ್ದಿ ಎಕ್ಸ್‌ಪ್ರೆಸ್ ದೈನಂದಿನ ರೈಲು.
* ನಿಜಾಮುದ್ದೀನ್ ಕೆವಾಡಿಯಾ ಎಕ್ಸ್‌ಪ್ರೆಸ್ ರೈಲು ವಾರದಲ್ಲಿ 2ದಿನ ಮಾತ್ರ.
* ಕೆವಾಡಿಯಾ ರೇವಾ ಎಕ್ಸ್‌ಪ್ರೆಸ್ ರೈಲು ವಾರದಲ್ಲಿ 1 ದಿನ ಮಾತ್ರ.
* ಚೆನ್ನೈ ಕೆವಾಡಿಯಾ ಎಕ್ಸ್‌ಪ್ರೆಸ್ ರೈಲು ವಾರದಲ್ಲಿ 1 ದಿನ ಮಾತ್ರ.
* ಪ್ರತಾಪನಗರ ಕೆವಾಡಿಯಾ ಎಂಇಎಂಯು ದೈನಂದಿನ ರೈಲು.
* ಕೆವಾಡಿಯಾ ಪ್ರತಾಪನಗರ ಎಂಇಎಂಯು ದೈನಂದಿನ ರೈಲುಗಳಿಗೆ ಪ್ರಧಾನಿ ಮೋದಿ ಅವರು ರವಿವಾರ ನಡೆಯುವ ಕಾರ್ಯಕ್ರಮದಲ್ಲಿ ಚಾಲನೆ ನೀಡಲಿದ್ದಾರೆ ಎಂದು ತಿಳಿದು ಬಂದಿದೆ.

## ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಂದ ಚಾಲಕ ರಹಿತ ಮೆಟ್ರೊ ಬೋಗಿ ಬಿಡುಗಡೆ



* ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಭಾರತ್ ಅರ್ಥ್

ಮೂವರ್ಸ್ ಕಂಪನಿಯು ಸ್ವದೇಸೀಯವಾಗಿ ನಿರ್ಮಿಸಿರುವ ಮೊದಲ ಚಾಲಕ ರಹಿತ ಮೆಟ್ರೊ ಬೋಗಿಗಳನ್ನು ಇತ್ತೀಚಿಗೆ ಬಿಡುಗಡೆ ಮಾಡಿದರು.
* ಭಾರತ್ ಅರ್ಥ್ ಮೂವರ್ಸ್ ಕಂಪನಿಯು ತಯಾರಿಸಿರುವ ಚಾಲಕ ರಹಿತ ಮೆಟ್ರೊ ಬೋಗಿಗಳು 25 kv ವಿದ್ಯುತ್ ಬಳಸಿ ಸಂಚರಿಸುತ್ತವೆ, ಮತ್ತು ಈ ಬೋಗಿಗಳನ್ನು ಮುಂಬೈ ಮೆಟ್ರೊ ನಿಗಮಕ್ಕೆ ನೀಡಲಾಗುತ್ತದೆ. ಈ ಬೋಗಿಗಳಲ್ಲಿ ಸರಿ ಸುಮಾರು 2,280 ಜನರು ಪ್ರಯಾಣಿಸಬಹುದಾಗಿದೆ, ಜೊತೆಗೆ ಈ ಬೋಗಿಗಳಲ್ಲಿ ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಸಿಸಿಟಿವಿ ಕ್ಯಾಮೆರಾ ಸೌಲಭ್ಯ ನೀಡಲಾಗಿದೆ.

## ಕರ್ನಾಟಕದಲ್ಲಿ ಮೊದಲ ಶಿಪ್ಪಿಂಗ್ ಮತ್ತು ನೇವಿಗೇಶನ್ ಪರವಾನಗಿ ಕೇಂದ್ರ



* ಪ್ರಸ್ತುತ ಕರ್ನಾಟಕದ ರಾಜ್ಯದ ಕಾರವಾರದಲ್ಲಿ ಮೊದಲ ಶಿಪ್ಪಿಂಗ್ ಮತ್ತು ನೇವಿಗೇಶನ್ ಪರವಾನಗೆ ಕೇಂದ್ರ ಪ್ರಾರಂಭವಾಗಿದೆ. ಸೀ ಫೇರರ್ಸ್ ಸಂಸ್ಥೆಯು ಅಭ್ಯರ್ಥಿಗಳ ತರಬೇತಿ ಮತ್ತು ಕಲಿಕೆಯ ಅನುಭವವನ್ನು ಪರಿಗಣಿಸಿ ಲಿಖಿತ ಪರೀಕ್ಷೆ ಹಾಗೂ ಪ್ರಾಯೋಗಿಕ ಪರೀಕ್ಷೆ ನಡೆಸಿ ಕೇಂದ್ರವು ಪ್ರಮಾಣಪತ್ರವನ್ನು ನೀಡುತ್ತದೆ.
* ಈ ಮೊದಲು ಅಭ್ಯರ್ಥಿಗಳ ಪರೀಕ್ಷೆ ಮತ್ತು ಪ್ರಮಾಣಪತ್ರವನ್ನು ಪಡೆಯಲು ಮಹಾರಾಷ್ಟ್ರ, ಕೇರಳಕ್ಕೆ ರಾಜ್ಯವನ್ನು ಅವಲಂಬಿಸಲಾಗಿತ್ತು.
* ಶಿಪ್ಪಿಂಗ್ ಮತ್ತು ನೇವಿಗೇಶನ್ ಪರವಾನಗಿ ಕೇಂದ್ರದಿಂದ ಬಾರ್ಜ್, ಟಗ್ ಬೋಟ್ ನಡೆಸುವವರಿಗೆ ಮತ್ತು ಮಾಸ್ಟರ್ ಗ್ರೇಡ್ 1, ಗ್ರೇಡ್ 2, ಮತ್ತು 3, ಇಂಜಿನ್ ಡ್ರೈವರ್ ಇಂತಹ ಬೇರೆ ಬೇರೆ ಹುದ್ದೆಗಳಿಗೆ ಕಾರವಾರದಲ್ಲೇ ಪರವಾನಗಿ ಪತ್ರವನ್ನು ಈ ಕೇಂದ್ರವು ನೀಡಲಿದೆ.
* ನೇವಿಗೇಶನ್ ಹಾಗೂ ಶಿಪ್ಪಿಂಗ್ ಸಂಬಂಧಪಟ್ಟ ಪರೀಕ್ಷೆ ನಡೆಸಿ ಪ್ರಮಾಣಪತ್ರವನ್ನು ನೀಡಲು ಕರ್ನಾಟಕ ರಾಜ್ಯದ ಬಂದರು ಇಲಾಖೆಯು, ಬೋರ್ಡ್ ಆಫ್ ಎಕ್ಸಾಮಿನೇಶನ್ ಫಾರ್ ಸೀ ಫೇರರ್ಸ್ ಎಂಬ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

## ಕೊಲಾಬ್‌ಕ್ಯಾಡ್ (CollabCAD) ಸಾಫ್ಟ್ ವೇರ್




* ಇತ್ತೀಚಿಗೆ ಕೊಲಾಬ್‌ಕ್ಯಾಡ್ ಸಾಫ್ಟ್‌ವೇರ್ ತಂತ್ರಜ್ಞಾನವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ ಮತ್ತು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (CBSE) ಜಂಟಿಯಾಗಿ ಪ್ರಾರಂಭಿಸಿವೆ.
* ಕೊಲಾಬ್‌ಕ್ಯಾಡ್ ಸಾಫ್ಟ್‌ವೇರ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ, ಎಂಜಿನಿಯರಿಂಗ್ ಗ್ರಾಫಿಕ್ಸ್ ಅಧ್ಯಯನದ ಕ್ರಮವನ್ನು ಒದಗಿಸುತ್ತದೆ, ಹಾಗೂ ವಿದ್ಯಾರ್ಥಿಗಳಿಗೆ ಡಿಜಿಟಲ್ ವಿನ್ಯಾಸಗಳನ್ನು ರಚಿಸಲು ಉತ್ತಮ ವೇದಿಕೆಯನ್ನು ಕಲ್ಪಿಸುವ ಗುರಿಯನ್ನು ಕೊಲಾಬ್‌ಕ್ಯಾಡ್ ಸಾಫ್ಟ್‌ವೇರ್ ಹೊಂದಿದೆ.
* ಕೊಲಾಬ್‌ಕ್ಯಾಡ್ ಸಾಫ್ಟ್‌ವೇರ್ ದೇಶದಲ್ಲಿರುವ ಅಟಲ್ ಟಿಂಕರಿಂಗ್ ಲ್ಯಾಬ್‌ಗಳ ವಿದ್ಯಾರ್ಥಿಗಳಿಗೆ 3D ವಿನ್ಯಾಸಗಳನ್ನು ರಚಿಸಲು ಒಂದು ಒಳ್ಳೆಯ ಕಲಿಕೆಯ ವೇದಿಕೆಯನ್ನು ಕಲ್ಪಿಸುವದು ಈ ಸಾಫ್ಟ್‌ವೇರ್ ನ ಮುಖ್ಯ ಉದ್ದೇಶವಾಗಿದೆ.
* ಭಾರತದಲ್ಲಿನ 1 ಮಿಲಿಯನ್ ವಿದ್ಯಾರ್ಥಿಗಳನ್ನು ತಂತ್ರಜ್ಞರಾಗಿಸುವ ಗುರಿಯನ್ನು ಅಟಲ್ ಟಿಂಕರಿಂಗ್ ಲ್ಯಾಬ್ಸ್ ಹೊಂದಿದೆ.
* ಇತ್ತೀಚೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ISRO) 100ಅಟಲ್ ಟಿಂಕರ್ ಲ್ಯಾಬ್‌ಗಳನ್ನು ಅಳವಡಿಸಿಕೊಂಡು ಮತ್ತು ಬಾಹ್ಯಾಕಾಶದ ಬಗ್ಗೆ ಹಾಗೂ ವಿಷಯ ತಂತ್ರಜ್ಞಾನಗಳನ್ನು ಕಲಿಯಲು ವಿದ್ಯಾರ್ಥಿಗಳಿಗೆ ಉತ್ತೇಜನವನ್ನು ನೀಡುತ್ತಿದೆ.

## ಟ್ರಾಫಿಕ್ ವಿಚಾರದಲ್ಲಿ ಬೆಂಗಳೂರು ಜಗತ್ತಿನ 6ನೇ ಕೆಟ್ಟ ನಗರ



* ಇತ್ತೀಚಿಗೆ ಟಾಮ್‌ಟಾಮ್ ಟ್ರಾಫಿಕ್ ಇಂಡೆಕ್ಸ್ 2020ರ ವರದಿಯು ಬಿಡುಗಡೆಗೊಂಡಿದ್ದು, ಪ್ರಸ್ತುತ ಈಗಿನ ಟ್ರಾಫಿಕ್ ಸಮಸ್ಯೆಯ ವಿಚಾರದಲ್ಲಿ ಬೆಂಗಳೂರು ನಗರವು ಜಗತ್ತಿನ 6ನೇ ಹಾಗೂ ದೇಶದ 2ನೇ ಅತಿಕೆಟ್ಟ ನಗರವಾಗಿ ಕುಖ್ಯಾತಿ ಪಡೆದಿದೆ, ಮತ್ತು ಜಗತ್ತಿನ 416 ನಗರಗಳ ಪೈಕಿ ಟ್ರಾಫಿಕ್ ವಿಷಯದಲ್ಲಿ ಬೆಂಗಳೂರು 6 ನೇ ಕೆಟ್ಟ ನಗರವಾಗಿದೆ, ಎಂದು ಟಾಮ್ ಟಾಮ್ ಟ್ರಾಫಿಕ್ ಇಂಡೆಕ್ಸ್ ವರದಿಯನ್ನು ನೀಡಿದೆ.
* ಇನ್ನು ಟ್ರಾಫಿಕ್ ನಲ್ಲಿ ಮುಂಬೈ ನಗರವು ಜಗತ್ತಿನ 2ನೇ ಕೆಟ್ಟ ನಗರವಾಗಿದೆ ಎಂದು ಟಾಮ್‌ಟಾಮ್ ಟ್ರಾಫಿಕ್ ಇಂಡೆಕ್ಸ್ ತಿಳಿಸಿದೆ.

# 17-01-2021

## ಅತಿ ಹೆಚ್ಚು ತಾಪಮಾನ ದಾಖಲಾದ ವರ್ಷ 2020



* 2011 ರಿಂದ 2020ರ ಅವಧಿಯಲ್ಲಿ ಅತಿ ಹೆಚ್ಚು ತಾಪಮಾನ ದಾಖಲಾದ ವರ್ಷಗಳ ಮಾಹಿತಿಯನ್ನು ವಿಶ್ವ ಹವಾಮಾನ ಸಂಸ್ಥೆಯು ಬಿಡುಗಡೆಗೊಳಿಸಿದೆ.
* ಈ ಹಿಂದಿನ ವರ್ಷಗಳಾದ 2015, 2016 ಮತ್ತು 2019, ಈ ಮೂರು ವರ್ಷಗಳಿಗೆ ಹೋಲಿಸಿದಾಗ 2020ನೇ ವರ್ಷ ಅತಿ ಹೆಚ್ಚು ತಾಪಮಾನ ದಾಖಲಾದ ವರ್ಷವಾಗಿದೆ, ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಯಂಟೊನಿಯೊ ಗುಟೆರಸ್ ಮಾಹಿತಿಯನ್ನು ನೀಡಿದ್ದಾರೆ.
* ಮುಂದಿನ ಹವಾಮಾನದ ದಿನಗಳಲ್ಲಿ ಇದೆ ತರಹ ತಾಪಮಾನ ಹೆಚ್ಚಾದಲ್ಲಿ ಅದು ಜನರ ಜೀವನದ ಮೇಲೆ ಪರಿಣಾಮ ಬೀಳುವುದು ಸಂಶಯವಿಲ್ಲ ಹಾಗೂ ದುರಂತ ಕೂಡ ಕಾಣಬಹುದು ಎಂದು ವಿಶ್ವ ಹವಾಮಾನ ಸಂಸ್ಥೆಯು ತಿಳಿಸಿದೆ.

## ಮೊದಲ ಬಾರಿಗೆ ಸೇನಾ ದಿನ ಪರೇಡ್ ನಲ್ಲಿ ಡ್ರೋಣ್ ಕಾರ್ಯಾಚರಣೆ



* ಇತ್ತೀಚಿಗೆ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆದ ಸೇನಾ ದಿನದ ಪರೇಡ್ ನಲ್ಲಿ ಭಾರತೀಯ ಸೇನೆಯು ಇದೇ ಮೊದಲ ಬಾರಿಗೆ 75 ಡ್ರೋಣ್ ಗಳು ಭಾಗವಹಿಸಿದ್ದವು, ಈ ಡ್ರೋಣ್ ಗಳಿಂದ ದಾಳಿ ಮತ್ತು ಪ್ರಥಮ ಚಿಕಿತ್ಸೆಯ ಸಾಧನಗಳ ಪೂರೈಕೆಯ ಕಾರ್ಯ ವೈಖರಿಯ ಪ್ರದರ್ಶನವನ್ನು ತೋರಿದವು, ಈ ಮೂಲಕ ಭಾರತೀಯ ಸೇನೆಯ ಸಾಮರ್ಥ್ಯ ಪ್ರದರ್ಶಿಸಲಾಯಿತು.

## ಭಾರತದ ಮೊದಲ ಸ್ವದೇಶಿ 9mm ಮಷೀನ್ ಗನ್ (ASMI ಅಸ್ಮಿ)



* ಇದೀಗ ಭಾರತವು ಸ್ವದೇಶಿ ನಿರ್ಮಿತ 9mm ಮೆಷಿನ್ ಪಿಸ್ತೂಲ್ (ASMI)ಅನ್ನು ಅಭಿವೃದ್ಧಿಪಡಿಸಿದೆ.
*ರಕ್ಷಣಾ ವ್ಯವಸ್ಥೆಗೆ ಉತ್ತೇಜನ ನೀಡುವ ಸಲುವಾಗಿ DRDO ಮತ್ತು ಭಾರತೀಯ ಸೇನೆ ಜಂಟಿಯಾಗಿ ಈ ಮಷೀನ್ ಗನ್ ಅನ್ನು ಆತ್ಮ ನಿರ್ಬರ್ ಯೋಜನೆ ಅಡಿಯಲ್ಲಿ ತಯಾರಿಸಲಾಗಿದೆ ಎಂದು ಇನ್ ಫೆಂಟ್ರಿ ಸ್ಕೂಲ್ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಬನ್ಸೋಡ್'ನ ಯುವ ಅಧಿಕಾರಿಯವರು ತಿಳಿಸಿದ್ದಾರೆ.
* ಭಾರತೀಯ ಸೇನೆಯ ಪದಾತಿದಳ ಶಾಲೆ ಮತ್ತು ಪುಣೆಯ DRDOದ ಆರ್ಮಮೆಂಟ್ ರಿಸರ್ಚ್ ಅಂಡ್ ಡೆವಲಪ್ ಮೆಂಟ್ ಎಸ್ಟಾಬ್ಲಿಷ್ ಮೆಂಟ್ (ARDE) ಈ9mm ಮಷೀನ್ ಗನ್ ಅನ್ನು ತಯಾರಿಸಲಾಗಿದೆ ಎಂದು DRDO ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆಯನ್ನು ನೀಡಿದೆ, ಹಾಗೂ ಈ ಮೆಷಿನ್ ಪಿಸ್ತೂಲ್ ಗೆ "ಅಸ್ಮಿ" ಎಂದು ನಾಮಕರಣ ಮಾಡಲಾಗಿದೆ.

# 18-01-2021

## ಚೀನಾದಿಂದ ಬೆಂಗಳೂರಿಗೆ ಮೆಟ್ರೋ ಬೋಗಿಗಳ ಆಮದು



* ಬರುವ 2022 ನೇ ವರ್ಷದಲ್ಲಿ ಚೀನಾ ರಾಷ್ಟ್ರದಿಂದ ಬೆಂಗಳೂರಿಗೆ ಮೆಟ್ರೋ ಬೋಗಿಗಳ ಬರಲಿವೆ ಎಂದು ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಶನ್ ಇತ್ತೀಚಿಗೆ ಮಾಹಿತಿಯನ್ನು ನೀಡಿದೆ.
* ಆಂಧ್ರಪ್ರದೇಶದಲ್ಲಿರುವ ಪ್ಲಾಂಟ್‌ನಲ್ಲಿ ಅಂದಾಜು 1600 ಕೋಟಿ ರೂಪಾಯಿ ವೆಚ್ಚದಲ್ಲಿ ಮೆಟ್ರೋ ಬೋಗಿಗಳ ನಿರ್ಮಾಣ ಕಾರ್ಯ ಭರದಿಂದ ನಡೆದಿದ್ದು, ಆಂಧ್ರಪ್ರದೇಶದಿಂದ ಒಟ್ಟು 192 ಬೋಗಿಗಳು, ಹಾಗೂ ಚೀನಾದಿಂದ 24 ಬೋಗಿಗಳು ಸೇರಿ ಒಟ್ಟಾರೆ 216 ಬೋಗಿಗಳು 2022ಕ್ಕೆ ಬೆಂಗಳೂರಿಗೆ ಬರಲಿವೆ ಎಂದು BMRCL ತಿಳಿಸಿದೆ.

## ಅಮೆರಿಕದ ಅತೀ ದೊಡ್ಡ ರೈತ ಬಿಲ್‌ಗೇಟ್ಸ್



* ಸಾಫ್ಟ್‌ವೇರ್ ಮಾಂತ್ರಿಕ ಎಂದೇ ಪ್ರಖ್ಯಾತಿ ಪಡೆದಿರುವ ಹಾಗೂ ಮೈಕ್ರೋಸಾಫ್ಟ್ ಸ್ಥಾಪಕರಾಗಿರುವ ಬಿಲ್‌ಗೇಟ್ಸ್ ರವರು ಅಮೆರಿಕದ ಅತೀ ಹೆಚ್ಚು ಕೃಷಿ ಭೂಮಿಯನ್ನು ಹೊಂದುವ ಮೂಲಕ ಅಮೆರಿಕಾದ ಅತಿ ದೊಡ್ಡ ರೈತ ಎನಿಸಿಕೊಂಡಿದ್ದಾರೆ. ಪ್ರಸ್ತುತ ಅಮೆರಿಕದ ರಾಜ್ಯಗಳಲ್ಲಿನ 2.42 ಲಕ್ಷ ಎಕರೆ ರೈತರ ಭೂಮಿಯನ್ನು ಇವರು ಖರೀದಿ ಮಾಡಿದ್ದಾರೆ.
* ಬಿಲ್‌ಗೇಟ್ಸ್ ರವರು ಅಮೆರಿಕದಲ್ಲಿನ ಲೂಸಿಯಾನಾದಲ್ಲಿ 69 ಸಾವಿರ ಎಕರೆ, ಅರ್ಕಾನ್ಸಸ್‌ನಲ್ಲಿ 48 ಸಾವಿರ ಎಕರೆ, ಅರಿಜೋನಾ ರಾಜ್ಯದಲ್ಲಿ 25 ಸಾವಿರ ಎಕರೆಯಷ್ಟು ರೈತರ ಜಮೀನನ್ನು ಬಿಲ್‌ಗೇಟ್ಸ್ ರವರು ಖರೀದಿ ಮಾಡಿದ್ದು, ಈ ಕೃಷಿ ಭೂಮಿಯಲ್ಲಿ ಏನು ಮಾಡಲಿದ್ದಾರೆ ಎಂದು ಮಾಹಿತಿಯನ್ನು ಬಿಲ್‌ಗೇಟ್ಸ್ ರವರು ನೀಡಿಲ್ಲ.

## UK G7 ಶೃಂಗ ಸಭೆಗೆ ಭಾರತದ ಪ್ರಧಾನಿ ಮೋದಿಗೆಆಮಂತ್ರಣ




* ಯುನೈಟೆಡ್ ಕಿಂಗ್‌ಡಮ್(UK)ನಲ್ಲಿ ಇದೆ ಜೂನ್ 11 ರಿಂದ 13ರ ವರೆಗೆ ನಡೆಯಲಿರುವ ಜಿ7 ಶೃಂಗ ಸಭೆಯಲ್ಲಿ ಅತಿಥಿಯಾಗಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿಯವರಿಗೆ UK ಆಮಂತ್ರಣ ನೀಡಿದೆ.
* ಜಿ7 ಶೃಂಗಸಭೆಯಲ್ಲಿ ಕೊರೊನಾ ಸೋಂಕು, ಹವಾಮಾನ ವೈಪರೀತ್ಯ, ತಂತ್ರಜ್ಞಾನಗಳ ಬದಲಾವಣೆಗಳು ಸೇರಿ ವೈಜ್ಞಾನಿಕ ಸಂಶೋಧನೆಗಳು, ಮುಕ್ತ ವ್ಯಾಪಾರ ಮಾಹಿತಿಯ ವಿಚಾರಗಳ ಕುರಿತು ಪ್ರಮುಖವಾಗಿ ಚರ್ಚೆಯಾಗಲಿದೆ ಎಂದು ಬ್ರಿಟಿಷ್ ಹೈಕಮಿಷನ್ ಮಾಹಿತಿಯನ್ನು ಹಂಚಿಕೊಂಡಿದೆ.

## ಕಾರ್ಮಿಕ ಚಳವಳಿ ಇತಿಹಾಸ ತಿಳಿಸುವ ಮ್ಯೂಸಿಯಂ ಕೇರಳದಲ್ಲಿ ಸ್ಥಾಪನೆ



* ಕೇರಳದ ಪ್ರವಾಸೋದ್ಯಮ ಅಭಿವೃದ್ಧಿ ಇಲಾಖೆ ವತಿಯಿಂದ ಕಾರ್ಮಿಕ ಚಳವಳಿ ಇತಿಹಾಸ ತಿಳಿಸುವ ವಸ್ತು ಸಂಗ್ರಹಾಲಯವನ್ನು (ಮ್ಯೂಸಿಯಂ) ಅನ್ನು ಕೇರಳದ ಅಳಪ್ಪುಳ ಎಂಬಲ್ಲಿ ಸ್ಥಾಪನೆ ಮಾಡುವುದಾಗಿ ಇತ್ತೀಚಿಗೆ ಕೇರಳ ಸರ್ಕಾರ ತಿಳಿಸಿದೆ.

* ಕೇರಳದ ಅಳಪ್ಪುಳ ಎಂಬ ನಗರದಲ್ಲಿ ಈ ಮೊದಲು ಬಂದರು ಹಾಗೂ ತೆಂಗಿನನಾರು ಕುರಿತ ಮಾಹಿತಿ ನೀಡುವ ಮ್ಯೂಸಿಯಂಗಳನ್ನೂ ಸ್ಥಾಪನೆ ಮಾಡಲಾಗಿದ್ದು, ಮತ್ತೆ ಇದೀಗ ಈ ಅಳಪ್ಪುಳದಲ್ಲಿ ಸ್ಥಾಪನೆಯಾಗುವ ಮ್ಯೂಸಿಯಂನಲ್ಲಿ ಕಾರ್ಮಿಕ ಚಳವಳಿಗೆ ಸಂಬಂಧಿಸಿದ ದಾಖಲೆಗಳು, ಮತ್ತು ಅದರ ಚಿತ್ರಗಳನ್ನು ಈ ಮ್ಯೂಸಿಯಂನಲ್ಲಿ ಸ್ಥಾಪಿಸಲಾಗುವದು ಎಂದು ಕೇರಳ ಸರ್ಕಾರದ ಪ್ರವಾಸೋದ್ಯಮ ಅಭಿವೃದ್ಧಿ ಇಲಾಖೆ ತಿಳಿಸಿದೆ.

## ಹಿಂದೂಸ್ತಾನಿ ಗಾಯಕ ಉಸ್ತಾದ್ ಗುಲಾಂ ಮುಸ್ತಫಾಖಾನ್ ಇನ್ನಿಲ



* ಖ್ಯಾತ ಹಿಂದೂಸ್ತಾನಿ ಗಾಯಕ ಉಸ್ತಾದ್ ಗುಲಾಂ ಮುಸ್ತಫಾಖಾನ್ ರವರು ಇತ್ತೀಚಿಗೆ ತಮ್ಮ 89ನೇ ವಯಸ್ಸಿನಲ್ಲಿ ವಿಧಿವಶರಾದರು.

* ಮೂಲತಃ ಸಂಗೀತಗಾರರ ಕುಟುಂಬದವರಾದ ಉಸ್ತಾದ್ ಗುಲಾಂ ಅವರು 1931ರ ಮಾರ್ಚ್ 3ರಂದು ಉತ್ತರ ಪ್ರದೇಶದ ಬದಾಯುಂನಲ್ಲಿ ಜನಿಸಿದರು, ಮತ್ತು ತಮ್ಮ ಹಿಂದೂಸ್ತಾನಿ ಸಂಗೀತದ ಪ್ರಾಥಮಿಕ ಶಿಕ್ಷಣವನ್ನು ಅವರ ತಂದೆಯವರಾದ ಉಸ್ತಾದ್ ವಾರಿಸ್ ಹುಸೇನ್ ಖಾನ್ ರಲ್ಲಿ ಅಭ್ಯಾಸ ಮಾಡಿದ್ದರು.

* ಹಿಂದೂಸ್ತಾನಿ ಗಾಯಕ ಉಸ್ತಾದ್ ಗುಲಾಂ ಅವರಿಗೆ 1991ರಲ್ಲಿ ಶಾಸ್ತ್ರೀಯ ಸಂಗೀತ ಕ್ಷೇತ್ರದ ಸಾಧನೆ ಪರಿಗಣಿಸಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಲಾಗಿತ್ತು, ಮತ್ತು 2006ರಲ್ಲಿ ಪದ್ಮಭೂಷಣ ಹಾಗೂ 2018ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿತ್ತು, ಇದಾದ ನಂತರ 2003ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಗಿತ್ತು.

## ಭಾರತ ದೇಶದ ಮೊದಲ ಏರ್ ಟ್ಯಾಕ್ಸಿ ಸೇವೆಗೆ ಚಾಲನೆ



* ಭಾರತ ಸರ್ಕಾರದ ಉದಯ್ ಯೋಜನೆಯಡಿಯಲ್ಲಿ, ಭಾರತ ದೇಶದ ಮೊದಲ ಏರ್ ಟ್ಯಾಕ್ಸಿ ಸೇವೆಯನ್ನು

ಹರಿಯಾಣ ರಾಜ್ಯದಲ್ಲಿ ಪ್ರಾರಂಭಿಸಿದೆ, ಈಗಿನ ಹರಿಯಾಣ ರಾಜ್ಯದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ರವರು "ಚಂಡೀಗಢ ಹಿಸಾರ್" ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್ ಟ್ಯಾಕ್ಸಿ ಸೇವೆಗೆ ಇತ್ತೀಚಿಗೆ ಚಾಲನೆ ನೀಡಿದರು.

* ಹರಿಯಾಣ ರಾಜ್ಯದಲ್ಲಿ ಚಾಲನೆಗೊಂಡಿರುವ ಈ ಏರ್ ಟ್ಯಾಕ್ಸಿ ಇಂದಾಗಿ ಕೇವಲ 45 ನಿಮಿಷಗಳಲ್ಲಿ ಚಂಡೀಗಢದಿಂದ ಹಿಸಾರ್‌ಗೆ ಪ್ರಯಾಣಿಸಬಹುದಾಗಿದೆ, ಈ ಏರ್ ಟ್ಯಾಕ್ಸಿ ಯಲ್ಲಿ ಒಟ್ಟು 4ಸೀಟುಗಳನ್ನೂ ನಿಗದಿಪಡಿಸಲಾಗಿದೆ, ಅದರಲ್ಲಿ 1 ಸೀಟು ಚಾಲಕನಿಗೆ ಇನ್ನುಳಿದ 3 ಸೀಟುಗಳಲ್ಲಿ ಪ್ರಯಾಣಿಕರು ಪ್ರಯಾಣಿಸಬಹುದು ಎಂದು ಹರಿಯಾಣ ಸರ್ಕಾರ ತಿಳಿಸಿದೆ.

* ಕೇಂದ್ರ ಸರ್ಕಾರವು ಈ ಯೋಜನೆಯನ್ನು ಶೀಘ್ರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ವಿಸ್ತರಿಸುವುದಾಗಿ ಚಿಂತನೆ ನಡೆಸಿದೆ.

## ವಿಜಯಪುರದಲ್ಲಿ ಇಂಡಿಯಾ ರಿಸರ್ವ್ ಬೆಟಾಲಿಯನ್ (IRB) ಉದ್ಘಾಟನೆ



* ಕೇಂದ್ರ ಗೃಹ ಸಚಿವರಾದ ಅಮಿತ್ ಷಾ ಇತ್ತೀಚಿಗೆ ಕರ್ನಾಟಕಕ್ಕೆ ಭೇಟಿ ನೀಡದ ವೇಳೆಯಲ್ಲಿ ಹಲವಾರು ಯೋಜನೆಗಳಿಗೆ ಚಾಲನೆಯನ್ನು ನೀಡಿದ್ದು, ಅದರಲ್ಲಿ ಒಂದಾದ ಪೊಲೀಸ್ ಗೃಹ 2020 ಕಾರ್ಯಕ್ರಮದಡಿಯಲ್ಲಿ ನಿರ್ಮಿಸಲಾಗಿರುವ ಪೊಲೀಸ್ ಕ್ವಾಟರ್ಸ್, ಪೊಲೀಸ್ ಗೃಹ 2025 ಹಾಗೂ ವಿಜಯಪುರದ ಇಂಡಿಯಾ ರಿಸರ್ವ್ ಬೆಟಾಲಿಯನ್ (IRB) ಗೆ ಕೇಂದ್ರ ಗೃಹ ಸಚಿವರಾದ ಅಮಿತ್ ಷಾರವರು ಚಾಲನೆ ನೀಡಿದರು.

## ಭಾರತೀಯ ಸೇನೆಯಿಂದ 60 ಗಂಟೆಗಳಲ್ಲಿ 110 ಅಡಿ ಉದ್ದದ ಸೇತುವೆ ನಿರ್ಮಾಣ



* ಭಾರತೀಯ ಸೇನೆಯ ಗಡಿ ರಸ್ತೆ ಸಂಸ್ಥೆ (BRO) ಕೇವಲ 60 ಗಂಟೆಗಳಲ್ಲಿ ಸೇತುವೆಯೊಂದನ್ನು ನಿರ್ಮಿಸುವ ಮೂಲಕ ನೂತನ ದಾಖಲೆ ಮಾಡಿದೆ.

* ಪ್ರಸ್ತುತ ಭಾರತೀಯ ಸೇನೆಯು ಜಮ್ಮು ಶ್ರೀನಗರ ಹೆದ್ದಾರಿಯಲ್ಲಿರುವ ಕೇಲಾ ಮೋರ್‌ನಲ್ಲಿನ ಎಂಬಲ್ಲಿ 110 ಅಡಿ ಉದ್ದದ ಸೇತುವೆಯನ್ನು(ಬ್ರಿಜ್) ಪ್ರೀ ಫ್ಯಾಬ್ರಿಕೇಟೆಡ್ ಉಕ್ಕಿನ ಸಲಕರಣೆಗಳನ್ನು ಬಳಸಿ ಕೇವಲ 60 ಗಂಟೆಗಳ ಸಮಯದಲ್ಲಿ ನಿರ್ಮಿಸಿದೆ. ಈ ಸೇತುವೆ ನಿರ್ಮಾಣದ ಕೀರ್ತಿ ಭಾರತೀಯ ಸೇನೆಗೆ ಸೇರಿದೆ, ಎಂದು BRO ಅಧಿಕಾರಿಗಳು ಮಾಹಿತಿಯನ್ನು ನೀಡಿದ್ದಾರೆ.

## 150 ನೂತನ ತುರ್ತು ಸೇವೆಗಳ ಸಹಾಯ ವ್ಯವಸ್ಥೆಯ ವಾಹನಗಳಿಗೆ ಅಮಿತ್ ಷಾ ರಿಂದ ಚಾಲನೆ




* ಇದೆ ಜನೇವರಿ 16 ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ರವರು ಬೆಂಗಳೂರಿನಲ್ಲಿ, "ಒಂದು ಭಾರತ ಒಂದು ತುರ್ತು ಸಂಖ್ಯೆ 112" ಕಾರ್ಯಕ್ರಮದಡಿಯಲ್ಲಿ ತುರ್ತು ಸೇವೆಗಳ ಸಹಾಯ ವ್ಯವಸ್ಥೆ (ERSS)ಯ 150 ನೂತನ ವಾಹನಗಳಿಗೆ ಚಾಲನೆಯನ್ನು ನೀಡಿದರು.

* ಈ ವಾಹನಗಳು ಮಹಿಳೆಯರು ಮತ್ತು ಮಕ್ಕಳು ಹಾಗೂ ಸಂಕಷ್ಟದಲ್ಲಿರುವ ನಾಗರಿಕರಿಗೆ ತುರ್ತು ಸೇವೆಯನ್ನು ನೀಡುತ್ತವೆ ಎಂದು ಸರ್ಕಾರ ತಿಳಿಸಿದೆ.

* ಈ ಮೊದಲು ಕರ್ನಾಟಕ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಒಟ್ಟು 505 ತುರ್ತು ಸೇವೆಯ ವಾಹನಗಳು ಕಾರ್ಯ ನಿರ್ವಹಿಸುತ್ತಿರುವುದಾಗಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ರವರು ತಿಳಿಸಿದ್ದಾರೆ, ಪ್ರಸ್ತುತ ಹೊಸದಾಗಿ 150 ವಾಹನಗಳನ್ನು ಮತ್ತೆ ಸೇರ್ಪಡೆ ಮಾಡಲಾಗಿದೆ.

# 19-01-2021

## ಈ ವರ್ಷದ ಗಣರಾಜ್ಯೋತ್ಸವ ಪರೇಡ್ ನಲ್ಲಿ ರಫೇಲ್ ಫೈಟರ್ ಜೆಟ್ ಹಾರಾಟ



* ಇತ್ತೀಚಿಗೆ ಭಾರತೀಯ ವಾಯುಪಡೆಯ ಬತ್ತಳಿಕೆಗೆ ಸೇರ್ಪಡೆಯಾಗಿರುವ ರಫೇಲ್ ಫೈಟರ್ ಜೆಟ್‌ಗಳನ್ನು, ಇದೆ ಮೊದಲ ಬಾರಿಗೆ ಗಣರಾಜ್ಯೋತ್ಸವದ ಪರೇಡ್

ನಲ್ಲಿ ಭಾಗವಹಿಸಿ ನೋಡುಗರಿಗೆ ಖುಷಿಯನ್ನು ನೀಡಲಿವೆ ಎಂದು ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಇಂದ್ರನೀಲ್ ನಂದಿ ಅವರು ಮಾಹಿತಿಯನ್ನು ನೀಡಿದ್ದಾರೆ.
* ಈ ಜೆಟ್ ವಿಮಾನಗಳನ್ನು ಫ್ರಾನ್ಸ್ ದೇಶದಿಂದ ಖರೀದಿಸಲಾಗಿದೆ.

## ಡಿಆರ್‌ಡಿಒ (DRDO)ದಿಂದ ಬೈಕ್ ಆಂಬುಲೆನ್ಸ್ ಅಭಿವೃದ್ಧಿ



* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ಯು 'ರಕ್ಷಿತಾ' ಎಂಬ ಯೋಜನೆಯ ಮೂಲಕ '350CC' ಸಾಮರ್ಥ್ಯದ ಒಟ್ಟು 21 ರಾಯಲ್ ಎನ್‌ಫಿಲ್ಡ್ ಬೈಕ್ ಆಂಬುಲೆನ್ಸ್‌ಗಳನ್ನು ಅಭಿವೃದ್ಧಿಪಡಿಸಿದೆ.
* ಈ ಬೈಕ್ ಆಂಬುಲೆನ್ಸ್‌ಗಳನ್ನು ತುರ್ತು ಸೇವೆಗಳಿಗಾಗಿ ಭಾರತೀಯ ಸೇನೆಯ ಒಂದು ಅಂಗವಾಗಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆ(CRPF)ಗೆ ಡಿಆರ್‌ಡಿಒ ಗೆ ನೀಡಿದೆ.
* ಈ ಬೈಕ್ ಆಂಬುಲೆನ್ಸ್‌ಗಳನ್ನು ಅಣು ವೈದ್ಯಕೀಯ ಮತ್ತು ವಿಜ್ಞಾನ ಸಂಸ್ಥೆಯು ಅಭಿವೃದ್ಧಿಪಡಿಸಿದ್ದು, ಉಗ್ರರು ನೆಲೆಸಿರುವ ಪ್ರದೇಶಗಳಲ್ಲಿ ಸಾಮಾನ್ಯ ಜನರಿಗೆ ತೊಂದರೆಯಾದಾಗ ತುರ್ತು ಚಿಕಿತ್ಸೆ ನೀಡಿ ಆಸ್ಪತ್ರೆಗೆ ಕರೆದೊಯ್ಯಲು ಈ ಬೈಕ್ ಆಂಬುಲೆನ್ಸ್ ಗಳನ್ನು ಬಳಸಲಾಗುತ್ತದೆ ಎಂದು ಸಿಆರ್‌ಪಿಎಫ್ ಮುಖ್ಯಸ್ಥ ಎ.ಪಿ. ಮಹೇಶ್ವರಿ ಮಾಹಿತಿಯನ್ನು ನೀಡಿದ್ದಾರೆ.

## ಖ್ಯಾತ ಆಂಕೊಲಾಜಿಸ್ಟ್, ಡಾ.ವಿ. ಶಾಂತಾ ನಿಧನ



* ಭಾರತದ ಖ್ಯಾತ ಅಂಕೊಲಾಜಿಸ್ಟ್, ಡಾ.ವಿ.ಶಾಂತಾ ಅವರು ಇತ್ತೀಚಿಗೆ ವಿಧಿವಶರಾಗಿದ್ದಾರೆ.
* ಭಾರತ ಸರ್ಕಾರವು ದೇಶದ 2ನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಮ್ಯಾಗ್ಸೆಸೆ ಪ್ರಶಸ್ತಿ, ಪದ್ಮಶ್ರೀ, ಮತ್ತು ಪದ್ಮಭೂಷಣ, ಪದ್ಮ ವಿಭೂಷಣ ಸೇರಿ ಇಂತಹ ಹಲವು ಪ್ರಶಸ್ತಿಗಳನ್ನು ಡಾ. ವಿ. ಶಾಂತಾ ಅವರಿಗೆ ನೀಡಿ ಗೌರವಿಸಲಾಗಿದೆ.
* ಶಾಂತಾರವರು 1949 ರಲ್ಲಿ MBBS ಪದವಿ ಪಡೆದಿದ್ದರು, ಪ್ರಸ್ತುತ ಇವರು ಚೆನ್ನೈನ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ನ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

## ಭಾರತೀಯ ಮೆಸೇಜಿಂಗ್ ಆಪ್ 'ಹೈಕ್' ಕಾರ್ಯ ಸ್ಥಗಿತ




* 2012ರಲ್ಲಿ ಭಾರತೀಯರು ಅಭಿವೃದ್ಧಿಪಡಿಸಿದ್ದ 'ಹೈಕ್'(Hike) ಎಂಬ ಮೆಸೇಜಿಂಗ್ ಆಪ್ ಕಾರ್ಯವನ್ನು ನಿಲ್ಲಿಸುತ್ತಿದೆ, ಎಂದು ಹೈಕ್ ಮೆಸೇಜಿಂಗ್ ನ ಸಂಸ್ಥಾಪಕ ಮತ್ತು ಸಿಇಒ ಕವಿನ್ ಭಾರತಿ ಮಿತ್ತಲ್ ಟ್ವೀಟ್ ಮಾಡುವ ಮೂಲಕ ಮಾಹಿತಿ ನೀಡಿದ್ದಾರೆ.
* ಹೈಕ್ ಮೆಸೇಜಿಂಗ್ ಅಯಪ್ ಸರಿ ಸುಮಾರು 1.4 ಬಿಲಿಯನ್ ಡಾಲರ್ ಮೌಲ್ಯದ ಅಪ್ ಇದಾಗಿತ್ತು, ಆಗಿನ ಸಮಯದಲ್ಲಿ ವಾಟ್ಸಾಪ್‌ಗೆ ಪರ್ಯಾಯ ಆಪ್ ಎಂದು ಪ್ರಖ್ಯಾತಿ ಪಡೆದಿತ್ತು, ಇದೀಗ ಈ ಆಪ್ ಅನ್ನು ಸ್ಥಗಿತಗೊಳ್ಳುತ್ತಿದ್ದು, ಭಾರತೀಯರಿಗೆ ನಿರಾಸೆ ಮೂಡಿಸಿದ್ದು, ಈ ಕುರಿತ ಹೆಚ್ಚಿನ ಮಾಹಿತಿಯನ್ನು ಕವಿನ್ ಭಾರತಿ ಮಿತ್ತಲ್ ರವರು ಹಂಚಿಕೊಂಡಿಲ್ಲ.

## ಕರ್ನಾಟಕ ರಾಜ್ಯದಲ್ಲಿ ಜನಸೇವಕ ಮತ್ತು ಗ್ರಾಮ ಒನ್ ಸೇವೆ ಯೋಜನೆ ಪ್ರಾರಂಭ




* ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದ ಹಳ್ಳಿ ಮತ್ತು ಪಟ್ಟಣ ಜನತೆಗೆ ಅನುಕೂಲವಾಗಲೆಂದು, ಜನಸೇವಕ ಹಾಗೂ ಗ್ರಾಮ ಒನ್ ಸೇವೆಯ ಯೋಜನೆಯನ್ನು ಬೆಂಗಳೂರಿನಲ್ಲಿ ಜಾರಿಗೆಗೊಳಿಸಿದೆ, ಮತ್ತು ಇದನ್ನು ಶೀಘ್ರದಲ್ಲಿ ರಾಜ್ಯದ ಗ್ರಾಮಗಳಿಗೂ ವಿಸ್ತರಣೆಮಾಡಲಾಗುವದು ಎಂದು ಸರ್ಕಾರ ತಿಳಿಸಿದೆ.
* ಈ ಯೋಜನೆ ಮೂಲಕ ಜನರು ತಮ್ಮ ತಮ್ಮ ಗ್ರಾಮಗಳಲ್ಲಿ ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಪಿಂಚಣಿ, ವೃದ್ಧಾಪ್ಯ ವೇತನ, ವಿಧವಾ ವೇತನ, ಆರೋಗ್ಯ ಕಾರ್ಡ್, ಹಿರಿಯ ನಾಗರಿಕ ಗುರುತಿನ ಚೀಟಿ ಸೇವೆಗಳ ಜೊತೆಗೆ ಮೈಕ್ರೋ ಬ್ಯಾಂಕಿಂಗ್ ಸೇವೆ ಪ್ರಾರಂಭವಾಗಲಿದೆ ಎಂದು ರಾಜ್ಯ ಸರ್ಕಾರ ಮಾಹಿತಿಯನ್ನು ನೀಡಿದೆ.
* ಪ್ರಸ್ತುತ ಈ ಜನಸೇವಕ ಯೋಜನೆಯು ಬೆಂಗಳೂರಿನ ರಾಜಾಜಿನಗರ, ದಾಸರಹಳ್ಳಿ, ಬೊಮ್ಮನಹಳ್ಳಿ, ಮಹದೇವಪುರ, ಎಂಬ ಪ್ರದೇಶಗಳಲ್ಲಿ ಜಾರಿಯಾಗಿದ್ದು, ಶೀಘ್ರದಲ್ಲೇ ರಾಜ್ಯದ

ಎಲ್ಲಕಡೆಗೂ ಈ ಯೋಜನೆ ಜಾರಿಯಾಗಲಿದೆ ಎಂದು ಸರ್ಕಾರ ತಿಳಿಸಿದೆ.

## ರಾಜ್ಯದ ಮಕ್ಕಳ ಹಕ್ಕುಗಳ ರಾಯಭಾರಿಯಾಗಿ ಕಿಶನ್ ನೇಮಕ



* ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ "ಕೇರ್ ಆಫ್ ಫುಟ್‌ಪಾತ್" ಸಿನಿಮಾದ ನಾಯಕ ನಟ ಕಿಶನ್ ಅವರನ್ನು ಕರ್ನಾಟಕದ ರಾಜ್ಯದ ಮಕ್ಕಳ ಹಕ್ಕುಗಳ ರಾಯಭಾರಿಯಾಗಿ ನೇಮಕ ಮಾಡಲಾಗಿದೆ ಎಂದು ಆಯೋಗದ ಅಧ್ಯಕ್ಷರು ಮಾಹಿತಿ ನೀಡಿದ್ದಾರೆ.
* ಮಕ್ಕಳ ಹಕ್ಕುಗಳ ಆಯೋಗದ ರಾಯಭಾರಿಯಾಗಿ ಕೆಲಸ ಮಾಡಲು ಆಸಕ್ತಿ ತೋರಿಸಿದ ಕಿಶನ್ ಅವರಿಗೆ, ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಆಂಟೋನಿ ಸೆಬಾಸ್ಟಿಯನ್ ರವರು ಅಭಿನಂದನೆ ತಿಳಿಸಿದ್ದಾರೆ.

## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ರಾಷ್ಟ್ರೀಯ ಪ್ರಶಸ್ತಿ




* ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಾ (BMTC) ಇಂಧನ ಉಳಿತಾಯ ಕಾರ್ಯ ಕ್ಷಮತೆಗಾಗಿ ಈ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ. ಈ ಪ್ರಶಸ್ತಿಯನ್ನು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ "ಪೆಟ್ರೋಲಿಯಂ ಸಂಶೋಧನಾ ಸಂಸ್ಥೆಯ ಪ್ರತಿಷ್ಠಿತ ಸಕ್ಷಮ್ 2021" ರಾಷ್ಟ್ರೀಯ ಪ್ರಶಸ್ತಿಯನ್ನು BMTC ಗೆ ನೀಡಿದೆ.
* ಬಿಎಂಟಿಸಿಯ ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ ಅವರಿಗೆ 5 ಲಕ್ಷ ರೂಪಾಯಿಗಳು ಹಾಗೂ ಪ್ರಮಾಣ ಪತ್ರಗಳನ್ನೂ ಒಳಗೊಂಡಿರುವ ರಾಷ್ಟ್ರೀಯ ಪ್ರಶಸ್ತಿಯನ್ನು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರವರು ಇತ್ತೀಚಿಗೆ ಪ್ರಧಾನ ಮಾಡಿದರು.

# 20-01-2021

## ಕರ್ನಾಟಕದ ಮೊದಲ ತೋಳ ವನ್ಯಜೀವಿ ಧಾಮಕ್ಕೆ ರಾಜ್ಯಸರ್ಕಾರದ ಅನುಮತಿ



* ಇತ್ತೀಚಿಗೆ ಕರ್ನಾಟಕ ಸರ್ಕಾರವು ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ವಲಯದ ಬಂಕಾಪುರ ಹೊರವಲಯದ ಅರಣ್ಯ ಪ್ರದೇಶವನ್ನು ತೋಳ ವನ್ಯಜೀವಿಧಾಮ ಘೋಷಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.
* ಇದು ಕರ್ನಾಟಕ ರಾಜ್ಯದ ಪ್ರಥಮ ತೋಳಗಳ ವನ್ಯಜೀವಿಧಾಮ ವಾಗಲಿದೆ ಎಂದು ತಿಳಿದು ಬಂದಿದೆ.

## ಇಸ್ರೋ ವಾಣಿಜ್ಯ ಸರಕು ಮಾರುಕಟ್ಟೆಗೆ ಪ್ರವೇಶ



* ಅಮೆರಿಕದ ನಾಸಾದಂತೆ ಇಸ್ರೋ ಕೂಡ 'ವಾಣಿಜ್ಯ ಸರಕು ಮಾರುಕಟ್ಟೆಗೆ' ಕಾಲಿಡಲು ಶುರುಮಾಡಿದೆ. ಇಸ್ರೋ ಮಾರುಕಟ್ಟೆಗೆ ಇಸ್ರೋ ಲೋಗೊ ಒಳಗೊಂಡ ಟಿ ಶರ್ಟ್ಸ್, ಪೋಸ್ಟರ್, ಕಾಫಿ ಮಗ್, ಕೀ ಚೈನ್ ಸೇರಿ ಹಲವು ವಸ್ತುಗಳನ್ನು ಮಾರಾಟ ಮಾಡಲು ಮುಂದಾಗಿದೆ.
* ಈ ಯೋಜನೆ ಇಂದ ಇಸ್ರೋದ ಕೊಡುಗೆಗಳನ್ನೂ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಇಸ್ರೋ ಸಾಧನೆಯ ಬಗ್ಗೆ ತಿಳಿಸಿದಂತಾಗುತ್ತದೆ, ಜೊತೆಗೆ ಇಸ್ರೋದ ಸಂಶೋಧನೆ ಮಾಹಿತಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಈ ಯೋಜನೆ ಸಹಾಯವಾಗಲಿದೆ ಎಂದು ಇಸ್ರೋ ತಿಳಿಸಿದೆ.

## ಮೊದಲ ಮಹಿಳಾ ಫೈಟರ್ ಪೈಲಟ್ ಗಣರಾಜ್ಯೋತ್ಸವದ ಪರೇಡ್ ನಲ್ಲಿ ಭಾಗಿ



*ಈ ಬಾರಿಯ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಪ್ರಥಮ ಮಹಿಳಾ ಫೈಟರ್ ಪೈಲಟ್, ಆದ ಲೆಫ್ಟಿನೆಂಟ್ ಭಾವನಾ ಕಾಂತ್ ರವರು ಭಾಗಿಯಾಗಲಿದ್ದಾರೆ.
* ಈ ಬಾರಿಯ ಗಣರಾಜ್ಯೋತ್ಸವ ಪರೇಡ್ ಗೆ, 2016ರಲ್ಲಿ ವಾಯುಪಡೆಗೆ ಆಯ್ಕೆಯಾದ ಲೆಫ್ಟಿನೆಂಟ್ ಭಾವನಾ ಕಾಂತ್ ರವರು ಭಾಗಿಯಾಗಲಿದ್ದು, ಜನೇವರಿ 26 ರಂದು IAF ನ ಟ್ಯಾಬ್ಲೊ ಜತೆ ಅವರು ತೆರಳಲಿದ್ದಾರೆ.
* ಪ್ರಸ್ತುತ ಲೆಫ್ಟಿನೆಂಟ್ ಭಾವನಾ ಕಾಂತ್ ರವರು ರಾಜಸ್ಥಾನದ ವಾಯುನೆಲೆಯಲ್ಲಿ ಮಿಗ್ 21 ಬೈಸನ್ ಫೈಟರ್ ಪ್ಲೇನ್‌ಗೆ ಪೈಲಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಭಾರತೀಯ ಸೈನ್ಯಕ್ಕೆ ಗ್ಲೋಬಲ್ ಫೈರ್ ಪವರ್ (GEP)ಎಂಬ ಜಾಗತಿಕ ಗರಿ



* ಇತ್ತೀಚಿಗೆ ಭಾರತೀಯ ಸೈನ್ಯಕ್ಕೆ ಗ್ಲೋಬಲ್ ಫೈರ್ ಪವರ್ (GFP) ಎಂಬ ಜಾಗತಿಕ ಗೌರವ ಸಿಕ್ಕಿದೆ.
* ಪ್ರಸ್ತುತ ವಿಶ್ವದ 138 ರಾಷ್ಟ್ರಗಳ ರಕ್ಷಣ ಕ್ಷೇತ್ರದ ವಾರ್ಷಿಕ ವಿಮರ್ಶೆ, ಮತ್ತು ಸೇನೆಗಳ ಸುದೀರ್ಘ ಆಕ್ರಮಣಕಾರಿ ಹಾಗೂ ರಕ್ಷಣಾತ್ಮಕ ಸಾಮರ್ಥ್ಯ ಪರಿಗಣಿಸಿ ಈ ರ್ಯಾಂಕಿಂಗ್ ಪಟ್ಟಿ ನೀಡಲಾಗಿದೆ.
ಜಾಗತಿಕ ರ್ಯಾಂಕಿಂಗ್ ನ ಪಟ್ಟಿ ವಿವಿರ ಈ ಕೆಳಗಿನಂತಿದೆ:
- ಅಮೆರಿಕ ದೇಶ ನಂ.1 ಸ್ಥಾನ ಪಡೆದುಕೊಂಡಿದೆ.
- ರಷ್ಯಾದೇಶ ನಂ.2 ಸ್ಥಾನ ಪಡೆದಿದೆ.
- ಚೀನ ದೇಶ ನಂ.3 ಸ್ಥಾನ ಪಡೆದಿದೆ.
- ಭಾರತ ದೇಶ ನಂ. 4 ಸ್ಥಾನ ಪಡೆದಿದೆ.

## ರಾಜ್ಯ ಸರ್ಕಾರ ಪ್ರತಿ ವರ್ಷ ಏ.21ಕ್ಕೆ ರಾಜ್ಯ ಸರ್ಕಾರಿ ನೌಕರರ ದಿನ ಆಚರಣೆಗೆ ಆದೇಶ



* ಕರ್ನಾಟಕ ರಾಜ್ಯವು ರಾಜ್ಯ ಸರ್ಕಾರಿ ನೌಕರರ ಸಂಘದ ಮನವಿಯನ್ನು ಪರಿಗಣಿಸಿ, ಪ್ರತಿ ವರ್ಷ ಏಪ್ರಿಲ್ 21 ರಂದು ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನು ಆಚರಣೆ ಮಾಡಲು ರಾಜ್ಯ ಸರ್ಕಾರ ಆದೇಶ ನೀಡಿದೆ. ಇದಕ್ಕೆ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರು ಇತ್ತೀಚಿಗೆ ಸಮ್ಮತಿಯನ್ನು ನೀಡಿದ್ದು, ಇನ್ನು ಪ್ರತಿ ವರ್ಷ ಏಪ್ರಿಲ್ 21 ರಂದು "ರಾಜ್ಯ ಸರ್ಕಾರಿ ನೌಕರರ ದಿನಾಚರಣೆ" ಎಂದು ಆಚರಿಸಲಾಗುವದು.

## ರಾಜ್ಯದಲ್ಲಿ ಪಶುಚಿಕಿತ್ಸಾ ಆಂಬುಲೆನ್ಸ್ ವಾಹನಗಳ ಸೇವೆಗೆ ಚಾಲನೆ




* ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚಾರಿ ಪಶುಚಿಕಿತ್ಸಾ ಆಂಬುಲೆನ್ಸ್ ವಾಹನಗಳಿಗೆ, ಸಚಿವ ಪ್ರಭು ವಿ ಚವ್ಹಾಣ್ ರವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಿಂದ ಚಾಲನೆ ನೀಡಲಾಯಿತು.
* ಈ ಸಂಚಾರಿ ಪಶುಚಿಕಿತ್ಸಾ ಆಂಬುಲೆನ್ಸ್ ವಾಹನಗಳನ್ನೂ ರಾಜ್ಯದ 15 ಜಿಲ್ಲೆಗಳಾದ, ಬೀದರ್, ರಾಯಚೂರು, ಕಲಬುರ್ಗಿ, ಧಾರವಾಡ, ಬಿಜಾಪುರ, ಬೆಳಗಾವಿ, ಮಂಗಳೂರು, ಹಾಸನ, ಮಂಡ್ಯ, ಮೈಸೂರು, ಶಿವಮೊಗ್ಗ, ಚಿತ್ರದುರ್ಗ, ಯಾದಗಿರಿ, ಚಿಕ್ಕಬಳ್ಳಾಪುರ, ತುಮಕೂರು, ಈ ಜಿಲ್ಲೆಗಳಿಗೆ ಶೀಘ್ರದಲ್ಲೇ ವಾಹನಗಳನ್ನು ವಿಸ್ತರಣೆ ಮಾಡಲಾಗುವದು ಎಂದು ಸಚಿವ ಪ್ರಭು ವಿ ಚವ್ಹಾಣ್ ರವರು ತಿಳಿಸಿದರು.
* ರೈತರು ತಮ್ಮ ಜಾನುವಾರು ತುರ್ತು ಚಿಕಿತ್ಸೆ ಮತ್ತು ಸೇವೆಯ ಮಾಹಿತಿಯನ್ನು ಪಡೆಯಲು ಸಹಾಯವಾಣಿ 1962 ಸಂಪರ್ಕಿಸಲು ಇದೆ ವೇಳೆ ಕರೆ ನೀಡಲಾಯಿತು.

## ಪ್ರಧಾನಿ ನರೇಂದ್ರ ಮೋದಿ ಗುಜರಾತನ ಐತಿಹಾಸಿಕ ಸೋಮನಾಥ ದೇವಾಲಯದ ಅಧ್ಯಕ್ಷರಾಗಿ ನೇಮಕ



* ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ ರಾಜ್ಯದ ಸೋಮನಾಥ ಜಿಲ್ಲೆಯಲ್ಲಿನ ಐತಿಹಾಸಿಕ ದೇವಾಲಯವಾಗಿರುವ ಸೋಮನಾಥ ದೇವಾಲಯದ 8ನೇ ಅಧ್ಯಕ್ಷರಾಗಿ ಇತ್ತೀಚಿಗೆ ನೇಮಕಗೊಂಡಿದ್ದಾರೆ.
* ಗುಜರಾತನ ಐತಿಹಾಸಿಕ ದೇವಾಲಯವಾಗಿರುವ ಸೋಮನಾಥ ದೇವಾಲಯಕ್ಕೆ ಈ ಮೊದಲು ಮೊರಾರ್ಜಿ ದೇಸಾಯಿ ಯವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಯವರು ಸೋಮನಾಥ ದೇವಾಲಯದ ಅಧ್ಯಕ್ಷರಾಗಿ ಆಯ್ಕೆಯಾದ ಎರಡನೇ ಪ್ರಧಾನಿ ಎನಿಸಿದ್ದಾರೆ.

### ಪ್ರತಿವರ್ಷ ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿಯನ್ನು 'ಪರಾಕ್ರಮ ದಿವಸ್' ಆಗಿ ಆಚರಣೆ



* ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ವಿಶೇಷ ಕೊಡುಗೆ ನೀಡಿದ ನೇತಾಜಿ ಸುಭಾಷ್ ಚಂದ್ರ ಬೋಸ್ ರವರ 125ನೇ ಜಯಂತಿಯನ್ನು ಇತ್ತೀಚಿಗೆ ಆಚರಿಸಲಾಯಿತು.
* ಪ್ರತಿವರ್ಷ ನೇತಾಜಿ ಸುಭಾಷ್ ಚಂದ್ರ ಬೋಸ್ ರವರ ಜಯಂತಿ ದಿನವಾದ ಜನೇವರಿ 23 ಅನ್ನು "ಪರಾಕ್ರಮ ದಿನ"ವಾಗಿ ಆಚರಣೆ ಮಾಡಲಾಗುವುದು ಎಂದು ಕೇಂದ್ರ ಸಚಿವ ಪ್ರಲ್ಹಾದಸಿಂಗ್ ಪಟೇಲ್ ಮಾಹಿತಿಯನ್ನು ನೀಡಿದರು.
* ಈ ವರ್ಷ ಕೋಲ್ಕತ್ತ ನಗರದಲ್ಲಿ ಜನೇವರಿ 23ರಂದು ನಡೆಯುವ ಮೊದಲ ಪರಾಕ್ರಮ ದಿನದ ಕಾರ್ಯಕ್ರಮ ಮತ್ತು ವಸ್ತು ಪ್ರದರ್ಶನವನ್ನು ಪ್ರಧಾನಿ ಮೋದಿಯವರು ಚಾಲನೆ ನೀಡಲಿರುವ ಕುರಿತು ತಿಳಿದು ಬಂದಿದೆ.

### ಬಾರ್ಡರ್ ಗಾವಸ್ಕರ್ ಟ್ರೋಫಿ ಗೆದ್ದ ಟೀಮ್ ಇಂಡಿಯಾ



* ಭಾರತ ತಂಡವು ಬಾರ್ಡರ್ ಗಾವಸ್ಕರ್ ನಾಲ್ಕು ಪಂದ್ಯಗಳ ಸರಣಿಯನ್ನು 2 1 ಅಂತರದಿಂದ ಜಯಸಾಧಿಸಿದೆ. ಭಾರತ ತಂಡವು ಅಜಿಂಕ್ಯ ರಹಾನೆ ನಾಯಕತ್ವದ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ, ಬಾರ್ಡರ್ ಗಾವಸ್ಕರ್ ಟ್ರೋಫಿ ಮುಡಿಗೇರಿಸಿಕೊಂಡಿತು.
* ಭಾರತ ತಂಡವು ಗಾಬಾ ಕ್ರೀಡಾಂಗಣದಲ್ಲಿ ಜಯಸಾಧಿಸಿದ ಮೊದಲ ಪಂದ್ಯ ಇದಾಗಿದೆ.
* ಆಸ್ಟ್ರೇಲಿಯಾ ತಂಡವು ಕಳೆದ 32 ವರ್ಷಗಳಿಂದ ಗಾಬಾ ಕ್ರೀಡಾಂಗಣದಲ್ಲಿ ಒಂದೇ ಒಂದು ಪಂದ್ಯದಲ್ಲಿ ಸೋಲುಕಂಡಿರಲಿಲ್ಲ, ಇದೀಗ ಭಾರತದ ತಂಡದ ಎದುರು ಸೋಲನ್ನು ಕಾಣುವ ಮೂಲಕ ಟ್ರೋಫಿಯನ್ನು ಬಿಟ್ಟು ಕೊಟ್ಟಿತು. ಪ್ಲೇಯರ್ ಆಫ್ ದಿ ಸೀರೀಸ್ : ಪ್ಯಾಟ್ ಕುಮ್ಮಿನ್ಸ್ (ಆಸ್ಟ್ರೇಲಿಯಾ) ಪ್ಲೇಯರ್ ಆಫ್ ದಿ ಮ್ಯಾಚ್ : ರಿಷಬ್ ಪಂತ್ (ಭಾರತ)

## 21-01-2021

### ಅಮೆರಿಕದ ಅಧ್ಯಕ್ಷ ಜೋ ಬೈಡನ್, ಉಪಾಧ್ಯಕ್ಷೆಯಾಗಿ ಕಮಲಾ ಹ್ಯಾರಿಸ್ ಪ್ರಮಾಣ ವಚನ ಸ್ವೀಕಾರ



* ಅಮೆರಿಕದ 46ನೇ ಅಧ್ಯಕ್ಷರಾಗಿ ಜೋ ಬೈಡನ್ ಮತ್ತು ಉಪಾಧ್ಯಕ್ಷೆಯಾಗಿ ಕಮಲಾ ಹ್ಯಾರಿಸ್ ರವರು ಪ್ರಮಾಣ ವಚನ ಸ್ವೀಕಾರ ಮಾಡಿದರು.
* ಜೋ ಬೈಡನ್ ಪ್ರಮಾಣವಚನ ಸ್ವೀಕರಿಸಿದ ಕೆಲವೇ ಸಮಯದ ನಂತರ "ಪ್ಯಾರಿಸ್ ಹವಾಮಾನ ಬದಲಾವಣೆ"ಗೆ ಮರು ಸಹಿ ಹಾಕಿದರು, ಈ ಕುರಿತು ಶ್ವೇತಭವನದಲ್ಲಿ ಸಹಿ ಹಾಕಿದ ಜೊ ಬೈಡನ್, ಜಾಗತಿಕ ಹವಾಮಾನ ತಾಪಮಾನ ಏರಿಕೆಯನ್ನು ತಡೆಯಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಗಳು ನಡೆಸುತ್ತಿರುವ ಪ್ರಯತ್ನಗಳಿಗೆ ಅಮೆರಿಕ ದೇಶದ ಸಹಕಾರವಿದೆ ಎಂದು ಶ್ವೇತಭವನದಲ್ಲಿ ತಿಳಿಸಿದರು.

### ಕೆಂಪೇಗೌಡ ಏರ್‌ಪೋರ್ಟ್‌ಗೆ ಆರೋಗ್ಯ ಮಾನ್ಯತೆ ಪ್ರಮಾಣಪತ್ರ



* ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬ್ಯಾಂಕ್ ಇಂಟರ್ನ್ಯಾಷನಲ್ ಎ ಲಕ್ಸೆಂಬರ್ಗ್ ನಿಂದ ಆರೋಗ್ಯ ಮಾನ್ಯತೆ ಪ್ರಮಾಣಪತ್ರ ಲಭಿಸಿದೆ.
* ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸುವ ಪ್ರಯಾಣಿಕರು, ಉದ್ಯೋಗಿಗಳು ಮತ್ತು ಸಾರ್ವಜನಿಕರ ಸುರಕ್ಷತೆಯ ಬದ್ಧತೆಯನ್ನು ಪರಿಗಣಿಸಿ ಈ ಆರೋಗ್ಯ ಮಾನ್ಯತೆ ಪ್ರಮಾಣಪತ್ರ ಒದಗಿಸಲಾಗಿದೆ, ಎಂದು ಬ್ಯಾಂಕ್ ಇಂಟರ್ನ್ಯಾಷನಲ್ ಎ ಲಕ್ಸೆಂಬರ್ಗ್ (BIL) ಮಾಹಿತಿಯನ್ನು ನೀಡಿದೆ.

## ಭಾರತೀಯ ಕೋವಿಡ್ ಲಸಿಕೆ ಭೂತಾನ್ ಮಾಲ್ಡೀವ್ಸ್‌ಗೆರವಾನೆ



* ಇತ್ತೀಚಿಗೆ ಭಾರತದಲ್ಲಿ ತಯಾರಿಸಲಾಗಿರುವ ಕೋವಿಡ್ ಲಸಿಕೆಗಳನ್ನು ಮಾಲ್ಡೀವ್ಸ್ ಮತ್ತು ಭೂತಾನ್ ಗೆ ರಫ್ತು ಮಾಡಲಾಗಿದೆ, ಎಂದು ಭಾರತೀಯ ವಿದೇಶಾಂಗ ಸಚಿವರಾದ ಎಸ್.ಜೈಶಂಕರ್ ರವರು ಟ್ವೀಟ್ ಮಾಡುವ ಮೂಲಕ ಮಾಹಿತಿಯನ್ನು ನೀಡಿದ್ದಾರೆ.
* ಭಾರತದಲ್ಲಿ ತಯಾರಿಸಲಾಗಿರುವ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಈ ಎರಡು ಲಸಿಕೆಗಳು ಭೂತಾನ್ ಮಾಲ್ಡೀವ್ಸ್ ಗೆ ತಲುಪಿವೆ, ಇದರಿಂದ ಎರಡೂ ದೇಶಗಳ ನಡುವೆ ಪರಸ್ಪರ ಸ್ನೇಹ ಬಾಂಧವ್ಯ ಹಾಗೂ ಪ್ರೀತಿಯನ್ನು ವ್ಯಕ್ತಪಡಿಸಿವೆ ಎಂದು ತಿಳಿಸಿದ್ದಾರೆ.

## ಕರ್ನಾಟಕ ರಾಜ್ಯಕ್ಕೆ ಸತತ 2 ನೇ ಬಾರಿಗೆ ಅಗ್ರಮಾನ್ಯ ನಾವಿನ್ಯತಾ(Innovative State) ಸೂಚ್ಯಂಕದಲ್ಲಿ ಪ್ರಥಮ ಸ್ಥಾನ




* ಕರ್ನಾಟಕ ರಾಜ್ಯವು ನೀತಿ ಆಯೋಗ ಪ್ರಕಟಿಸುವ ಅಗ್ರಮಾನ್ಯ ನಾವಿನ್ಯತಾ (Innovative State) ರಾಜ್ಯ ಸೂಚ್ಯಂಕ ಪಟ್ಟಿಯಲ್ಲಿ ಸತತವಾಗಿ ಎರಡನೇ ಬಾರಿಗೆ ಮೊದಲ ಸ್ಥಾನ ಪಡೆದಿದೆ, ಎಂದು ಉಪಮುಖ್ಯಮಂತ್ರಿ ಮತ್ತು ಐಟಿ ಬಿಟಿ ಸಚಿವರಾದ ಡಾ. ಸಿ.ಎನ್. ಅಶ್ವತ್ಥ್ ನಾರಾಯಣರವರು ಇತ್ತೀಚಿಗೆ ತಿಳಿಸಿದ್ದಾರೆ.
* ಮಾನವ ಸಂಪನ್ಮೂಲ, ಹೂಡಿಕೆ, ಉದ್ಯಮ, ಸುರಕ್ಷತೆ, ಉತ್ತಮ ಕಾನೂನು, ಸಾಧನೆ, ಜ್ಞಾನಪ್ರಸಾರ, ಆರೋಗ್ಯ, ಶಿಕ್ಷಣ, ಕೃಷಿ ಸೇರಿದಂತೆ ಈ ರೀತಿಯ ಹಲವು ವಿಷಯಗಳನ್ನೂ ಗಮದಲ್ಲಿರಿಸಿ ನೀತಿ ಆಯೋಗವು ಈ ರಾಜ್ಯ ಸೂಚ್ಯಂಕ ಪಟ್ಟಿಯನ್ನು ಪ್ರಕಟಣೆ ಮಾಡುತ್ತದೆ.

## ಅರುಣಾಚಲ ಪ್ರದೇಶದ ಮಾಜಿ ರಾಜ್ಯಪಾಲ ಮಾತಾ ಪ್ರಸಾದ್ ವಿಧಿವಶ



* ಅರುಣಾಚಲ ಪ್ರದೇಶದ ಮಾಜಿ ರಾಜ್ಯಪಾಲ, ಮಾತಾ ಪ್ರಸಾದ್ ರವರು ತಮ್ಮ 95ನೇ ವಯಸ್ಸಿನಲ್ಲಿ ಇತ್ತೀಚಿಗೆ ನಿಧನರಾದರು.
* ಮಾಜಿ ರಾಜ್ಯಪಾಲರಾದ ಮಾತಾ ಪ್ರಸಾದ್ ರವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಲಾಗಿತ್ತು, ಹಾಗೂ ಈ ಮೊದಲು ಉತ್ತರ ಪ್ರದೇಶದಲ್ಲಿ 1988 89 ರಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ನಂತರ 1993 ರಲ್ಲಿ ಅರುಣಾಚಲ ಪ್ರದೇಶ ರಾಜ್ಯಪಾಲರಾಗಿ ಸೇವೆಸಲ್ಲಿಸಿದ್ದಾರೆ.

## ಗುಜರಾತ್ ಸರ್ಕಾರದಿಂದ ಡ್ರ್ಯಾಗನ್ ಫ್ರೂಟ್‌ಗೆ ನೂತನ ಹೆಸರು




* ಇತ್ತೀಚಿಗೆ ಗುಜರಾತ ಸರ್ಕಾರವು 'ಡ್ರ್ಯಾಗನ್ ಫ್ರೂಟ್'ಗೆ 'ಕಮಲಂ' ಎಂದು ಮರು ನಾಮಕರಣ ಮಾಡಲಾಗಿದೆ ಎಂದು ತಿಳಿಸಿದೆ.
* ಗುಜರಾತನ ತೋಟಗಾರಿಕಾ ಅಭಿವೃದ್ಧಿಯು ಇಲಾಖೆಯು ಕಾರ್ಯಸೂಚಿ ಬಿಡುಗಡೆ ಮಾಡಿದ್ದು, ಡ್ರ್ಯಾಗನ್ ಫ್ರೂಟ್ ನೋಡಿದಾಗ ಕಮಲವನ್ನು ನೋಡಿದಂತಾಗುತ್ತದೆ, ಎಂಬ ಈ ಕಾರಣಕ್ಕಾಗಿ "ಡ್ರ್ಯಾಗನ್ ಫ್ರೂಟ್ ಹಣ್ಣಿಗೆ ಕಮಲಂ" ಎಂದು ನಾಮಕರಣ ಮಾಡಲಾಗಿದೆ ಎಂದು ಗುಜರಾತ್ ಸಿಎಂ ವಿಜಯನ್ ರೂಪಾಣಿ ಮಾಹಿತಿಯನ್ನು ನೀಡಿದರು.

### ಬಾಗಲಕೋಟೆ ಜಿಲ್ಲಾ ಪೊಲೀಸ್ ಶ್ವಾನದಳಕ್ಕೆ 'ಕ್ರಿಶ್' (ಮುಧೋಳ ತಳಿ) ಸೇರ್ಪಡೆ



* ಪ್ರಸ್ತುತ ಭಾರತೀಯ ಸೇನೆ, ಅರೆ ಸೇನಾ ಪಡೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಧೋಳ ತಳಿಯ ಶ್ವಾನ(ನಾಯಿ) ಇದೀಗ ರಾಜ್ಯ ಪೊಲೀಸ್ ಇಲಾಖೆಗೂ ಸೇರ್ಪಡೆಗೊಂಡಿದೆ.
* ರಾಜ್ಯ ಪೊಲೀಸ್ ಇಲಾಖೆಯ ಶ್ವಾನದಳಕ್ಕೆ ಇದೆ ಜನೇವರಿ 19ರಂದು ಬಾಗಲಕೋಟೆ ಜಿಲ್ಲೆಯ ಸುಪೆರಿಡೆಂಟ್ ಆಫ್ಎ ಪೊಲೀಸ್ ಲೋಕೇಶ ಜಗಲಾಸರರವರು ಮುಧೋಳ ತಳಿಯ ನಾಯಿ ಮರಿಯನ್ನು ಜಿಲ್ಲಾ ಪೊಲೀಸ್ ಇಲಾಖೆಗೆ ಸೇರ್ಪಡೆ ಮಾಡಿಕೊಂಡರು.
* ಕರ್ನಾಟಕ ರಾಜ್ಯ ಸರ್ಕಾರವು ಮುಧೋಳ ತಳಿಯ ನಾಯಿಯನ್ನು ರಾಜ್ಯ ಪೊಲೀಸ್ ಶ್ವಾನದಳ ಸೇರ್ಪಡೆಗೆ ಒಪ್ಪಿಗೆ ನೀಡಿದೆ.

### ಚೀನಾ ದೇಶದಿಂದ ಒಂದು ಗಂಟೆಯಲ್ಲಿ 620 ಕಿಮೀ ಚಲಿಸುವ ರೈಲು



* ಚೀನಾ ದೇಶವು ತಾಂತ್ರಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿದ್ದು, ಇತ್ತೀಚಿಗೆ ಈ ದೇಶವು ಅತಿ ವೇಗದ ರೈಲನ್ನು ಸಿದ್ಧಪಡಿಸಿದೆ, ಈ ರೈಲು ಪ್ರತಿ 1 ಘಂಟೆಗೆ 620 ಕಿಮೀ ವೇಗದಲ್ಲಿ ಚಲಿಸಲಿದೆ ಎಂದು ಚೀನಾ ತಿಳಿಸಿದೆ.
*ಈ ಹಿಂದೆ ಚೀನಾ ದೇಶವು ಗಂಟೆಗೆ 600ಕಿಮೀ ಚಲಿಸುವ ಸಾಮರ್ಥ್ಯವಿರುವ ರೈಲನ್ನು 2016ರಲ್ಲಿ ಮ್ಯಾಗ್ಲೆವ್ ರೈಲನ್ನು ತಯಾರಿಸಿತ್ತು. ಮತ್ತೆ ಇದೀಗ ಚೀನಾ ಗಂಟೆಗೆ 620ಕಿಮೀ ಚಲಿಸುವ ರೈಲನ್ನು ತಯಾರಿಸುತ್ತಿದೆ, ಈ ಅತಿ ವೇಗದ ರೈಲನ್ನು ಸೂಪರ್ ಬುಲೆಟ್ ಮ್ಯಾಗ್ಲೆವ್ ರೈಲು ಎಂದು ಕರೆಯುತ್ತಾರೆ. ಇದೀಗ ಈ ರೈಲು ಅಭಿವೃದ್ಧಿ ಹಂತದಲ್ಲಿದೆ, ಇತ್ತೀಚೆಗೆ ಇದನ್ನು ಚೀನಾದ ಸಿಚುವಾನ್ ಪ್ರಾಂತ್ಯದ ರಾಜಧಾನಿಯಾದ ಚೆಂಗ್ಡುನಲ್ಲಿ ಪ್ರದರ್ಶನ ಮಾಡಲಾಯಿತು ಎಂದು ಚೀನಾ ಹೇಳಿದೆ.

## 22-01-2021

### ಭಾರತವು ಕಳೆದ 7 ದಿನಗಳಲ್ಲಿ 10 ಲಕ್ಷ ಜನರಿಗೆ ಕೊರೋನಾ ಲಸಿಕೆ ನೀಡಿ ವಿಶ್ವದಾಖಲೆ ನಿರ್ಮಿಸಿದೆ




* ಭಾರತ ದೇಶದಲ್ಲಿ ಕಳೆದ 7 ದಿನಗಳಿಂದ ಕೊರೋನಾ ಲಸಿಕೆ ನೀಡುವ ಕಾರ್ಯಪ್ರಾರಂಭವಾಗಿದೆ, ಪ್ರಸ್ತುತ ದಿನಾಂಕ 21 01 2021ರ ಸಾಯಂಕಾಲ 6 ಗಂಟೆ ತನಕ ಒಟ್ಟು 10.43 ಲಕ್ಷ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆಯನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.
* ಇತ್ತಿಚಿಗೆ ಅಮೆರಿಕಾ ಮತ್ತು ಇಸ್ರೇಲ್ ದೇಶಗಳು 10 ದಿನಗಳ ಕಾಲಾವಕಾಶ ತಗೆದುಕೊಂಡು 10 ಲಕ್ಷ ಜನರಿಗೆ ಲಸಿಕೆಯನ್ನು ನೀಡಿದ್ದವು.
* ಭಾರತ ದೇಶವು ಇಲ್ಲಿಯವರೆಗೆ 10,43,534 ಮಂದಿಗೆ ಲಸಿಕೆ ನೀಡಿ ವಿಶ್ವ ದಾಖಲೆ ಬರೆದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿಯನ್ನು ನೀಡಿದೆ.

### ಮೇಡ್ ಇನ್ ಇಂಡಿಯಾ ಎಲೆಕ್ಟ್ರಾನಿಕ್ ಬೈಸಿಕಲ್ ಮಾರುಕಟ್ಟೆಗೆ



* ಸಚಿವ ಪ್ರತಾಪ್ ಚಾಂದ್ ಸಾರಂಗಿ ಅವರು ಇತ್ತೀಚಿಗೆ ಹರಿಯಾಣದ ಫರೀದಾಬಾದ ಎಂಬಲ್ಲಿ, ಮೇಡ್ ಇನ್ ಇಂಡಿಯಾ ಎಲೆಕ್ಟ್ರಾನಿಕ್ ಸೈಕಲ್‌ಗಳಿಗೆ ಚಾಲನೆ ನೀಡಿದರು. ಈ ಮೇಡ್ ಇನ್ ಇಂಡಿಯಾದ 27 ಸಾವಿರ ರೂ. ಬೆಲೆಯ ಎಲೆಕ್ಟ್ರಿಕ್ ಸೈಕಲ್‌ಗಳನ್ನ ಮಾರುಕಟ್ಟೆಗೆ ನಾಹಕ್ ಮೋಟಾರ್ಸ್ ಕಂಪನಿ ಒದಗಿಸಲಿದೆ.
* ಮೇಡ್ ಇನ್ ಇಂಡಿಯಾದ ಎಲೆಕ್ಟ್ರಾನಿಕ್ ಬೈಸಿಕಲ್ ಗಳಲ್ಲಿ ಲೀಥಿಯಂ ಬ್ಯಾಟರಿಯನ್ನ ಅಳವಡಿಸಲಾಗಿದ್ದು, ಈ ಬೈಸಿಕಲ್ ಗಳನ್ನೂ ಸಾಮಾನ್ಯ ಪವರ್ ಚಾರ್ಜರ್ ನಿಂದ 2 ಗಂಟೆಗಳ ಸಮಯದಲ್ಲಿ ಚಾರ್ಜ್ ಮಾಡಬಹುದಾಗಿದೆ. ಒಂದು ಸಾರಿ ಚಾರ್ಜ್ ಮಡಿದ ಈ ಸೈಕಲ್ 25 ಕಿಮೀ ದೂರ ಚಲಿಸುವ ಸಾಮರ್ಥ್ಯ ಹೊಂದಿವೆ.

## BBMPಯಿಂದ ಮನೆ ಬಾಗಿಲಿಗೆ ಶಾಲೆ

* ಬೃಹತ ಬೆಂಗಳೂರು ಮಹಾನಗರ ಪಾಲಿಕೆ (BBMP)ಯು ಬಿಎಂಟಿಸಿ ಹಳೇ ಬಸ್ಸುಗಳನ್ನೂ ಬಳಸಿ ಮನೆಯ ಬಾಗಿಲಿಗೆ ಶಾಲೆ ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸುತ್ತಿದೆ.
* BMTC ಯು ತನ್ನ 10 ಹಳೇ ಬಸ್‌ಗಳನ್ನು ಕಲಿಕೆಯ ಸಲುವಾಗಿ ಬಿಬಿಎಂಪಿ ಶಾಲೆಗಳಿಗೆ ನೀಡಲು ಒಪ್ಪಿಗೆ ನೀಡಿದೆ. ಈ ಬಸ್ ಗಳಿಂದ ಬಿಬಿಎಂಪಿಯು ಶಾಲೆ ಬಿಟ್ಟ ಮಕ್ಕಳನ್ನು ಕರೆ ತರಲು ಉಪಯೋಗ ಮಾಡಲಾಗುತ್ತದೆ ಎಂದು ತಿಳಿಸಿದೆ.

## ಒಡಿಶಾದ ಕರಾವಳಿಯಲ್ಲಿ ಹಾಕ್ ಐ ಯುದ್ಧ ವಿಮಾನ ಪರೀಕ್ಷೆ ಯಶಸ್ವಿ




* ಇತ್ತೀಚಿಗೆ ಒಡಿಶಾದ ಕರಾವಳಿಯಲ್ಲಿ ಹಾಕ್ ಐ ಯುದ್ಧ ವಿಮಾನ ಪರೀಕ್ಷೆ ಯಶಸ್ವಿಯಾಗಿ ನಡೆಸಲಾಯಿತು, ಈ ಹಾಕ್ ಎಂಕೆ 132ಐ ಯುದ್ಧ ವಿಮಾನವನ್ನು ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಇಮಾರತ್ ಸಂಶೋಧನಾ ಕೇಂದ್ರ ಅಭಿವೃದ್ಧಿಪಡಿಸಿದೆ. ಇದು ನೆಲದಿಂದ ಸರಿ ಸುಮಾರು 100 ಕಿ.ಮೀ. ದೂರದ ಶತ್ರುಗಳ ಅಡುಗು ನೆಲೆಗಳನ್ನು ನಾಶಪಡಿಸುವ ಸಾಮರ್ಥ್ಯ ಹೊಂದಿದೆ.
* ಭಾರತದ ಆತ್ಮನಿರ್ಭರ ಯೋಜನೆಯ ಅಭಿಯಾನಕ್ಕೆ HAL ವಿಶೇಷ ಸ್ಥಾನ ಒದಗಿಸುತ್ತಿದೆ, ಹಾಗೂ ದೇಶೀಯವಾಗಿ ಅಭಿವೃದ್ಧಿಪಡಿಸಿದ ಈ ಹಾಕ್ ಐ ಯುದ್ಧ ವಿಮಾನವನ್ನು ಪರಿಣಾಮಕಾರಿ ಬಳಕೆಗೆ ಸಹಾಯವಾಗಲಿದೆ ಎಂದು ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆರ್. ಮಾಧವನ್ ರವರು ಮಾಹಿತಿ ನೀಡಿದ್ದಾರೆ.
* ಪ್ರಸ್ತುತ ಈ ಹಾಕ್ ಎಂಕೆ 132ಐ ಯುದ್ಧ ವಿಮಾನವು 12 ದೇಶಗಳಲ್ಲಿ ತನ್ನ ಕಾರ್ಯವನ್ನು ನಡೆಸುತ್ತಿದೆ ಎಂದು HAL ಮಾಹಿತಿಯನ್ನು ನೀಡಿದೆ.

## ಮುಸ್ಲಿಮರ ಪ್ರಯಾಣ ನಿಷೇಧ ನೀತಿ ರದ್ದುಗೊಳಿಸಿದ ಅಮೆರಿಕ ಅಧ್ಯಕ್ಷ ಜೋ ಬೈಡನ್



* ಅಮೆರಿಕದ ನೂತನ 46ನೇ ಅಧ್ಯಕ್ಷರಾದ ಜೋ ಬೈಡನ್ ರವರು ಮುಸ್ಲಿಮರ ಪ್ರಯಾಣ ನಿಷೇಧ ನೀತಿ' ಯನ್ನು ರದ್ದುಗೊಳಿಸಿದರು.
* ಟ್ರಂಪ್ ಸರಕಾರವು 2017ರಲ್ಲಿ ಅಧಿಕಾರ ಸ್ವೀಕರಿಸಿದ ಮೊದಲ ವಾರದಲ್ಲಿ ಮುಸ್ಲಿಮರ ಪ್ರಯಾಣ ನಿಷೇಧ ನೀತಿಯನ್ನು ಜಾರಿಗೆ ತಂದಿದ್ದರು, ಈ ನೀತಿಯಿಂದ 7 ಮುಸ್ಲಿಂ ರಾಷ್ಟ್ರಗಳಾದ ಇರಾನ್, ಇರಾಕ್, ಲಿಬಿಯಾ, ಸೋಮಾಲಿಯಾ, ಸುಡಾನ್, ಸಿರಿಯಾ ಹಾಗೂ ಯೆಮನ್ ನಿಂದ ಅಮೆರಿಕಕ್ಕೆ ಪ್ರಯಾಣ ಬೆಳಸುವುದನ್ನು ನಿಷೇಧಿಸಲಾಗಿತ್ತು. ಇದೀಗ ಜೋ ಬೈಡನ್ ರವರ ಸರ್ಕಾರ ಈ ನೀತಿಯನ್ನು ತೆಗೆದು ಹಾಕಿದೆ.

## ತುಮಕೂರಿನ ಶಿವಕುಮಾರ ಶ್ರೀಗಳ ಪುಣ್ಯಸ್ಮರಣೆ ದಿನವನ್ನು 'ದಾಸೋಹ ದಿನ' ಎಂದು ಘೋಷಿಸಿದ ಸಿಎಂ ಬಿ. ಎಸ್. ಯಡಿಯೂರಪ್ಪ



* ತುಮಕೂರು ಸಿದ್ದಗಂಗಾ ಮಠದ ಲಿಂಗೈಕ್ಯ ಡಾ. ಶಿವಕುಮಾರ ಶ್ರೀಗಳ ಪುಣ್ಯಸ್ಮರಣೆ ದಿನವನ್ನು 'ದಾಸೋಹ ದಿನ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಶ್ರೀಗಳ 2ನೇ ಪುಣ್ಯಸ್ಮರಣೆ ದಿನದ ಕಾರ್ಯಕ್ರಮದಲ್ಲಿ ಘೋಷಿಸಿದ್ದಾರೆ.
* ಶೀಘ್ರದಲ್ಲೇ ಕರ್ನಾಟಕ ಸರ್ಕಾರದಿಂದ ಶ್ರೀಗಳ ಪುಣ್ಯಸ್ಮರಣೆ ದಿನವನ್ನು "ದಾಸೋಹ ದಿನ" ಎಂದು ಅಧಿಕೃತ ಘೋಷಣೆ ಹೊರಬರಲಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪನವರು ತಿಳಿಸಿದರು.
* ಕರ್ನಾಟಕ ರಾಜ್ಯ ಸರ್ಕಾರವು 25 ಕೋಟಿ ರೂ. ದೇಣಿಗೆಯನ್ನು ಶ್ರೀಗಳ ಜನ್ಮ ಸ್ಥಳವಾದ ವೀರಪುರ ಗ್ರಾಮಕ್ಕೆ ನೀಡಿರುವ ಕುರಿತು ತಿಳಿಸಿದರು, ಮುಂದಿನ ದಿನಗಳಲ್ಲಿ ಈ ಗ್ರಾಮವನ್ನು ತೀರ್ಥಸ್ಥಳವಾಗುವಂತೆ ಮಾಡುವ ಗುರಿಯನ್ನು ಸರ್ಕಾರ ಹೊಂದಿದೆ.

### ಐಪಿಎಸ್ ಅಧಿಕಾರಿಗೆ 'ಐರನ್ ಮ್ಯಾನ್' ಪ್ರಶಸ್ತಿ ಪುರಸ್ಕಾರ



* ಐಪಿಎಸ್ ಅಧಿಕಾರಿ ಕೃಷ್ಣ ಪ್ರಕಾಶ್ ರವರು "ಐರನ್ ಮ್ಯಾನ್" ಎಂಬ ಪ್ರಶಸ್ತಿ ಪುರಸ್ಕಾರ ಸ್ವೀಕರಿಸುವ ಮೂಲಕ ವಿಶ್ವ ದಾಖಲೆಯ ಪುಸ್ತಕ ಸೇರಿದ್ದಾರೆ. ಈ ಪ್ರಶಸ್ತಿ ಗೌರವಕ್ಕೆ ಭಾಜನರಾದ ದೇಶದ ಮೊದಲ ಸರ್ಕಾರಿ ನೌಕರ, ಎಂಬ ಹೆಗ್ಗಳಿಕೆ ಇವರದಾಗಿದೆ. ಪ್ರಸ್ತುತ ಇವರು ಪುಣೆದ ಪಿಂಪ್ರಿ ಚಿಂಚ್ವಾಡ್‌ನ ಪೊಲೀಸ್ ಆಯುಕ್ತರಾದ ಕಾರ್ಯ ನಿರ್ವಹಿಸುತ್ತಿದ್ದಾರೆ.
* ಪ್ರಸ್ತುತ ಈ ಪ್ರಶಸ್ತಿಯನ್ನು ಫ್ರಾನ್ಸ್ ದೇಶ ನೀಡುತ್ತದೆ, ಫ್ರಾನ್ಸ್ ದೇಶದಲ್ಲಿ ನಡೆಯುವ ಐರನ್ ಮ್ಯಾನ್ ಟ್ರಯಾಥ್ಲಾನ್‌ನ 2017ರ ಇವೆಂಟ್‌ನಲ್ಲಿ ಭಾಗವಹಿಸಿದ ಕೃಷ್ಣ ಪ್ರಕಾಶ್ ರವರು ಜಯಶಾಲಿಯಾಗಿದ್ದಾರೆ.
* ಐಪಿಎಸ್ ಅಧಿಕಾರಿ ಕೃಷ್ಣ ಪ್ರಕಾಶ್ ರವರು "ಐರನ್ ಮ್ಯಾನ್" ಪ್ರಶಸ್ತಿ ಪಡೆದಿದ್ದೇನೆ ಎಂದು ಟ್ವಿಟ್ ಮೂಲಕ ಮಾಹಿತಿಯನ್ನು ನೀಡಿದ್ದಾರೆ.

## 23-01-2021

### ಉತ್ತರಾಖಂಡದಲ್ಲಿ ಮಕ್ಕಳ ಸ್ನೇಹಿ ಪೊಲೀಸ್ ಠಾಣೆ



* ಉತ್ತರಾಖಂಡ ರಾಜ್ಯದ ದಲನವಾಲಾ ಎಂಬ ಪ್ರದೇಶದಲ್ಲಿ ಮೊದಲ "ಮಕ್ಕಳ ಸ್ನೇಹಿ" ಪೊಲೀಸ್ ಠಾಣೆಯನ್ನು ಪ್ರಾರಂಭಿಸಲಾಗಿದೆ, ಈ ಠಾಣೆಯನ್ನು ಉತ್ತರಾಖಂಡ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ರವರು ಉದ್ಘಾಟನೆ ಮಾಡಿದರು.
* ಈ ಉತ್ತರಾಖಂಡ ರಾಜ್ಯದ ಪೊಲೀಸ್ ಠಾಣೆಯಿಂದ ಮಕ್ಕಳ ರಕ್ಷಣೆಯ ಮತ್ತು ಸಮಾಜದಲ್ಲಿ ಗೌರವದಿಂದ ಬದುಕಲು ಅನುಕೂಲ ವಾತಾವರಣ ನಿರ್ಮಿಸುವ ಗುರಿಯೊಂದಿಗೆ ಪೊಲೀಸ್ ಇಲಾಖೆಯು "ಮಕ್ಕಳ ಸ್ನೇಹಿ" ಪೊಲೀಸ್ ಠಾಣೆಯನ್ನು ಆರಂಭಿಸಿರುವುದಾಗಿ ಡಿಜಿಪಿ ಅಶೋಕ್ ಕುಮಾರ್ ಮಾಹಿತಿಯನ್ನು ನೀಡಿದ್ದಾರೆ.

### ನಿಖಿಲ್ ಶ್ರೀವಾಸ್ತವಗೆ 2021ರ ಮೈಕೆಲ್ ಶೀಲ್ಡ್ ಹೆಲ್ಡ್ ಗೆ ಪ್ರಶಸ್ತಿ




* ಭಾರತೀಯ ಮೂಲದ ನಿಖಿಲ್ ಶ್ರೀವಾಸ್ತವರವರು ಕಾಡಿಸನ್ ಸಿಂಗರ್ ಮತ್ತು ರಾಮಾನುಜಂ ಗ್ರಾಫ್ ಲೀನಿಯರ್ ಬೀಜಗಣಿತದ ಅತಿ ಉದ್ದನೆಯ ಪ್ರಶ್ನೆಯನ್ನು ಬಿಡಿಸಿ, 2021ರ ಪ್ರತಿಷ್ಠಿತ ಪ್ರಶಸ್ತಿಯಾದ ಮೈಕೆಲ್ ಮತ್ತು ಶೀಲ್ಡ್ ಹೆಲ್ಡ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ಪ್ರಸುತ ಇವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಗಣಿತದ ಸಹ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
* 2017 ರಿಂದ "ಮೈಕೆಲ್ ಮತ್ತು ಶೀಲ್ಡ್ " ಪ್ರಶಸ್ತಿಯನ್ನು ನೀಡಲಾಗುತ್ತಿದೆ.

### ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯದಲ್ಲಿ ಪ್ಲಾಸ್ಟಿಕ್ ಪಾರ್ಕ್ ನಿರ್ಮಾಣ




* ಇತ್ತೀಚಿಗೆ ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯದ ಮಂಗಳೂರಿನ ಗಂಜಿಮಠ ಎಂಬಲ್ಲಿ 'ಪ್ಲ್ಯಾಸ್ಟಿಕ್ ಪಾರ್ಕ್' ನಿರ್ಮಾಣ ಮಾಡಲು ಮಾಡಲು ಅನುಮತಿಯನ್ನು ನೀಡಿದೆ.
* ಪ್ಲಾಸ್ಟಿಕ್ ಪಾರ್ಕ್ ಎನ್ನುವುದು ಪ್ಲಾಸ್ಟಿಕ್ ಉದ್ಯಮಗಳು ಮತ್ತು ಅದರ ಮಿತ್ರರಾಷ್ಟ್ರಗಳ ಕೈಗಾರಿಕೆಗಳಿಗೆ ಮೀಸಲಾಗಿರುವ ಕೈಗಾರಿಕಾ ವಲಯವಾಗಿದೆ. ವಸ್ತು ಮತ್ತು ಯಂತ್ರೋಪಕರಣಗಳ ಪೂರೈಕೆದಾರರು, ಪ್ಲಾಸ್ಟಿಕ್ ಸಂಸ್ಕರಣಾ ಕಂಪನಿಗಳು, ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಸೇರಿದಂತೆ ಪ್ಲಾಸ್ಟಿಕ್ ಮರುಬಳಕೆ ಕಂಪನಿಗಳಿಂದ ಪ್ಲಾಸ್ಟಿಕ್ ಸಂಸ್ಕರಣಾ ಸಮುದಾಯಕ್ಕೆ ಅಗತ್ಯವಿರುವ ಸಂಪೂರ್ಣ ಶ್ರೇಣಿಯ ಕಂಪನಿಗಳನ್ನು ಇದು ಒಳಗೊಂಡಿದೆ.

### RBI ಯಿಂದ ಶೀಘ್ರ ಹಳೆಯ 100 ರೂ. ಮುಖಬೆಲೆಯ ಹಳೆ ನೋಟುಗಳ ಬಳಕೆ ಸ್ಥಗಿತ




* ಇದೀಗ ಆರ್ ಬಿ ಐ 100 ರೂಪಾಯಿ ಮುಖಬೆಲೆಯ ಹಳೆ ನೋಟುಗಳ ಬಳಕೆಯನ್ನು ಮಾರ್ಚ್ ತಿಂಗಳ ನಂತರ ಸಂಪೂರ್ಣವಾಗಿ ರದ್ದು ಮಾಡಲಾಗುತ್ತದೆ ಎಂದು ಆರ್ ಬಿ ಐ ಸಹಾಯಕ ಮಹಾಪ್ರಬಂಧಕ ಬಿಎಂ ಮಹೇಶ್ ಅವರು ಇತ್ತೀಚಿಗೆ ಮಾಹಿತಿಯನ್ನು ನೀಡಿದ್ದಾರೆ.

* ಪ್ರಸ್ತುತ ಕಳೆದ ಆರು ವರ್ಷಗಳಿಂದ 100 ರೂಪಾಯಿ ಮುಖಬೆಲೆಯ ಹಳೆಯ ನೋಟುಗಳು ಮುದ್ರಣವಾಗುತ್ತಿಲ್ಲ. ಆದ್ದರಿಂದ ಹಳೆ 100 ರೂ. ಮುಖಬೆಲೆಯ ನೋಟುಗಳನ್ನು ಬದಲಾಯಿಸಿಕೊಳ್ಳಲು ಮಾರ್ಚ್ ತಿಂಗಳ ವರೆಗೂ ಕಾಲಾವಕಾಶ ಇದೆ ಎಂದು ಆರ್‌ಬಿಐ ತಿಳಿಸಿದೆ.

* ಮಾರ್ಚ್ ತಿಂಗಳ ನಂತರ ದಿನಗಳಲ್ಲಿ 100 ರೂ. ಮುಖಬೆಲೆಯ ಹೊಸ ನೋಟುಗಳು ಮಾತ್ರ ಚಲಾವಣೆಯಲ್ಲಿರುತ್ತವೆ ಎಂದು ಆರ್ ಬಿ ಐ ತಿಳಿಸಿದೆ.

## 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸಾಹಿತಿ ದೊಡ್ಡರಂಗೇಗೌಡ ಆಯ್ಕೆ



* ಇದೆ ಫೆಬ್ರುವರಿ 26 ರಿಂದ 28ರವರೆಗೆ ಹಾವೇರಿ ಜಿಲ್ಲೆಯಲ್ಲಿ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ ದೊಡ್ಡರಂಗೇಗೌಡ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಈಗಿನ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿರುವ ಮನು ಬಳಿಗಾರರವರು ತಿಳಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಿರಿಯ ಸಾಹಿತಿಗಳೊಂದಿಗೆ ಚರ್ಚೆ ಮಾಡಿದ ಬಳಿಕ ಈ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಇದೆ ವೇಳೆ ಮನು ಬಳಿಗಾರ್ ಅವರು ಮಾಹಿತಿ ನೀಡಿದರು.

## ರಂಜನ್ ಗೊಗೊಯಿಗೆ 'ಝಡ್ ಪ್ಲಸ್' (Z+) ಶ್ರೇಣಿಯ ಭದ್ರತೆ



* ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ರಂಜನ್ ಗೊಗೊಯಿ ಅವರಿಗೆ 'ಝಡ್ ಪ್ಲಸ್' (Z+) ಭದ್ರತೆ ಒದಗಿಸಲು ಕೇಂದ್ರ ಸರ್ಕಾರವು ಅಧಿಕೃತವಾಗಿ ಇತ್ತೀಚಿಗೆ ಒಪ್ಪಿಗೆ ನೀಡಿದೆ.

* ನ್ಯಾಯಮೂರ್ತಿ ರಂಜನ ಗೊಗೊಯಿ ಅವರು 2019 ನವೆಂಬರನಲ್ಲಿ ನಿವೃತ್ತರಾದರು, ಇವರನ್ನು ಇತ್ತೀಚಿಗೆ ಕೇಂದ್ರ ಸರ್ಕಾರವು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿತ್ತು, ರಂಜನ ಗೊಗೊಯಿ ಅವರಿಗೆ 8 ರಿಂದ 12 ಸಿಬ್ಬಂದಿಯನ್ನು ಒಳಗೊಂಡಿರುವ ಸಿಆರ್‌ಪಿಎಫ್ ತಂಡವು ಭದ್ರತೆಯನ್ನು ನೀಡಲಿದೆ.

## ಉತ್ತರಾಖಂಡ ರಾಜ್ಯದ ಬಿಎಸ್ಸಿ ವಿದ್ಯಾರ್ಥಿನಿ ಸೃಷ್ಟಿ ಗೋಸ್ವಾಮಿಗೆ ಮುಖ್ಯಮಂತ್ರಿ ಪಟ್ಟ




* ರಾಷ್ಟ್ರೀಯ ಬಾಲಕಿಯರ ದಿನಾಚರಣೆ ಪ್ರಯುಕ್ತ, ಜನವರಿ 24ರಂದು ಉತ್ತರಾಖಂಡ ರಾಜ್ಯದ BSc ವಿದ್ಯಾರ್ಥಿನಿಯಾಗಿರುವ ಸೃಷ್ಟಿ ಗೋಸ್ವಾಮಿ ಅವರು ಒಂದು ದಿನದ ಮಟ್ಟಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

* ಈ ಮೊದಲು ಸೃಷ್ಟಿ ಗೋಸ್ವಾಮಿ ಮೇ 2018ರಲ್ಲಿ ಉತ್ತರಾಖಂಡ ಬಾಲ ವಿಧಾನಸಭೆಯ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಳು, ಪ್ರಸ್ತುತ ಈಕೆ ಬಾಲ ವಿಧಾನಸಭೆಯ ಮುಖ್ಯಮಂತ್ರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತಿದ್ದಾಳೆ.

* ಉತ್ತರಾಖಂಡ ರಾಜ್ಯದ ಹರಿದ್ವಾರ ಎಂಬ ಗ್ರಾಮದ ಸೃಷ್ಟಿ ಗೋಸ್ವಾಮಿ ರೂಡಿಯಲ್ಲಿ ಬಿಎಸ್ಸಿ ಅಗ್ರಿಕಲ್ಚರ್ ವಿದ್ಯಾರ್ಥಿನಿಯಾಗಿದ್ದಾರೆ, ಈ ಮೊದಲು ಈಕೆ ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನದಂದು ಅನೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಳು.

# 24-01-2021

## ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸತತ 4ನೇ ಬಾರಿ ದೇಶದ ಅತ್ಯುತ್ತಮ ಸಿಎಂ



* ಪ್ರತಿ ವರ್ಷವು ದೇಶದ ಅತ್ಯುತ್ತಮ ಮುಖ್ಯಮಂತ್ರಿಗಳ ಪಟ್ಟಿಯನ್ನು, ಇಂಡಿಯಾ ಟುಡೆ ಗ್ರೂಪ್ ಕಾರ್ವಿ ಇನ್‌ಸೈಟ್ಸ್ ಮೂಡ್ ಆಫ್ ದಿ ನೇಷನ್ (MOTN) ಎಂಬ ಸಂಸ್ಥೆ ಪ್ರಕಟಿಸುತ್ತ ಬಂದಿದ್ದು, ಇದೀಗ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿರುವ ಯೋಗಿ ಆದಿತ್ಯನಾಥ, ಸತತ 4ನೇ ಬಾರಿ ನಂ.1 ಸ್ಥಾನ ಪಡೆದಿದ್ದಾರೆ, ಜೊತೆಗೆ ಇವರು ಪ್ರಸ್ತುತ ಭಾರತ ದೇಶದ ಅತ್ಯಂತ ಕಿರಿಯ ಮುಖ್ಯಮಂತ್ರಿಯಾಗಿದ್ದಾರೆ.
* ಇತ್ತೀಚೆಗೆ ನಡೆದ 2021 ರ ಚುನಾವಣೆಯಲ್ಲಿ ಶೇಕಡಾ 25ರಷ್ಟು ಮತಗಳನ್ನು ಪಡೆದು ಯೋಗಿ ಆದಿತ್ಯನಾಥ್ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.
* ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಶೇಕಡಾ 15ರಷ್ಟು ಮತಗಳನ್ನು ಪಡೆದಿದ್ದಾರೆ.
* ಪಶ್ಚಿಮ ಬಂಗಾಳದ ಸಿಎಂ ಮಮತಾ ಬ್ಯಾನರ್ಜಿ ಶೇಕಡಾ 9ರಷ್ಟು ಮತಗಳನ್ನು ಪಡೆದಿದ್ದಾರೆ.
* ಬಿಹಾರ ಸಿಎಂ ನಿತೀಶ್ ಕುಮಾರ್ ಮತ್ತು ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಶೇಕಡಾ 7ರಷ್ಟು ಮತಗಳನ್ನು ಪಡೆದಿದ್ದಾರೆ.
* ಒಡಿಶಾ ಸಿಎಂ ನವೀನ್ ಪಟ್ನಾಯಕ್ ಮತ್ತು ಆಂಧ್ರ ಸಿಎಂ ಜಗನ್ ಮೋಹನ್ ರೆಡ್ಡಿ ಶೇಕಡಾ 6ರಷ್ಟು ಮತ ಪಡೆದಿದ್ದಾರೆ. ಎಂದು ಇಂಡಿಯಾ ಟುಡೆ ಗ್ರೂಪ್ ಕಾರ್ವಿ ಇನ್‌ಸೈಟ್ಸ್ ಮೂಡ್ ಆಫ್ ದಿ ನೇಷನ್ ಮಾಹಿತಿಯನ್ನು ನೀಡಿದೆ.

## ಅಸ್ಸಾಂನ 1 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಭೂದಾಖಲೆ ವಿತರಣಾ ಕಾರ್ಯಕ್ರಮಕ್ಕೆ ಪ್ರಧಾನಿ ಚಾಲನೆ




* ಅಸ್ಸಾಂನ ಶಿವಸಾಗರ ಜಿಲ್ಲೆಯಲ್ಲಿ ಆಯೋಜಿಸಲಾದ ಕಾರ್ಯಕ್ರಮದ ಅಡಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಅಸ್ಸಾಂನ ಸ್ಥಳೀಯ ಬುಡಕಟ್ಟು ಸಮುದಾಯದ 1 ಲಕ್ಷ 3 ಸಾವಿರ ಜನರಿಗೆ ಜಮೀನಿನ ದಾಖಲೆ ಹಸ್ತಾಂತರಿಸುವ ರಾಜ್ಯ ಸರಕಾರದ ಯೋಜನೆಗೆ ಚಾಲನೆ ನೀಡಿದರು.
* ಅಸ್ಸಾಂ ರಾಜ್ಯದ ಹಲವೆಡೆ ಸರಕಾರಿ ಜಮೀನು ಹಾಗೂ ಬುಡಕಟ್ಟು ಜಮೀನನ್ನು ಅಕ್ರಮ ವಲಸಿಗರು ಅಕ್ರಮವಾಗಿ ಪಡೆದಿರುವ ಪ್ರದೇಶಗಳನ್ನು, ಅಸ್ಸಾಂನ ರಾಜ್ಯ ಸರ್ಕಾರವು ಈ ಯೋಜನೆಯ ಮೂಲಕ ಅಲ್ಲಿನ ಸ್ಥಳೀಯರಿಗೆ ಜಮೀನಿನ ದಾಖಲೆಯನ್ನು ದೊರಕಿಸಿಕೊಟ್ಟಿದೆ ಎಂದು ಮುಖ್ಯಮಂತ್ರಿ ಸರ್ಬಾನಂದ ಸೊನೊವಾಲ್ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದರು.

## 'ಆಯುಷ್ಮಾನ್ ಹೆಲ್ತ್ ಕೇರ್' ಯೋಜನೆಗೆ ಕೇಂದ್ರ ಸಚಿವ ಅಮಿತ್ ಶಾ ಚಾಲನೆ



* ಆಯುಷ್ಮಾನ್ ಹೆಲ್ತ್ ಕೇರ್ ಆರೋಗ್ಯ ಯೋಜನೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಸ್ಸಾಂನ ಗುವಾಹಟಿ ಎಂಬಲ್ಲಿ ಜನೇವರಿ 23ರಂದು ಚಾಲನೆ ನೀಡಿದರು.
* ಈ ಆಯುಷ್ಮಾನ್ ಆರೋಗ್ಯ ಕಾರ್ಡ್'ಗಳನ್ನೂ CRPF, BSF, CISF, ITBP ಮತ್ತು CAPF ನ SSB ಯ ಮುಖ್ಯಸ್ಥ, ಉಪಅಧಿಕಾರಿ ಮತ್ತು ಜವಾನರಿಗೆ ಈ ಕಾರ್ಡ್ ನೀಡಲಾಗುತ್ತದೆ. ಹಾಗೂ NSG ಮತ್ತು ಅಸ್ಸಾಂ ರೈಫಲ್ಸ್ ಈ ಹೆಲ್ತ್ ಕಾರ್ಡ್ ಗಳನ್ನು ಪಡೆಯಲಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು.
* ಆಯುಷ್ಮಾನ್ ಹೆಲ್ತ್ ಕೇರ್ ಆರೋಗ್ಯ ಯೋಜನೆಯ ವಿಶ್ವದ ಅತಿದೊಡ್ಡ ಸರ್ಕಾರಿ ಆರೋಗ್ಯ ಆರೈಕೆ ಯೋಜನೆಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

## 2021ರ ಗಣರಾಜ್ಯೋತ್ಸವ ದಿನಾಚರಣೆಗೆ ಕರ್ನಾಟಕದಿಂದ ವಿಜಯನಗರ ವೈಭವದ ಸ್ತಬ್ಧಚಿತ್ರ ಆಯ್ಕೆ



* 2021ರ ಗಣರಾಜ್ಯೋತ್ಸವ ದಿನಾಚರಣೆಯ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಈ ಬಾರಿ ಕರ್ನಾಟಕದ ಹೊಸ ಜಿಲ್ಲೆಯಾದ ವಿಜಯನಗರ ಸಾಮ್ರಾಜ್ಯ ಮತ್ತು ವೈಭವದ ಮಾಹಿತಿಯನ್ನು ತಿಳಿಸುವ ಸ್ತಬ್ಧಚಿತ್ರ ಆಯ್ಕೆಯಾಗಿದೆ.
* ವಿಜಯನಗರ ಸಾಮ್ರಾಜ್ಯವನ್ನು ಸಂಗಮ ರಾಜವಂಶದ ಹರಿಹರ 1 ಮತ್ತು ಬುಕ್ಕರಾಯ 1 ಈ ಸೋದರರು ಸ್ಥಾಪಿಸಿದರು.

* ಹಂಪಿ ವಿಜಯನಗರವು, 1500ನೇ ಇಸವಿಯಲ್ಲಿ ಬೀಜಿಂಗ್ ನ ನಂತರ, ವಿಶ್ವದ ಅತೀ ದೊಡ್ಡ ಹಾಗೂ ಭಾರತದ ಅತ್ಯಂತ ಸಿರಿವಂತ ನಗರವಾಗಿತ್ತು.
* ಕರ್ನಾಟಕದ ಈ ಹಂಪಿ ವಿಜಯನಗರಸಾಮ್ರಾಜ್ಯವು, ಯುನೆಸ್ಕೋ ವತಿಯಿಂದ ವಿಶ್ವ ಪರಂಪರೆಯ ಸ್ಥಳ ಎಂದು ಹೆಸರುವಾಸಿಯಾಗಿದೆ.


## ಅಮೆರಿಕದ ಟಿವಿ ಸಂದರ್ಶಕ ಲ್ಯಾರಿ ಕಿಂಗ್ ನಿಧನ



* ಅಮೆರಿಕದ ಜನಪ್ರಿಯ ಟಿವಿ ನಿರೂಪಕ, ಸಂದರ್ಶಕ ಎಂದು ಪ್ರಸಿದ್ಧಿಯಾಗಿರುವ ಲ್ಯಾರಿ ಕಿಂಗ್ ಅವರು ತಮ್ಮ 87ನೇ ವಯಸ್ಸಿನಲ್ಲಿ ವಿಧಿವಶರಾದರು.
* ಲ್ಯಾರಿ ಕಿಂಗ್ ಅವರು ಮಿಖಾಯಿಲ್ ಗೋರ್ಬಚೇವ್, ವ್ಲಾದಿಮಿರ್ ಪುಟಿನ್, ಯಾಸಿರ್ ಅರಾಫತ್, ದಲಾಯಿ ಲಾಮಾ, ಎಲಿಜಬೆತ್ ಟೇಲರ್, ಬರಾಕ್ ಒಬಾಮಾ, ಬಿಲ್ ಗೇಟ್ಸ್, ಲೇಡಿಗಾಗಾ ಸೇರಿದಂತೆ ಹತ್ತು ಹಲವು ರಾಜಕೀಯ, ಸಿನಿಮಾ ಸೆಲೆಬ್ರಿಟಿಗಳನ್ನು ಸಂದರ್ಶನ ಮಾಡಿದ್ದರು.
* ಲ್ಯಾರಿ ಕಿಂಗ್ ರವರು ಸರಿ ಸುಮಾರು 50 ಸಾವಿರಕ್ಕೂ ಅಧಿಕ ಟಾಕ್ ಶೋ ಸಂದರ್ಶನ ನಡೆಸಿ ದಾಖಲೆ ನಿರ್ಮಿಸಿದ್ದಾರೆ, ಹಾಗೂ ಇವರ ಲೈವ್ ಶೋ ಜಗತ್ತಿನಲ್ಲಿ ಅತಿ ಹೆಚ್ಚು ಜನಪ್ರಿಯವಾಗಿತ್ತು.

# 25-01-2021

## ಆಕಾಶ್ ಕ್ಷಿಪಣಿ'ಯ ಪರೀಕ್ಷಾರ್ಥ ಉಡಾವಣೆ ಸಂಪೂರ್ಣ ಯಶಸ್ವಿ



* ಇತ್ತೀಚಿಗೆ ಒಡಿಶಾದ ಕರಾವಳಿ ತೀರದಲ್ಲಿ ಆಕಾಶ್ ಎನ್ ಜಿ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆಯನ್ನು ಡಿಆರ್ ಡಿಒ (DRDO) ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ತಿಳಿಸಿದೆ.
* ಈ ಹೊಸ ತಲೆಮಾರಿನ (New Version) ಆಕಾಶ್ ಎನ್ ಜಿ ಕ್ಷಿಪಣಿಯು ಭೂಮಿಯಿಂದ ಆಕಾಶಕ್ಕೆ ಹಾರುವ ಕ್ಷಿಪಣಿಯಾಗಿದೆ, ಮತ್ತು ಭಾರತದ ವೈಮಾನಿಕ ಬೆದರಿಕೆಗಳನ್ನ ನಿಗ್ರಹಿಸುವ ಗುರಿ ಹೊಂದಿದೆ. ಆಕಾಶ್ ಕ್ಷಿಪಣಿ'ಯ ಪರೀಕ್ಷಾರ್ಥ ಉಡಾವಣೆ ಸಂಪೂರ್ಣ ಯಶಸ್ವಿಯಾಗಿರುವದರಿಂದ ಭಾರತವು ವೈಮಾನಿಕ ಬೆದರಿಕೆಗಳನ್ನ ನಿಗ್ರಹಿಸುವಲ್ಲಿ ಬಲಿಷ್ಠ ರಾಷ್ಟ್ರವಾಗಲಿದೆ ಎಂದು ಡಿಆರ್ ಡಿಒ(DRDO) ತಿಳಿಸಿದೆ.

## ಕರ್ನಾಟಕದ ಬಾಲಕರಿಗೆ 'ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ' ಪ್ರಶಸ್ತಿ



* 2021ನೇ ಸಾಲಿನ 'ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ' ಪ್ರಶಸ್ತಿಗೆ ಕರ್ನಾಟಕದ ಇಬ್ಬರು ಬಾಲಕರು ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯನ್ನು ಈ ಬಾರಿಯ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ನೀಡಲಾಗುವದು.
* ಕೇಂದ್ರ ಸರ್ಕಾರವು ಪ್ರತಿವರ್ಷ ಈ 'ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ' ಪ್ರಶಸ್ತಿಯನ್ನು ನೀಡುತ್ತ ಬಂದಿದ್ದು, ಈ ವರ್ಷ ದೇಶದ ಒಟ್ಟು 32 ಮಕ್ಕಳು ಆಯ್ಕೆಗೊಂಡಿದ್ದಾರೆ, ಅದರಲ್ಲಿ ಕರ್ನಾಟಕದ ಇಬ್ಬರು ಬಾಲಕರಿಗೆ ಈ ಪ್ರಶಸ್ತಿ ಲಭಿಸಿದೆ. ಕರ್ನಾಟಕದ ಬಾಲಕರ ಹೆಸರು ಇಂತಿವೆ.
*ರಾಕೇಶ್ ಕೃಷ್ಣ.
*ವೀರ್ ಕಶ್ಯಪ್. ಈ ಬಾಲಕರು ಆವಿಷ್ಕಾರ ವಲಯದಲ್ಲಿ ಬಾಲ ಪುರಸ್ಕಾರ ಪ್ರಶಸ್ತಿಯನ್ನು ಈ ಬಾರಿಯ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಪಡೆಯಲಿದ್ದಾರೆ.

## ಮಧ್ಯಪ್ರದೇಶ ಮುಖ್ಯಮಂತ್ರಿಯಿಂದ ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ 'PANKH' ಅಭಿಯಾನಕ್ಕೆ ಚಾಲನೆ



* ಹೆಣ್ಣುಮಕ್ಕಳ ರಾಷ್ಟ್ರೀಯ ದಿನದ ಪ್ರಯುಕ್ತವಾಗಿ ಮಧ್ಯಪ್ರದೇಶ ಮುಖ್ಯಮಂತ್ರಿಯಾಗಿರುವ ಶಿವರಾಜ್ ಸಿಂಗ್ ಚೌಹಾಣ್ ಅವರು ಹೆಣ್ಣುಮಕ್ಕಳ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ 'PANKH' (ರೆಕ್ಕೆ) ಎಂಬ ಅಭಿಯಾನಕ್ಕೆ ಚಾಲನೆ ನೀಡಿದರು.
* ಈ ಯೋಜನೆಯನ್ನು 'ಬೇಟಿ ಬಚಾವೋ ಬೇಟಿ ಪಡಾವೋ' ಯೋಜನೆಯ ಅಡಿಯಲ್ಲಿ ನಾವು PANKH (ಪ್ರೊಟೆಕ್ಷನ್, ಅವೇರ್‌ನೆಸ್, ನ್ಯೂಟ್ರಿಷನ್, ನಾಲೆಡ್ಜ್, ಹೆಲ್ತ್) ಎಂಬ ಅಭಿಯಾನ ಆರಂಭಿಸಲಾಗಿದೆ, ಎಂದು ಮಧ್ಯಪ್ರದೇಶ ಮುಖ್ಯಮಂತ್ರಿಯಾಗಿರುವ ಶಿವರಾಜ್ ಸಿಂಗ್ ಚೌಹಾಣ್ ರವರು ಇತ್ತೀಚಿಗೆ ತಿಳಿಸಿದರು.

# 26-01-2021

## 'ಆಯುಷ್ಮಾನ್' ಸೇವೆಯಲ್ಲಿ ಚಿತ್ರದುರ್ಗ ಜಿಲ್ಲೆ ಪ್ರಥಮ




* ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಸೇವೆಯ ಯೋಜನೆ ಅಡಿಯಲ್ಲಿ ಆಯುಷ್ಮಾನ ಭಾರತ ಆರೋಗ್ಯ ಕರ್ನಾಟಕ ಸೇವೆ ಜಾರಿಗೆ ಬಂದಿದ್ದು, ಈ ಯೋಜನೆ ಅಡಿಯಲ್ಲಿ ಅತಿ ಹೆಚ್ಚು ರೋಗಿಗಳು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆ ಹಾಗೂ ಚಳ್ಳಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಸೇವೆಯನ್ನು ಪಡೆದಿದ್ದಾರೆ. ರೋಗಿಗಳ ಉಪಚಾರಕ್ಕೆ ಸ್ಪಂದಿಸಿದ ಆಸ್ಪತ್ರೆಗಳಿಗೆ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು ಅಭಿನಂದನೆಗಳನ್ನು ತಿಳಿಸಿದೆ.
* ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಪ್ರತಿ ಮೂರು ತಿಂಗಳಿಗೆ ನಡೆಸುವ ಪರಿಶೀಲನೆಯಲ್ಲಿ ಸತತ ಎರಡು ಬಾರಿ ಚಿತ್ರದುರ್ಗ ಜಿಲ್ಲೆ ಮೊದಲ ಸ್ಥಾನದಲ್ಲಿದೆ. 2019 ರಿಂದ ಈವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ 12000ಕ್ಕೂ ಹೆಚ್ಚು ರೋಗಿಗಳು ಉಚಿತ ಚಿಕಿತ್ಸೆ ಪಡೆಯುವಲ್ಲಿ ಸಕ್ರಿಯರಾಗಿದ್ದಾರೆ.

## ಯುಎಇಯಲ್ಲಿ ಇಸ್ರೇಲ್'ನ ರಾಯಭಾರ ಕಚೇರಿ ಪ್ರಾರಂಭ



* ಇಸ್ರೇಲ್ ಮತ್ತು ಯುಎಇ ದೇಶಗಳು ಇತ್ತೀಚಿಗಷ್ಟೇ ಪರಸ್ಪರ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದವು, ಇದಾದ 4 ತಿಂಗಳ ಬಳಿಕ ಇಸ್ರೇಲ್ ತನ್ನ ರಾಯಭಾರ ಕಚೇರಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್ (UAE)ನಲ್ಲಿ ಶುರುಮಾಡಿದೆ ಎಂದು ಇಸ್ರೇಲ್ ವಿದೇಶ ಸಚಿವಾಲಯ ಮಾಹಿತಿಯನ್ನು ನೀಡಿದೆ.
* ಇಸ್ರೇಲ್ ತನ್ನ ರಾಯಭಾರ ಕಚೇರಿಯನ್ನು, UAE ರಾಜಧಾನಿಯಾಗಿರುವ ಅಬುಧಾಬಿಯಲ್ಲಿ ಅಧಿಕೃತವಾಗಿ ಪ್ರಾರಂಭಮಾಡಿದೆ. UAE ನಲ್ಲಿರುವ ರಾಯಭಾರಿ ಕಚೇರಿಗೆ ಇಸ್ರೇಲ್'ನ ಐಟಾನ್ ನೇಹ್ ರವರು ಭೇಟಿನೀಡಿದ್ದರು ಎಂದು ಸಚಿವಾಲಯವು ಹೇಳಿಕೆಯನ್ನು ನೀಡಿದೆ.

## ಕರ್ನಾಟಕ ರಾಜ್ಯದ ಕೃಷಿ ಇಲಾಖೆ ರಾಯಭಾರಿಯಾದ ಸ್ಟಾರ್ ನಟ ದರ್ಶನ್



* ಕನ್ನಡ ಸಿನಿ ಪ್ರೇಕ್ಷಕರ ಅಚ್ಚು ಮೆಚ್ಚಿನ ನಾಯಕ ನಟ ಹಾಗೂ ಡಿ ಬಾಸ್ ಎಂದೇ ಖ್ಯಾತಿ ಪಡೆದಿರುವ ನಾಯಕ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ರವರು ಕರ್ನಾಟಕ ರಾಜ್ಯದ ಕೃಷಿ ಇಲಾಖೆಯ ರಾಯಭಾರಿಯಾಗಿ ಇತ್ತೀಚಿಗೆ ನೇಮಕಗೊಂಡಿದ್ದಾರೆ. ಲಾಕ್ ಡೌನ್ ಸಮಯದಲ್ಲಿ ದರ್ಶನರವರು ಮೈಸೂರಿನಲ್ಲಿರುವ ತಮ್ಮ ಫಾರ್ಮ್‌ಹೌಸ್‌ನ ಕೃಷಿಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು.
* ಕೃಷಿ ಇಲಾಖೆಯ ಸಚಿವ ಬಿ.ಸಿ.ಪಾಟೀಲ್ ಅವರು ದರ್ಶನ ಅವರನ್ನು ಭೇಟಿ ನೀಡಿ ಕೃಷಿ ಇಲಾಖೆಯ ರಾಯಭಾರಿಯಾಗುವಂತೆ ಮನವಿ ಮಾಡಿದ್ದರು. ಇದರ ಪ್ರತಿಯುತ್ತರವಾಗಿ ದರ್ಶನ ಅವರು ಒಪ್ಪಿಗೆಯನ್ನು ನೀಡಿದ್ದರು.
* ದರ್ಶನ್ ರವರು ಮಂಡ್ಯದ ಬಳಿ ಇರುವ ಗೋಶಾಲೆಯೊಂದಕ್ಕೆ ಮೇವಿನ ಅನುದಾನ ನೀಡಿ ದರ್ಶನ ಅವರು ಪ್ರಾಣಿಗಳು ಬಗ್ಗೆ ಇರುವ ಪ್ರೀತಿಯನ್ನು ತೋರಿದ್ದಾರೆ, ದರ್ಶನ್ ಅವರಿಗೆ ಇರುವ ರೈತರು ಹಾಗೂ ಕೃಷಿ ಚಟುವಟಿಕೆಗಳ ಅಪಾರ ಪ್ರೇಮವನ್ನು ಪರಿಗಣಿಸಿ ರಾಜ್ಯದ ಕೃಷಿ ಇಲಾಖೆಯ ರಾಯಭಾರಿಯಾಗಿ ನೇಮಕಮಾಡಲಾಗಿದೆ ಎಂದು ಕೃಷಿ ಇಲಾಖಾಯ ತಿಳಿಸಿದೆ.

## ಇದೆ ಮೊದಲ ಬಾರಿಗೆ ಏರೋ ಇಂಡಿಯಾದಲ್ಲಿ ಸೂರ್ಯ ಕಿರಣ್ ಮತ್ತು ಸಾರಂಗ್ ಪ್ರದರ್ಶನ



* ಬೆಂಗಳೂರಿನಲ್ಲಿ ಈ ಬಾರಿ ನಡೆಯಲಿರುವ 2021 ನೇ ಸಾಲಿನ 13ನೇ ಆವೃತ್ತಿಯ ಏರೋ ಇಂಡಿಯಾ ಶೋನಲ್ಲಿ ಇದೆ ಮೊದಲ ಬಾರಿಗೆ ಸೂರ್ಯ ಕಿರಣ್ ಮತ್ತು ಸಾರಂಗ್ ಹೆಲಿಕಾಪ್ಟರ್ ತಂಡಗಳ ಜಂಟಿ ಪ್ರದರ್ಶನ ನಡೆಯಲಿದೆ.
* ಪ್ರಸ್ತುತ ಫೆಬ್ರುವರಿ ತಿಂಗಳಲ್ಲಿ ನಡೆಯುವ ಏರ್ ಶೋ ಕಾರ್ಯಕ್ರಮದಲ್ಲಿ ಮಿ 17 ವಿ 5, ಎಚ್ಎಎಲ್, ಎಲ್ ಸಿಎಚ್, ಎಲ್‌ಯುಎಚ್, ಸಿ 17 ಗ್ಲೋಬ್ ಮಾಸ್ಟರ್ , ಎಂಬ್ರೇರ್, ಆಂಟೊನೊವ್ ಆನ್ 32, ಮತ್ತು ಭಾರತೀಯ ವಾಯುಪಡೆಯ ಬೋಯಿಂಗ್ ಚಿನೂಕ್ಸ್ ಮತ್ತು ಎಕೆಎಚ್ 64 ಅಪಾಚೆಗಳ ಮೊದಲ ಬಾರಿಗೆ ಭಾಗವಹಿಸಲಿದ್ದು, ಹೀಗೆ ಹಲವು ವಿಮಾನಗಳು ಪ್ರದರ್ಶನವನ್ನು ತೋರಲಿವೆ.
* 2019ರ ಏರೋ ಇಂಡಿಯಾ ಪ್ರದರ್ಶನದಲ್ಲಿ ಒಟ್ಟು 61 ವಿಮಾನಗಳು ಭಾಗವಹಿಸಿದ್ದವು, ಪ್ರಸ್ತುತ 2021ರ ಏರ್ ಷೋ ನಲ್ಲಿ ಭಾರತೀಯ 63 ವಿಮಾನಗಳು ಪ್ರದರ್ಶನವನ್ನು ನೀಡಲಿವೆ ಎಂದು ಮಾಹಿತಿ ತಿಳಿದು ಬಂದಿದೆ.

## ಗದಗ ಜಿಲ್ಲೆಯಲ್ಲಿ ಕಪ್ಪತ ಉತ್ಸವ ಕಾರ್ಯಕ್ರಮಕ್ಕೆ ಸಚಿವ ಸಿ.ಸಿ.ಪಾಟೀಲ ಚಾಲನೆ



* ಅರಣ್ಯ ಇಲಾಖೆ ಆಯೋಜಿಸಿರುವ ಗದಗ ಜಿಲ್ಲೆಯಲ್ಲಿನ ಕಪ್ಪತ ಉತ್ಸವ 2021 ಉದ್ಘಾಟಣೆಯ ಕಾರ್ಯಕ್ರಮವನ್ನು ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ.ಪಾಟೀಲ ಚಾಲನೆ ನೀಡಿದರು.
* ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದು ಪ್ರಖ್ಯಾತಿ ಪಡೆದಿರುವ ಗದಗ ಜಿಲ್ಲೆಯ ಕಪ್ಪತಗುಡ್ಡ ಅರಣ್ಯ ಪ್ರದೇಶವು ಅನೇಕ ಔಷಧೀಯ ಸಸ್ಯ ಸಂಪತ್ತನ್ನು ಹೊಂದಿದ್ದು, ಕರ್ನಾಟಕ ಸರ್ಕಾರವು ಗದಗ ಜಿಲ್ಲೆಯ ಕಪ್ಪತಗುಡ್ಡ ಅರಣ್ಯ ಪದೇಶದ ರಕ್ಷಣೆ ನೀಡಲು ಬದ್ಧವಾಗಿದೆ, ಹಾಗೂ ಪರಿಸರ ಸಂಕ್ಷಣೆ ನಮೆಲ್ಲರ ಜವಾಬ್ದಾರಿಯಾಗಿದೆ ಎಂದು ಸಚಿವ ಸಿ.ಸಿ.ಪಾಟೀಲ ಅವರು ತಿಳಿಸಿದರು.

## 11ನೇ ರಾಷ್ಟ್ರೀಯ ಮತದಾರರ ದಿನ ಆಚರಣೆ



*2021ರ ಜನೇವರಿ 25ರಂದು 11ನೇ ರಾಷ್ಟ್ರೀಯ ಮತದಾರರ ದಿನವನ್ನು ಮುಖ್ಯ ಚುನಾವಣಾ ಆಯೋಗವು ಆಚರಿಸಿದೆ. ಈ ಆಚರಣೆಯ ಸಂದರ್ಭದಲ್ಲಿ "ಮತದಾರರನ್ನು ಸಬಲೀಕರಣಗೊಳಿಸುವುದು, ಜಾಗರೂಕತೆ, ಸುರಕ್ಷಿತ ಮತ್ತು ಮಾಹಿತಿ ನೀಡುವುದು" ಇದು ಈ ವರ್ಷದ ದಿನಾಚರಣೆಯ ಘೋಷವಾಕ್ಯವಾಗಿದೆ ಎಂದು ಮುಖ್ಯ ಚುನಾವಣಾ ಆಯೋಗವು ತಿಳಿಸಿದೆ.
* ಚುನಾವಣಾ ಆಯೋಗವು ಆಯೋಜಿಸಿದ್ದ 11ನೇ ರಾಷ್ಟ್ರಮಟ್ಟದ ಮತದಾರರ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ ಅವರು ಮುಖ್ಯ ಅತಿಥಿಯಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪಾಲ್ಗೊಂಡಿದ್ದರು.

## ಭಾರತಕ್ಕೆ 72ನೇ ಗಣರಾಜ್ಯೋತ್ಸವ ಸಂಭ್ರಮ



* 72ನೇ ಗಣರಾಜ್ಯೋತ್ಸವದ ಪ್ರಯುಕ್ತ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಇಂಡಿಯಾಗೇಟ್ ಬಳಿ ಇರುವ ಅಮರ್ ಜವಾನ್ ಜ್ಯೋತಿಯಲ್ಲಿ ಹುತಾತ್ಮ ವೀರ ಯೋಧರಿಗೆ ನಮನ ಅರ್ಪಿಸಿದರು, ಮತ್ತು ರಾಷ್ಟ್ರಗೀತೆ ಮೊಳಗಿಸಲಾಯಿತು ನಂತರ ಬಂದೂಕುಗಳ ಮೂಲಕ ಗೌರವ ವಂದನೆಯನ್ನು ನೀಡಲಾಯಿತು.
* ರಾಷ್ಟ್ರಪತಿ ರಾಮನಾಥ್ ಕೋವಿಂದ ಅವರು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು.
* ಈ ವರ್ಷದ ಗಣರಾಜ್ಯೋತ್ಸವದ ಪರೇಡನ ರಾಜಪಥದಲ್ಲಿ ಒಟ್ಟಾರೆ 31 ಸ್ತಬ್ದಚಿತ್ರಗಳು ಪ್ರದರ್ಶನ ಮಾಡಲಾಯಿತು.
* ಇನ್ನು ಕರ್ನಾಟಕದಿಂದ ವಿಜಯನಗರ ಸಾಮ್ರಾಜ್ಯದ ಸ್ತಬ್ದ ಚಿತ್ರ ಎಲ್ಲರ ಗಮನಸೆಳೆಯಿತು.

# 27-01-2021

## ಭಾರತದ ಉನ್ನತ ನಾಗರೀಕ ಗೌರವವಾದ ಪದ್ಮ ಪ್ರಶಸ್ತಿಗೆ ಕರ್ನಾಟಕದ 5 ಜನ ಆಯ್ಕೆ



* ಭಾರತದ ಉನ್ನತ ನಾಗರೀಕ ಗೌರವವಾದ ಪದ್ಮ ಪ್ರಶಸ್ತಿಗೆ ಒಟ್ಟು 119 ಜನರನ್ನು ಆಯ್ಕೆ ಮಾಡಲಾಗಿದ್ದು, ಇದರಲ್ಲಿ ಕರ್ನಾಟಕದ ಒಟ್ಟು 5 ಜನ ಆಯ್ಕೆ ಮಾಡಲಾಗಿದೆ. ಆಯ್ಕೆಯಾದ 5 ಕನ್ನಡಿಗರ ವಿವರ ಇಂತಿವೆ:
* ಡಾ. ಬಿ. ಎಮ್. ಹೆಗ್ಡೆ : ಇವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ಲಭಿಸಿದೆ. ಇವರು ಭಾರತದ ಪ್ರಸಿದ್ದ ವೈದ್ಯ ವಿಜ್ಞಾನ, ಹೃದ್ರೋಗ ತಜ್ಞ, ಶಿಕ್ಷಣತಜ್ಞ, ಹಾಗೂ ಲೇಖಕರಾಗಿದ್ದಾರೆ.
* ಡಾ. ಚಂದ್ರಶೇಖರ ಕಂಬಾರ ಅವರಿಗೆ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪದ್ಮ ಭೂಷಣ ಪ್ರಶಸ್ತಿ ಲಭಿಸಿದೆ. ಈ ಮೊದಲು ಇವರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ, ಹಾಗೂ ಇವರು ಕನ್ನಡ ನಾಡು ಕಂಡ ಶ್ರೇಷ್ಠಕವಿ, ಕಥೆಗಾರ, ಕಾದಂಬರಿಕಾರ, ಹಾಗೂ ನಾಟಕಕಾರರಾಗಿದ್ದಾರೆ.
* ಆರ್. ಎಲ್. ಕಶ್ಯಪ್ ಅವರಿಗೆ ಸಾಹಿತ್ಯ ಶಿಕ್ಷಣ ಕ್ಷೇತ್ರದಲ್ಲಿ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ಇವರು ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಇಂಜಿನಿಯರಿಂಗ್ ಪ್ರೊಫೆಸರ್, ಸಂಶೋಧಕರಾಗಿ ಪ್ರಸಿದ್ದಿ ಪಡೆದಿದ್ದಾರೆ.

* ಮಂಜಮ್ಮ ಜೋಗತಿ ಅವರಿಗೆ ಕಲೆ ವಿಭಾಗದಲ್ಲಿ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ಇವರು ಕಲೆಯನ್ನೇ ದೈವವಾಗಿಸಿಕೊಂಡು ಸಮಾಜದಲ್ಲಿ ಮಂಗಳಮುಖಿಯರು ಹೀಗೂ ಜೀವನ ನಡೆಸಬಹುದು ಎಂದು ತೋರಿಸಿಕೊಟ್ಟಿದ್ದಾರೆ, ಕರ್ನಾಟಕ ರಾಜ್ಯ ಸರ್ಕಾರವು ಮಾತಾ ಮಂಜಮ್ಮ ಜೋಗತಿ ಅವರ ಕಲೆ ಗುರುತಿಸಿ ಇತ್ತೀಚಿಗೆ ರಾಜ್ಯ ಜಾನಪದ ಅಕಾಡೆಮಿಯ ಅಧ್ಯಕ್ಷೆಯಾಗಿ ನೇಮಕ ಮಾಡಿದೆ.

* ಬೆಂಗಳೂರಿನ ಕೆ. ವೈ. ವೆಂಕಟೇಶ್ ಅವರಿಗೆ ಕ್ರೀಡಾ ವಿಭಾಗದಲ್ಲಿ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ಇವರು 2005ರ ವಿಶ್ವ ಕುಬ್ಜರ ಕ್ರೀಡಾಕೂಟದಲ್ಲಿ ಅತಿ ಹೆಚ್ಚು ಪದಕ ಗಳಿಸಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

## ಸಿಎಂ ಬಿಎಸ್ ಯಡಿಯೂರಪ್ಪನವರಿಂದ 'ಮನೆ ಬಾಗಿಲಿಗೆ ಮಾಸಾಶನ' ಅಭಿಯಾನಕ್ಕೆ ಚಾಲನೆ



* ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರು ಇತ್ತೀಚಿಗೆ ನಡೆಯುವ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್'ನಲ್ಲಿ ನಡೆದ ಕಾರ್ಯಕ್ರಮದಲ್ಲಿ "ಮನೆ ಬಾಗಿಲಿಗೆ ಮಾಸಾಶನ" ಅಭಿಯಾನಕ್ಕೆ ಚಾಲನೆ ನೀಡಿದರು. ಅದರ ಜೊತೆಗೆ 'ನವೋದಯ ಆಯಪ್'ಅನ್ನು ಲೋಕಾರ್ಪಣೆ ಮಾಡಿದರು.
* ಭಾರತ ದೇಶದಲ್ಲೇ ಮೊದಲ ಬಾರಿಗೆ ಸಿಎಂ ಬಿಎಸ್ ಯಡಿಯೂರಪ್ಪನವರು ಹೊಸ ಪ್ರಯೋಗವನ್ನು ಮಾಡುತ್ತಿದ್ದು ಈ ಯೋಜನೆಯಿಂದ ಮನೆ ಬಾಗಿಲಿಗೆ ಪೆನ್ಶನ್ ಹಣ ನೀಡುವದಕ್ಕೆ ಮುಂದಾಗಿದೆ. ಈ ಯೋಜನೆಯು 60 ವರ್ಷ ಮೇಲ್ಪಟ್ಟವರಿಗೆ (ಆಧಾರ್ ಕಾರ್ಡ್ ಪರೀಕ್ಷಿಸಿ) ರೆವಿನ್ಯೂ ಇನ್ಸ್‌ಪೆಕ್ಟರ್ ಅಥವ ವಿಲೇಜ್ ಅಕೌಂಟೆಂಟ್ ಅವರ ಮನೆ ಬಾಗಿಲಿಗೆ ತೆರಳಿ ಹಣವನ್ನು ನೀಡಲಿದ್ದಾರೆ, ಎಂದು ಸರ್ಕಾರ ಮಾಹಿತಿಯನ್ನು ನೀಡಿದೆ.

## ಅಮೆರಿಕದಲ್ಲಿ 'ಮಾಜಿ ಅಧ್ಯಕ್ಷರ ಕಚೇರಿ' ಪ್ರಾರಂಭ



* ಅಮೆರಿಕದಲ್ಲಿ 'ಮಾಜಿ ಅಧ್ಯಕ್ಷರ ಕಚೇರಿ'ಯನ್ನು ಪಾಮ್ ಬೀಚ್ ಕೌಂಟಿಯಲ್ಲಿ ಎಂಬಲ್ಲಿ ಮಾಜಿ ಅಧ್ಯಕ್ಷನಾಗಿರುವ ಡೊನಾಲ್ಡ್ ಟ್ರಂಪ್ ಪ್ರಾರಂಭ ಮಾಡಿದ್ದಾರೆ. ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಹಾಗೂ ಹೇಳಿಕೆಗಳನ್ನು ನೀಡುವುದಕ್ಕಾಗಿ ಟ್ರಂಪ್ ಅವರು ಈ ಕಚೇರಿಯನ್ನು ಉಪಯೋಗಿಸಲಿದ್ದಾರೆ.
* ಟ್ರಂಪ್'ನ ಈ ಕಚೇರಿಯು ಪತ್ರವ್ಯವಹಾರಗಳು, ಸಾರ್ವಜನಿಕ ಹೇಳಿಕೆಗಳು, ಮತ್ತು ಕಾರ್ಯಕ್ರಮದ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ ಎಂದು ಅಮೇರಿಕಾದ ಪತ್ರಿಕಾ ಘೋಷಿ ಮಾಹಿತಿಯನ್ನು ನೀಡಿದೆ.

## ಜಲ ಸಂರಕ್ಷಣೆ ಪ್ರತಿಜ್ಞೆ (Mission Paani) ರಾಯಭಾರಿ ಅಕ್ಷಯ್ ಕುಮಾರ್




* ಖಾಸಗಿ ಸಂಸ್ಥೆಗಳಾದ 'ನೆಟ್‌ವರ್ಕ್ 18TV' ಹಾಗೂ 'ಹಾರ್ಪಿಕ್ ಇಂಡಿಯಾ' ಜಂಟಿಯಾಗಿ "ಜಲ ಸಂರಕ್ಷಣೆ ಪ್ರತಿಜ್ಞೆ" (Mission Paani) ಕಾರ್ಯಕ್ರಮವನ್ನು ನಡೆಸಿವೆ. ಈ ಅಭಿಯಾನಕ್ಕೆ ಅಮಿತಾಭ್ ಬಚ್ಚನ್, ಅಕ್ಷಯ್ ಕುಮಾರ್ ಕೈ ಜೋಡಿಸಿದ್ದಾರೆ, ಹಾಗೂ ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಕೂಡ 'ಮಿಷನ್ ಪಾನಿ' ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ಕಾರ್ಯಕ್ರಮದಲ್ಲಿ ಜಲ ಸಂರಕ್ಷಣೆ, ಜಲ ಬಿಕ್ಕಟ್ಟು, ನೀರಿನ ಸ್ವಚ್ಛತಾ ಆಂದೋಲನದ ಮತ್ತು ನೀರಿನ ಸಂರಕ್ಷಣೆ ಮತ್ತು ಸ್ವಚ್ಛತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಈಗಾಗಲೇ ಸಾವಿರಾರು ಜನರು ಜಲ ಪ್ರತಿಜ್ಞೆ ಮಾಡುವ ಮೂಲಕ ನೀರಿನ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಲು ಸಿದ್ದರಾಗಿದ್ದಾರೆ.

## ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಶ್ರೀಗಂಧದ ವಸ್ತು ಸಂಗ್ರಹಾಲಯ ಪ್ರಾರಂಭ



* ಇದೀಗ ಸಾಂಸ್ಕೃತಿಕ ನಗರ ಮೈಸೂರಿನಲ್ಲಿ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯು ದೇಶದ ಮೊಟ್ಟ ಮೊದಲ ಶ್ರೀಗಂಧದ ವಸ್ತು ಸಂಗ್ರಹಾಯ ಪ್ರಾರಂಭಿಸಿದೆ. ಪ್ರಸ್ತುತ ದೇಶದಲ್ಲೇ ಅತಿ ಹೆಚ್ಚು ಶ್ರೀಗಂಧ ಬೆಳೆಯುವ ಹಾಗೂ ಮಾರಾಟ ಮಾಡುವ ರಾಜ್ಯ ಕರ್ನಾಟಕವಾಗಿದೆ. ಆದ್ದರಿಂದ ಕರ್ನಾಟಕ ರಾಜ್ಯವನ್ನು ಶ್ರೀಗಂಧದ ನಾಡು ಎಂದು ಕರೆಯಲಾಗುತ್ತದೆ. ಈ ಶ್ರೀಗಂಧದ ಮ್ಯೂಸಿಯಂ ರಾಜ್ಯಕ್ಕೆ ಮಾದರಿಯಾಗಲಿದೆ ಎಂದು ಸರ್ಕಾರ ತಿಳಿಸಿದೆ.
* ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯು ಕೃಷಿ ಅಭಿವೃದ್ಧಿ ಹಾಗೂ ಅರಣ್ಯ ಸಂರಕ್ಷಣೆ ಜೊತೆಗೆ ಶ್ರೀಗಂಧದ ಅಭಿವೃದ್ಧಿಗೆ

ಪ್ರಮುಖ ಪಾತ್ರವಹಿಸುತ್ತಿದೆ.

## ಮೊದಲ ಬಾರಿಗೆ ಲಡಾಖ್'ನ ಸ್ತಬ್ಧಚಿತ್ರ 72ನೇ ಗಣರಾಜ್ಯೋತ್ಸವದಲ್ಲಿ ಪ್ರದರ್ಶನ



* ಇದೆ ಮೊದಲ ಬಾರಿಗೆ 72ನೇ ಗಣರಾಜ್ಯೋತ್ಸವದ ಪರೇಡ್'ನಲ್ಲಿ ಲಡಾಖ್'ನ ಐತಿಹಾಸಿಕ ತಿಕ್ಸೆ ಮಾನೆಸ್ಟರಿ ಹಾಗೂ ಸಂಸ್ಕೃತಿ ಪರಂಪರೆ, ಸಾಮೂದಾಯಿಕ ಸೌಹಾರ್ದತೆಯನ್ನು ವ್ಯಕ್ತಪಡಿಸುವ ಸ್ತಬ್ಧ ಚಿತ್ರವನ್ನು ಪ್ರದರ್ಶನ ಮಾಡಲಾಯಿತು.
* ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನದ 370ನೇ ವಿಧಿಯನ್ನು 2019 ರ ಆಗಸ್ಟ 5 ರಂದು ರದ್ದುಗೊಳಿಸಿ, ಜಮ್ಮು&ಕಾಶ್ಮೀರ ಹಾಗೂ ಲಡಾಖ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜನೆ ಮಾಡಿದ ನಂತರ ಲಡಾಕ್ ಕೇಂದ್ರಾಡಳಿತ ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುವ ಸ್ತಬ್ಧ ಚಿತ್ರವನ್ನು ಪ್ರದರ್ಶನ ಮಾಡಲಾಗಿದೆ.

## ಅಮೆರಿಕಾದ ಸೇನೆಯಿಂದ ತೃತೀಯ ಲಿಂಗಿಗಳ ನಿಷೇದ ಆದೇಶ ವಾಪಸ್ಸು



* ಅಮೇರಿಕಾದ ತೃತೀಯ ಲಿಂಗಿಯ ಪ್ರಜೆಗಳು ಸೇನೆಗೆ ಸೇರುವುದನ್ನು ಈ ಮೊದಲು ಅಮೆರಿಕಾದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನಿಷೇದಿಸಿದ್ದರು. ಪ್ರಸ್ತುತ ನೂತನ ಅಮೇರಿಕಾದ ಅಧ್ಯಕ್ಷರಾಗಿರುವ ಜೋ ಬೈಡೆನ್ ಅವರ ಈ ಆದೇಶವನ್ನು ಓವಲ್ ಕಚೇರಿಯಲ್ಲಿ ನಡೆದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರ ಸಮ್ಮುಖದಲ್ಲಿ ಹಿಂದಕ್ಕೆ ಪಡೆದಿದ್ದಾರೆ.
* ಅಮೇರಿಕಾದ ಅರ್ಹ ಪ್ರಜೆಗಳಿಗೆ ಸಮವಸ್ತ್ರದಲ್ಲಿ ದೇಶ ಸೇವೆ ಮಾಡಲು ಅವಕಾಶ ಇದೆ ಎಂದು ಜೋ ಬೈಡೆನ್ ನೂತನ ಆದೇಶದಲ್ಲಿ ತಿಳಿಸಿದ್ದಾರೆ. ಇನ್ನು ಯಾರನ್ನು ಲಿಂಗತ್ವ ಆಧಾರದ ಮೇಲೆ ಸೇನೆಯಿಂದ ಹೊರಹಾಕುವ ಆದೇಶವನ್ನು ನಿಷೇಧಿಸಲಾಗಿದೆ, ಎಂದು ನೂತನ ಅಮೇರಿಕಾದ ಅಧ್ಯಕ್ಷರಾಗಿರುವ ಜೋ ಬೈಡೆನ್ ತಿಳಿಸಿದರು.

# 28-01-2021

## ಜೆಡಿಎಸ್ ಶಾಸಕ ಎಂ ಸಿ ಮನಗೂಳಿ ವಿಧಿವಶ



* ಮಾಜಿ ಸಚಿವ, ಹಾಗೂ ಸಿಂದಗಿ ಕ್ಷೇತ್ರದ ಶಾಸಕ ಎಂ ಸಿ ಮನಗೂಳಿ ಅವರು ಇತ್ತೀಚಿಗೆ ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದರು.
* ಸಿಂದಗಿ ಕ್ಷೇತ್ರದ ಶಾಸಕ ಎಂ ಸಿ ಮನಗೂಳಿ ಅವರು 2018 ರಲ್ಲಿ ಜೆಡಿಎಸ್ ಪಕ್ಷದಿಂದ ಜಯಶಾಲಿಯಾಗಿ ಶಾಸಕರಾಗಿದ್ದರು, ಆ ಸಮಯದಲ್ಲಿ ಕಾಂಗ್ರೇಸ್ ಜೆಡಿಎಸ್ ನ ಮೈತ್ರಿ ಸರ್ಕಾರದ ಕುಮಾರಸ್ವಾಮಿ ನೇತೃತ್ವದಲ್ಲಿ ತೋಟಗಾರಿಕಾ ಸಚಿವರಾಗಿ, ಜೊತೆಗೆ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಈ ಮೊದಲು 1994ರ H.K ಪಟೇಲ್ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಉತ್ತಮ ಕಾರ್ಯ ವೈಖರಿಯನ್ನು ತೋರಿದ್ದರು.

## ಭಾರತದ ವಾಯುನೆಲೆಗೆ 3ನೇ ಹಂತದಲ್ಲಿ ಮತ್ತೆ 3 ರಫೇಲ್ ಯುದ್ಧ ವಿಮಾನಗಳ ಆಗಮನ



* ಫ್ರಾನ್ಸ್ ದೇಶದಲ್ಲಿನ ಡಾಸೊ ಏವಿಯೇಶನ್ ಕಂಪನಿ ತಯಾರಿಸುತ್ತಿರುವ ರಫೇಲ್ ಯುದ್ಧವಿಮಾನಗಳು ಪೈಕಿ 3ನೇ ಹಂತದಲ್ಲಿ 3 ರಫೇಲ್ ಯುದ್ಧ ವಿಮಾನಗಳು ಸರಿ ಸುಮಾರು 7 ಸಾವಿರ ಕಿ.ಮೀ ದೂರವನ್ನು ಕ್ರಮಿಸಿ ಗುಜರಾತನ ಜಾಮ್ ನಗರ್ ವಾಯುನೆಲೆಗೆ ಆಗಮಿಸಿವೆ.
* ಫ್ರಾನ್ಸ್ ದೇಶವು 59 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ರಫೇಲ್ ಯುದ್ಧವಿಮಾನಗಳನ್ನು ಕಳೆದ ವರ್ಷ ಸೆ.10 ರಂದು ವಾಯುಪಡೆಗೆ ಸೇರಿಕೊಂಡಿವೆ. ಹಾಗೂ ಎರಡನೇ ಹಂತದ ರಫೇಲ್ ಯುದ್ಧ ವಿಮಾನಗಳು ಕಳೆದ ವರ್ಷ ನವೆಂಬರ್‌ನಲ್ಲಿ ಭಾರತದ ವಾಯು ಪಡೆಗೆ ಸೇರಿಕೊಂಡಿವೆ. ಇದೀಗ 3ನೇ ಹಂತದ ರಫೇಲ್ ಯುದ್ಧ ವಿಮಾನಗಳು ಭಾರತವನ್ನು ತಲುಪಿವೆ.
* ಫ್ರಾನ್ಸ್ ದೇಶದಿಂದ 2023ರ ವೇಳೆಗೆ ಭಾರತಕ್ಕೆ ಒಟ್ಟು 36 ರಫೇಲ್ ಯುದ್ಧ ವಿಮಾನಗಳು ಬಂದಿಳಿಯಲಿವೆ ಎಂದು ಏರ್ ಚೀಫ್ ಮಾರ್ಷಲ್ ಆರ್.ಕೆ.ಎಸ್. ಭದೌರಿ ಅವರು

ಮಾಹಿತಿಯನ್ನು ನೀಡಿದ್ದಾರೆ.

## ಕರ್ನಾಟಕ ರಾಜ್ಯದ ಮೊದಲ 'ಹೆಣ್ಣು ಮಗು ವೃತ್ತ'ದ ಉದ್ಘಾಟನೆ ಸಮಾರಂಭ



* ಪ್ರಸ್ತುತ ಕೇಂದ್ರ ಸರ್ಕಾರವು ಈ ಹಿಂದೆ "ಬೇಟಿ ಬಚಾವೋ ಬೇಟಿ ಪಡಾವೋ"ಜಾಗೃತಿ ಕಾರ್ಯಕ್ರಮವನ್ನು ಜಾರಿಗೆ ತಂದಿತ್ತು. ಇದೀಗ ಅದರ ಅಂಗವಾಗಿ ಕರ್ನಾಟಕ ರಾಜ್ಯದ ಬೀದರ ಜಿಲ್ಲೆಯ ನಗರದ ವ್ಯಾಪ್ತಿಯಲ್ಲಿ ಮೊದಲ ಹೆಣ್ಣು ಮಗು ವೃತ್ತದ ಉದ್ಘಾಟನೆಯನ್ನು ಮಾಡಲಾಗಿದೆ.
* ಈ ವೃತ್ತ ದಿಂದ ಪ್ರತಿಯೊಬ್ಬ ಪ್ರಜೆಯು ಹೆಣ್ಣು ಮಗುವಿನ ಮೇಲೆ ಪ್ರತಿಯೊಬ್ಬರು ಅಭಿಮಾನ ಮತ್ತು ಗೌರವವನ್ನು ನೀಡಬೇಕು ಎಂಬ ಸಂದೇಶವನ್ನು ತಿಳಿಸಲಾಗಿದೆ.
* ರಾಜ್ಯದ ಬೀದರ ನಗರಸಭೆ ಕಾರ್ಯಾಲಯ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಂಟಿಯಾಗಿ ಈ ವೃತ್ತವನ್ನು ನಿರ್ಮಿಸಿವೆ. ಹಾಗೂ ಇದನ್ನು ಬೇಟಿ ಸರ್ಕಲ್ ಎಂದು ಕರೆಯುತ್ತಾರೆ.

## ಕರ್ನಾಟಕ ಸರ್ಕಾರದಿಂದ 'ಹಳ್ಳಿ ಕಡೆಗೆ ಡಿಸಿ' ಯೋಜನೆಗೆ ಚಾಲನೆ



* ಕರ್ನಾಟಕ ರಾಜ್ಯ ಸರ್ಕಾರವು ಮೊದಲ ಬಾರಿಗೆ ಗ್ರಾಮೀಣ ಜನರಿಗೆ ಉಪಯೋಗವಾಗಲೆಂದು "ಹಳ್ಳಿ ಕಡೆಗೆ ಡಿಸಿ" ಎಂಬ ವಿನೂತನ ಕಾರ್ಯಕ್ರಮಕ್ಕೆ ಉಡುಪಿ ಜಿಲ್ಲೆಯಲ್ಲಿ ಜನವರಿ 30 ಕ್ಕೆ ಚಾಲನೆ ನೀಡಲಿದೆ. ಈ ಯೋಜನೆ ಯಶಸ್ಸುಗೊಂಡರೆ, ನಂತರ ದಿನಗಳಲ್ಲಿ ಬೇರೆ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ವಿಸ್ತರಿಸಲಾಗುವದು ಎಂದು ಸರ್ಕಾರ ತಿಳಿಸಿದೆ.
* ಈ ಯೋಜನೆ ಇಂದ ಗ್ರಾಮಗಳಿಗೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಕಂದಾಯ ಇಲಾಖೆಗೆ ಸಂಬಂಧಿಸಿದ ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಿದ್ದಾರೆ. ಈ "ಹಳ್ಳಿ ಕಡೆಗೆ ಡಿಸಿ" ಎಂಬ ಕಾರ್ಯಕ್ರಮದ ಮೂಲಕ ಪ್ರತಿ ತಿಂಗಳ 3 ನೇ ಶನಿವಾರ ಜಿಲ್ಲಾಧಿಕಾರಿಗಳು ಗ್ರಾಮಗಳಿಗೆ ತೆರಳಿ ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ ಎಂದು ಸರ್ಕಾರ ತಿಳಿಸಿದೆ.

## ಕೇಂದ್ರ ಸರ್ಕಾರದಿಂದ 2020 21 ನೇ ವರ್ಷದ ಅನುದಾನದಹಣ ಬಿಡುಗಡೆ



* ಕೇಂದ್ರ ಸರ್ಕಾರವು 2020 21 ನೇ ಹಣಕಾಸು ವರ್ಷದ ಎರಡನೇ ಕಂತಿನ ಅನುದಾನ ಹಣವನ್ನು ರಾಜ್ಯದ ಗ್ರಾಮೀಣಾ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ.
* ಕೇಂದ್ರ ಹಣಕಾಸು ಸಚಿವಾಲಯವು, ಕೇಂದ್ರ ಪಂಚಾಯತ್ ರಾಜ್ ಸಚಿವಾಲಯದ ಶಿಫಾರಸಿನ ಅನ್ವಯದ ಮೇಲೆ ಒಟ್ಟು 18 ರಾಜ್ಯಗಳಿಗೆ ಸರಿ ಸುಮಾರು 12,351 ಕೋಟಿ ರೂ. ಅನುದಾನದ ಹಣವನ್ನು ಬಿಡುಗಡೆಗೊಳಿಸಿದೆ.
* ಪ್ರಸ್ತುತ ಕರ್ನಾಟಕ ರಾಜ್ಯಕ್ಕೆ 2412 ಕೋಟಿ ರೂ. ಅನುದಾನದ ಹಣವನ್ನು ನೀಡಲಾಗಿದೆ.
* ಬಿಡುಗಡೆಗೊಂಡ ಅನುದಾನದ ಹಣವನ್ನು, ಗ್ರಾಮಪಂಚಾಯಿತಿ, ತಾಲೂಕು ಪಂಚಾಯಿತಿ, ಜಲ್ಲಾಪಂಚಾಯಿತಿ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ಎಲಾನ್ ಮಸ್ಕ್ ಒಡೆತನದ ಬಾಹ್ಯಾಕಾಶ ಕಂಪನಿಯಿಂದ 143 ಉಪಗ್ರಹಗಳು ಕಕ್ಷೆಗೆ



* ಅಮೆರಿಕದ ಖಾಸಗಿ ಬಾಹ್ಯಾಕಾಶ ಸ್ಪೇಸ್ಎಕ್ಸ್‌ನ, ಕಂಪನಿ ಫ್ಲೋರಿಡದ ಕೇಪ್ ಕ್ಯಾನವರಲ್ ಬಾಹ್ಯಾಕಾಶ ನಿಲ್ದಾಣದಿಂದ 'ಫಾಲ್ಕನ್ 9' ರಾಕೆಟ್ ಬಳಸಿಕೊಂಡು ಒಟ್ಟು 143 ಉಪಗ್ರಹಗಳನ್ನು ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ಕಕ್ಷೆಗೆ ಹಾರಿಸಲಾಯಿತು.
* ಇದರಲ್ಲಿ 133 ವಾಣಿಜ್ಯ ಮತ್ತು ಸರಕಾರಿ ಉಪಗ್ರಹಗಳು ಹಾಗೂ 10 ಸ್ಪೇಸ್ಎಕ್ಸ್ ಉಪಗ್ರಹಗಳನ್ನು ಒಳಗೊಂಡಿದೆ ಹಾಗೂ ಇದು ಎಲಾನ್ ಮಸ್ಕ್ ಒಡೆತನದ ಖಾಸಗಿ ಬಾಹ್ಯಾಕಾಶ ಕಂಪನಿಯಾಗಿದೆ.

## ICCಯಿಂದ ಪ್ಲೇಯರ್ ಆಫ್ ದಿ ಮಂತ್ ಪ್ರಶಸ್ತಿ ಘೋಷಣೆ

* ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿ (ICC) 'ಐಸಿಸಿ ಪ್ಲೇಯರ್ ಆಫ್ ದಿ ಮಂತ್' ಎಂಬ ಪ್ರಶಸ್ತಿಯನ್ನು ನೀಡುವದಾಗಿ ಘೋಷಿಸಿದೆ. ಈ ಪ್ರಶಸ್ತಿಯನ್ನು ವರ್ಷಪೂರ್ತಿ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪುರುಷ ಮತ್ತು ಮಹಿಳಾ ಕ್ರಿಕೆಟಿಗರ ಅತ್ಯುತ್ತಮ ಪ್ರದರ್ಶನಗಳನ್ನು ಪರಿಗಣಿಸಿ ಪ್ರಶಸ್ತಿಯನ್ನು ನೀಡಲಾಗುತ್ತದೆ ಎಂದು ICC ತಿಳಿಸಿದೆ.
* ಪುರುಷರ ಮತ್ತು ಮಹಿಳಾ ವಿಭಾಗದ 'ಐಸಿಸಿ ಪ್ಲೇಯರ್ ಆಫ್ ದಿ ಮಂತ್' ಪ್ರಶಸ್ತಿಗಾಗಿ ಆಟಗಾರರ ಗುರುತಿಸಿ ಆಯ್ಕೆ ಮಾಡಲು ವೋಟಿಂಗ್ ನಲ್ಲಿ ಅಭಿಮಾನಿಗಳನ್ನೂ ಸೇರಿಸಿಕೊಳ್ಳಲಾಗುವುದು ಎಂಬ ಮಾಹಿತಿಯನ್ನು ICC ನೀಡಿದೆ.

## ತಮಿಳುನಾಡಿನಲ್ಲಿ ದಿವಂಗತ ಮುಖ್ಯಮಂತ್ರಿ ಜಯಲಲಿತ ಸ್ಮಾರಕ ಉದ್ಘಾಟನೆ



* ತಮಿಳುನಾಡು ಮುಖ್ಯಮಂತ್ರಿಯಾಗಿರುವ ಕೆ. ಪಳನೀಸ್ವಾಮಿ ಅವರು ಇತ್ತೀಚಿಗೆ ದಿವಂಗತ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಸಮಾಧಿ ಸ್ಥಳವಾದ ಮರೀನಾ ಬೀಚ್ ಬಳಿ 50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 'ಫಿನಿಕ್ಸ್ ಥೀಮ್' ಸ್ಮಾರಕವನ್ನು ಉದ್ಘಾಟಣೆ ಮಾಡಿದರು.

## ಹೆಚ್1ಬಿ ವೀಸಾದಾರರಿಗೆ ಅಮೆರಿಕ ಸರ್ಕಾರದಿಂದ ಮಹತ್ವದ ನಿರ್ಧಾರ




* ಪ್ರಸ್ತುತ ಅಮೆರಿಕ ಅಧ್ಯಕ್ಷರಾಗಿರುವ ಜೋ ಬಿಡೆನ್'ರವರು ಅಮೆರಿಕದಲ್ಲಿ ಕೆಲಸ ಮಾಡುತ್ತಿರುವ ಹೆಚ್ 1 ಬಿ ವೀಸಾದಾರ ಭಾರತೀಯರ, ಈ ಹಿಂದೆ ಟ್ರಂಪ್ ಅಧಿಕಾರಾವಧಿಯ ನಿರ್ಬಂಧವನ್ನು ಹಿಂಪಡೆದಿದ್ದಾರೆ. ಈ ವಿಚಾರ ಭಾರತೀಯರಿಗೆ ಖುಷಿ ನೀಡಿದೆ.
* ಅಮೆರಿಕ ಸರ್ಕಾರವು ಹೆಚ್1ಬಿ ವೀಸಾ ಕೆಲಸಗಾರರ ಹೆಚ್4 ವೀಸಾದಾರ ಸಂಗಾತಿಯರು ಅಮೆರಿಕದಲ್ಲಿ ಕೆಲಸ ಮಾಡಲು ಅವಕಾಶ ನೀಡಿದೆ.
* ಈ ಹಿಂದಿನ ಅಮೆರಿಕ ಅಧ್ಯಕ್ಷರಾಗಿರುವ ಡೊನಾಲ್ಡ್ ಟ್ರಂಪ್ ಕಳೆದ ನಾಲ್ಕು ವರ್ಷಗಳಿಂದ ಅಧಿಕಾರಾವಧಿಯಲ್ಲಿ ಹೆಚ್ 1 ಬಿ ವೀಸಾದಾರರ ಸಂಗಾತಿಗಳಿಗೆ ಅಮೆರಿಕದಲ್ಲಿ ಕಾರ್ಯ ನಿರ್ವಹಿಸಲು ಅನುಮತಿಯನ್ನು ನೀಡಿರಲಿಲ್ಲ. ಪ್ರಸ್ತುತ ಈಗಿನ ಅಮೆರಿಕದ ಜೋ ಬಿಡೆನ್ ಸರ್ಕಾರ ಅವಕಾಶ ನೀಡಿದೆ.

# 29-01-2021

## 2021ರ ಗಣರಾಜ್ಯೋತ್ಸವ ಪರೇಡ್'ನಲ್ಲಿ ಉತ್ತರ ಪ್ರದೇಶದ ರಾಮ ಮಂದಿರ ಸ್ತಬ್ಧಚಿತ್ರಕ್ಕೆ ಪ್ರಥಮ ಸ್ಥಾನ




* 2021 ಜನವರಿ 26ರಂದು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಉತ್ತರ ಪ್ರದೇಶದ ಅಯೋಧ್ಯೆಯ ಪರಂಪರೆಯನ್ನು ತಿಳಿಸುವ ರಾಮ ಮಂದಿರ ಸ್ತಬ್ಧಚಿತ್ರಕ್ಕೆ ಮೊದಲ ಸ್ಥಾನ ಲಭಿಸಿದೆ.
* ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಎರಡನೇ ಸ್ಥಾನವನ್ನು ತ್ರಿಪುರಾ ರಾಜ್ಯದ ಸ್ತಬ್ಧಚಿತ್ರವು ಪಡೆದಿದೆ.
* ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಮೂರನೇ ಸ್ಥಾನವನ್ನು ಉತ್ತರಖಾಂಡ ರಾಜ್ಯದ ಸ್ತಬ್ಧಚಿತ್ರವು ಪಡೆದಿದೆ. ಸ್ತಬ್ಧಚಿತ್ರಗಳನ್ನು ಅವುಗಳ ವಿಷಯ, ಪರಿಕಲ್ಪನೆ, ವಿನ್ಯಾಸ ಮತ್ತು ಅದರ ದೃಶ್ಯ ಪ್ರಭಾವದ ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಲಾಗುತ್ತದೆ.

## ಭಾರತದ 146 ಜಿಲ್ಲೆಗಳು ಈಗ `ಕೋವಿಡ್ ಮುಕ್ತ'




* ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್'ರವರು ಕಳೆದ ಏಳು ದಿನಗಳಿಂದ ಭಾರತದ 146 ಜಿಲ್ಲೆಗಳಲ್ಲಿ ಒಂದೇ ಒಂದು ಕೋವಿಡ್ ಸೋಂಕು ಪತ್ತೆಯಾಗಿಲ್ಲ

ಎಂಬ ಮಾಹಿತಿಯನ್ನು ನೀಡಿದ್ದಾರೆ.
* ಇತ್ತೀಚಿಗೆ ಕೇಂದ್ರ ಸರ್ಕಾರದ ಪ್ರಧಾನಿ ನರೇಂದ್ರ ಮೋದಿಜಿ ಅವರು ಜಾರಿಗೆ ತಂದ "ಸಮಗ್ರ ಸರ್ಕಾರ" ಹಾಗೂ "ಸಮಗ್ರ ಸಮಾಜ" ಧೋರಣೆಯಿಂದ ಭಾರತವು ಈ ಸಾಂಕ್ರಾಮಿಕ ರೋಗವನ್ನು ತಡೆಯುವಲ್ಲಿ ಅಥವಾ ಹತೋಟಿಗೆ ತರುವಲ್ಲಿ ಯಶಸ್ವಿಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್'ರವರು ತಿಳಿಸಿದ್ದಾರೆ.

## 'ಜಿಯೊ'(JIO) ಇದೀಗ ವಿಶ್ವದ ಐದನೆಯ ಅತ್ಯಂತ ಬಲಿಷ್ಠ ಬ್ರ್ಯಾಂಡ್




* ಇತ್ತೀಚಿಗೆ ಬ್ರ್ಯಾಂಡ್ ಫೈನಾನ್ಸ್ ಸಂಸ್ಥೆಯು ಇದೀಗ ವಿಶ್ವದ ಅತ್ಯಂತ ಬಲಿಷ್ಠ ಬ್ರ್ಯಾಂಡ್'ಗಳ ಪಟ್ಟಿ ಬಿಡುಗಡೆ ಮಾಡಿದೆ, ಈ ಪಟ್ಟಿಯಲ್ಲಿ ಪ್ರಸ್ತುತ ರಿಲಯನ್ಸ್ ಜಿಯೊ ವಿಶ್ವದ ಐದನೆಯ ಅತ್ಯಂತ ಬಲಿಷ್ಠ ಬ್ರ್ಯಾಂಡ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇನ್ನು ಪ್ರಥಮ ಸ್ಥಾನದಲ್ಲಿ 'ವಿಚ್ಯಾಟ್' ಬ್ರ್ಯಾಂಡ್ ಇದೆ ಎಂದು ಬ್ರ್ಯಾಂಡ್ ಫೈನಾನ್ಸ್ ಸಂಸ್ಥೆಯು ಮಾಹಿತಿಯನ್ನು ನೀಡಿದೆ.
* ಪ್ರಸ್ತುತ ಭಾರತದ ಈ ಜಿಯೊ ಕಂಪನಿಯು ಕಡಿಮೆ ಸಮಯದಲ್ಲಿ ಅತಿದೊಡ್ಡ ಮೊಬೈಲ್ ನೆಟ್‌ವರ್ಕ್ ಆಗಿ ಬೆಳೆದು ಹೆಸರುವಾಸಿಯಾಗಿದೆ. ಜೊತೆಗೇನೆ ವಿಶ್ವದ ಮೂರನೆಯ ಅತಿದೊಡ್ಡ ಮೊಬೈಲ್ ನೆಟ್‌ವರ್ಕ್ ಕಂಪನಿ ಕೂಡ ಜಿಯೊ ಆಗಿದೆ. ಎಂಬ ಮಾಹಿತಿಯನ್ನು ಬ್ರ್ಯಾಂಡ್ ಫೈನಾನ್ಸ್ ಸಂಸ್ಥೆಯು ತಿಳಿಸಿದೆ.

## ಕನ್ನಡದ "ಅಮೃತಮತಿಗೆ" ಅಂತರರಾಷ್ಟ್ರೀಯ ಪ್ರಶಸ್ತಿ





* ಇತ್ತೀಚಿಗೆ ಅಮೆರಿಕದ ಅಟ್ಲಾಂಟದಲ್ಲಿ ನಡೆದ ಚಲನಚಿತ್ರೋತ್ಸವದ ಸಮಾರಂಭದಲ್ಲಿ, ಕನ್ನಡದ 'ಅಮೃತಮತಿ'ಗೆ ಅತ್ಯುತ್ತಮ ವಿದೇಶಿ ಭಾಷಾ ಚಿತ್ರ ಪ್ರಶಸ್ತಿಯನ್ನು, ಕನ್ನಡ ನಟಿಯಾದ ಹರಿಪ್ರಿಯಾ ಅವರಿಗೆ ಅಮೆರಿಕದ ಅಟ್ಲಾಂಟ ಪ್ರಶಸ್ತಿಯನ್ನು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನೀಡಲಾಯಿತು.
* ಕನ್ನಡದ ಈ ಅಮೃತಮತಿ ಚಿತ್ರವನ್ನು ಸಾಹಿತಿ, ನಿರ್ದೇಶಕರಾದ ಬರಗೂರು ರಾಮಚಂದ್ರಪ್ಪರವರು ನಿರ್ದೇಶಿಸಿದ್ದಾರೆ, ಮತ್ತು ಇದರಲ್ಲಿ ಹರಿಪ್ರಿಯಾ ಹಾಗೂ ಕಿಶೋರ್ ಅವರು ಮುಖ್ಯಭೂಮಿಕೆ ನಟಿಸಿದ್ದರು.
* ಇದು 13ನೇ ಶತಮಾನದ ಜನ್ನ ಕವಿಯ ಯಶೋಧರ ಚರಿತೆ ಕತೆಯನ್ನು ಆಧಾರಿಸಿರುವ ಚಲನಚಿತ್ರವಾಗಿರುವುದು ವಿಶೇಷ.

## ಕರ್ನಾಟಕ ರಾಜ್ಯ ಪೊಲೀಸರಿಗೆ ಇನ್ನು 'ವಾರದ ರಜೆ' ಕಡ್ಡಾಯ



* ಕರ್ನಾಟಕ ರಾಜ್ಯದ ಪೊಲೀಸರಿಗೆ ವಾರದ ರಜೆ ಕಡ್ಡಾಯಗೊಳಿಸುವಂತೆ ಡಿಜಿ & ಐಜಿಪಿಯಾದ ಪ್ರವೀಣ್ ಸೂದ್ ಸುತ್ತೋಲೆ ಹೊರಡಿಸಿದ್ದಾರೆ. ಅದರಂತೆ, ನಗರ ಪೊಲೀಸ್ ಆಯುಕ್ತರು, ಎಲ್ಲಾ ವಲಯಗಳ IGP ಮತ್ತು ಎಲ್ಲಾ SPಗಳಿಗೆ ಈ ಸುತ್ತೋಲೆಯ ಮಾಹಿತಿಯನ್ನು ನೀಡಿದ್ದಾರೆ.
* ಈ ಮೊದಲು ಪೊಲೀಸ್ ಸಿಬ್ಬಂದಿಗಳು ವಾರದ ರಜೆಯನ್ನು ನಮ್ಮ ಮೇಲಾಧಿಕಾರಿಗಳು ನೀಡುತ್ತಿಲ್ಲ ಎಂದು DG & IGP ಪ್ರವೀಣ್ ಸೂದ್ ರವರಿಗೆ ಪತ್ರದ ಮೂಲಕ ತಿಳಿಸಿದ್ದರು. ಈ ವರದಿಯನ್ನು ಪರಿಗಣಿಸಿದ ಪ್ರವೀಣ್ ಸೂದ್ ಅವರು ಎಲ್ಲಾ ಪೊಲೀಸ್ ಸಿಬ್ಬಂದಿಗಳಿಗೆ ವಾರದ ರಜೆಯನ್ನು ಕಡ್ಡಾಯವಾಗಿ ನೀಡುವಂತೆ ವಲಯ IGP ಮತ್ತು ಜಿಲ್ಲಾ SPಗಳಿಗೆ ಕಟ್ಟುನಿಟ್ಟಾಗಿಸೂಚನೆಮೂಲಕತಿಳಿಸಿದ್ದಾರೆ.

## ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ 6 ಹೊಸ ಜಾತಿಯ ಪಕ್ಷಿಗಳು ಪತ್ತೆ



* ಇತ್ತೀಚಿಗೆ ಪಕ್ಷಿ ಪ್ರಿಯ ಸ್ವಯಂಸೇವಕರು ಮತ್ತು ಅರಣ್ಯ ಕಾಲೇಜಿನ ವಿದ್ಯಾರ್ಥಿಗಳು ಜೊತೆಗೂಡಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ 4 ದಿನಗಳ ಕಾಲ ಪಕ್ಷಿ ಸಮೀಕ್ಷೆಯನ್ನು ನಡೆಸಿದರು. ಈ ಪಕ್ಷಿ ಸಮೀಕ್ಷೆಯಲ್ಲಿ ಒಟ್ಟು 270 ಪ್ರಬೇಧಗಳನ್ನು ಗುರುತಿಸಲಾಗಿದೆ, ಅದರಲ್ಲಿ 6 ಹೊಸ ಜಾತಿಯ ಪಕ್ಷಿಗಳು ಪತ್ತೆಹಚ್ಚಲಾಗಿದೆ ಎಂದು ತಿಳಿಸಿದ್ದಾರೆ. 6 ಹೊಸ ಜಾತಿಯ ಪಕ್ಷಿಗಳು ವಿವರ ಇಂತಿದೆ.
* ಬ್ಲಾಕ್ ರೆಡ್ ಸ್ಟಾರ್ಟ್ ಪಕ್ಷಿ.
* ಗ್ರೀನಿಷ್ ವಾರ್‌ಬ್ಲರ್ ಪಕ್ಷಿ.
* ಗ್ರೇಟರ್ ಸ್ಪಾಟೆಡ್ ಈಗಲ್ ಪಕ್ಷಿ.

* ಸ್ಪಾಟ್ ಬೆಲ್ಲಿಡ್ ಈಗಲ್ ಔಲ್ ಪಕ್ಷಿ.
* ನೀಲಗಿರಿ ಫ್ಲವರ್ ಪಿಕ್ಕರ್ ಪಕ್ಷಿ.
* ಮಾಂಟಾಗೂ ಹ್ಯಾರಿಯರ್ ಪಕ್ಷಿ. ಈ ಹೊಸಬಗೆಯ ಪಕ್ಷಿಗಳನ್ನು, ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಪತ್ತೆಹಚ್ಚಲಾಗಿದೆಎಂದುಸಮೀಕ್ಷೆಯಲ್ಲಿ ತಿಳಿದುಬಂದಿದೆ.

## ಯಾದಗಿರಿ ಜಿಲ್ಲೆಯ ವಿದ್ಯಾರ್ಥಿನಿ ಒಂದು ದಿನದಅತಿಥಿಸಿಇಒ

* ಕಲ್ಯಾಣ ಕರ್ನಾಟಕದ ವ್ಯಾಪ್ತಿಯಲ್ಲಿರುವ ಯಾದಗಿರಿ ಜಿಲ್ಲೆಯಲ್ಲಿ 'ರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಆಚರಣೆ' ಹಿನ್ನಲೆಯಲ್ಲಿ ವಿದ್ಯಾರ್ಥಿನಿಯೊಬ್ಬಳಿಗೆ ಒಂದು ದಿನದ ಮಟ್ಟಿಗೆ ಅತಿಥಿ ಸಿಇಒ ಆಗುವ ಅವಕಾಶವನ್ನು ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಿಲ್ಪಾ ಶರ್ಮಾ ನೀಡಿದ್ದರು.
* ಒಂದು ದಿನದ ಮಟ್ಟಿಗೆ ಅತಿಥಿ ಸಿಇಒ ಆಗುವ ಅವಕಾಶವು ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಕಂದಕೂರ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಗೆ ನೀಡಲಾಗಿದೆ ಎಂದು ಯಾದಗಿರಿ ಜಿಲ್ಲಾ ಸಿಇಒ ಶಿಲ್ಪಾ ಶರ್ಮಾ ಮಾಹಿತಿಯನ್ನು ನೀಡಿದ್ದಾರೆ.

# 30-01-2021

## ರಾಷ್ಟ್ರಪಿತ ಮಹಾತ್ಮಾ ಗಾಂಧಿ 73ನೇ ಪುಣ್ಯತಿಥಿ ಸ್ಮರಣೆ



* ದೇಶದ ಪಿತಾಮಹ ಹಾಗೂ ರಾಷ್ಟ್ರಪಿತ ಎಂದು ಕರೆಯಲ್ಪಡುವ ಮಹಾತ್ಮಾ ಗಾಂಧೀಜಿ ಅವರ 73ನೇ ಪುಣ್ಯತಿಥಿ ಸ್ಮರಣೆ ದಿನವನ್ನು ಹುತಾತ್ಮ ದಿನ ಎಂದು ಕರೆಯಲಾಗುತ್ತದೆ. ಜೊತೆಗೆ ಮಹಾತ್ಮಾ ಗಾಂಧೀಜಿಯವರ ಜೀವನ, ಅವರ ತತ್ವ, ಆದರ್ಶಗಳು ಇಂದಿಗೂ ಜನರು ಪಾಲಿಸುತ್ತಿದ್ದಾರೆ.
* ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣಬಿಟ್ಟ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ನಮನ ಸಲ್ಲಿಸಲು, ಪ್ರತಿವರ್ಷ ಜನವರಿ 30 ಹುತಾತ್ಮ ದಿನ ಎಂದು ಆಚರಣೆ ಮಾಡಲಾಗುತ್ತದೆ, ಹಾಗೂ ಇದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಹತ್ಯೆಯಾದ ದಿನವಾಗಿದೆ.

## ಅತಿ ಹೆಚ್ಚು ಮಹಿಳಾ ಪೊಲೀಸರನ್ನು ಹೊಂದಿರುವ ರಾಜ್ಯಗಳು



* ಬಿಹಾರ ರಾಜ್ಯವು ಅತಿ ಹೆಚ್ಚು ಮಹಿಳಾ ಪೊಲೀಸ ಸಿಬ್ಬಂದಿಯನ್ನು ಹೊಂದಿದ ರಾಜ್ಯವಾಗಿದೆ ಎಂದು 'ಇಂಡಿಯಾ ಜಸ್ಟಿಸ್ ಸಮೀಕ್ಷೆಯ' ವರದಿ ಪ್ರಕಾರ ತಿಳಿದು ಬಂದಿದೆ.
* ಪ್ರಸ್ತುತ ಬಿಹಾರ ರಾಜ್ಯದಲ್ಲಿ 25.3% ರಷ್ಟು ಮಹಿಳಾ ಸಿಬ್ಬಂದಿಯ ಹೊಂದಿದ್ದು, ಹಿಮಾಚಲ ಪ್ರದೇಶ 19.2% ರಷ್ಟು, ಮತ್ತು ತಮಿಳುನಾಡು ರಾಜ್ಯ 18.5% ರಷ್ಟು ಹೊಂದಿದೆ.
* ತಮಿಳುನಾಡು ರಾಜ್ಯವು ಅತಿ ಹೆಚ್ಚು ಮಹಿಳಾ ಪೊಲೀಸ ಅಧಿಕಾರಿಗಳನ್ನು ಅಂದರೆ 24.8%ರಷ್ಟು ಹೊಂದಿರುವ ರಾಜ್ಯವಾಗಿದೆ. ನಂತರ ಮಿಜೋರಾಂ ರಾಜ್ಯ ಕೂಡ 20.1% ರಷ್ಟು ಮಹಿಳಾ ಪೊಲೀಸ ಅಧಿಕಾರಿಗಳನ್ನು ಹೊಂದಿದೆ.
* ಪ್ರಸ್ತುತ ಸಿಕ್ಕಿಂ ರಾಜ್ಯದ ಹೈಕೋರ್ಟ್‌ಗಳಲ್ಲಿ 33.3 ಪ್ರತಿಶತ ಮಹಿಳಾ ನ್ಯಾಯಾಧೀಶೆಯರನ್ನು ಒಳಗೊಂಡಿದೆ.
* ಪ್ರಸ್ತುತ ದೇಶಾದ್ಯಂತ ಇರುವ ಹೈಕೋರ್ಟ್‌ಗಳಲ್ಲಿ 29% ಮಹಿಳಾ ನ್ಯಾಯಾಧೀಶರನ್ನು ಹೊಂದಿದೆ ಎಂದು ತಿಳಿದು ಬಂದಿದೆ.

## ಮಾತೃವಂದನಾ ಯೋಜನೆ ಅನುಷ್ಠಾನ




* ಪ್ರಧಾನಮಂತ್ರಿ ಮಾತೃವಂದನಾ ಯೋಜನೆಯು ಜನವರಿ 1, 2017ರಲ್ಲಿ ಪ್ರಾರಂಭವಾಗಿದೆ, ಈ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕದಲ್ಲಿ ರಾಮನಗರ ಜಿಲ್ಲೆಯು ಪ್ರಥಮ ಸ್ಥಾನ ಪಡೆದಿದೆ, ಹಾಗೂ ಯಾದಗಿರಿ ಜಿಲ್ಲೆಯು 2ನೇ ಸ್ಥಾನ ಪಡೆದಿದೆ.
* ಮಾತೃವಂದನಾ ಯೋಜನೆಯು ಗರ್ಭಿಣಿ, ಬಾಣಂತಿಯರಿಗೆ ಹಣವನ್ನು ಸರಿಯಾದ ಸಮಯಕ್ಕೆ ನೀಡಲು ಈ ಯೋಜನೆ ಸಹಾಯವಾಗಿದೆ.

## ಸಾಹಸೋದ್ಯಮ ಬಂಡವಾಳ (Venture Capital)ನಲ್ಲಿ ಬೆಂಗಳೂರು ಮೊದಲ ಸ್ಥಾನ



* ದೇಶದ IT BT ಸಿಟಿ/ ಸಿಲಿಕಾನ್ ಸಿಟಿ ಎಂದೇ ಪ್ರಖ್ಯಾತಿ ಪಡೆದಿರುವ ಬೆಂಗಳೂರು ನಗರಕ್ಕೆ ಇದೀಗ ಸಾಹಸೋದ್ಯಮ ಬಂಡವಾಳ ಹೂಡಿಕೆಯಲ್ಲಿ Venture Capitalನಲ್ಲಿ ಮೊದಲ ಸ್ಥಾನಕ್ಕೆ ದೊರೆತಿದೆ, ವಿಶ್ವದ ಇತರೆ ಮೆಟ್ರೋ ಪಾಲಿಟನ್ ನಗರಗಳನ್ನ ಹಿಂದಾಕಿದೆ, ಇತ್ತೀಚಿಗೆ ಬೆಂಗಳೂರು ನಗರವು ಟೆಕ್ನಾಲಜಿ, ಆರೋಗ್ಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.
* ಸಾಹಸೋದ್ಯಮ ಹೂಡಿಕೆಯಲ್ಲಿ (Venture Capital) ಜಗತ್ತಿನ ಅತ್ಯಂತ ಸೂಕ್ತ ಪ್ರದೇಶ ಬೆಂಗಳೂರು ನಗರವಾಗಿದೆ, ಇದನ್ನು 2016 ರಿಂದ 2020ರ 5 ವರ್ಷದ ಕಾಲಾವಧಿಯಲ್ಲಿ ಆದ ಅಭಿವೃದ್ಧಿಯನ್ನು ಪರಿಗಣಿಸಿ ಈ ಸರ್ವೇ ಮಾಡಲಾಗಿದೆ ಎಂದು ಲಂಡನ್ ನ ಪ್ರಖ್ಯಾತ ಹೂಡಿಕೆ ಹಾಗೂ ಟೆಕ್ಕಿ ಸಂಸ್ಥೆ ಡೀಲ್ ರೂಂ.ಕಾಂ ಎಂಬ ಸಂಸ್ಥೆಯು ಸಂಶೋಧನೆಯನ್ನು ನಡೆಸಿ ಈ ಮಾಹಿತಿ ನೀಡಿದೆ.

## ಜನರಿಗೆ ಅತ್ಯುತ್ತಮ ನ್ಯಾಯ ನೀಡುವದರಲ್ಲಿ ಮಹಾರಾಷ್ಟ್ರ ಉತ್ತಮ



* 2020ರ ಭಾರತ ನ್ಯಾಯಾಧಿಕಾರ ವರದಿ ಪ್ರಕಾರ, ಜನರಿಗೆ ನ್ಯಾಯ ಒದಗಿಸಿ ಕೊಡುವದರಲ್ಲಿ ಮಹಾರಾಷ್ಟ್ರ ಸರ್ಕಾರ ಅತ್ಯುತ್ತಮವಾಗಿದೆ, ಮತ್ತು ಜನರಿಗೆ ತೀರಾ ಕಳಪೆ ನ್ಯಾಯ ಒದಗಿಸಿ ಕೊಡುವ ಮೂಲಕ ಉತ್ತರ ಪ್ರದೇಶ ರಾಜ್ಯ ಸರ್ಕಾರ ಅಪಖ್ಯಾತಿ ಪಡೆದಿದೆ.
* ದೇಶದ 11 ಅತ್ಯುತ್ತಮ ರಾಜ್ಯಗಳಲ್ಲಿ ಮಹಾರಾಷ್ಟ್ರ ಸರ್ಕಾರವು 10 ಅಂಕಗಳ ಪೈಕಿ 5.77 ಅಂಕಗಳನ್ನು ಪಡೆದು ಉತ್ತಮ ಎನಿಸಿಕೊಂಡಿದೆ, ಹಾಗೂ ಉತ್ತರ ಪ್ರದೇಶ ಸರ್ಕಾರವು 3.15 ಅಂಕಗಳನ್ನು ಪಡೆದುಕೊಂಡು ಕಳಪೆ ಎನಿಸಿಕೊಂಡಿದೆ.
* ಪೊಲೀಸ್ ಮತ್ತು ಪೊಲೀಸ್ ಅಧಿಕಾರಿಗಳು, ಕಾರಾಗೃಹ ಸಿಬ್ಬಂದಿ ಸೇರಿದಂತೆ ಹೀಗೆ ಹಲವು ಅಂಶಗಳ ಶ್ರೇಯಾಂಕವನ್ನು ಪರಿಗಣಿಸಿ ಭಾರತ ನ್ಯಾಯಾಧಿಕಾರ ವರದಿಯನ್ನು ನೀಡುತ್ತದೆ.

## ನಟ ಅನಿರುದ್ಧ್, ಮತ್ತು ನಟಿ ಭಾವನಾಗೆ ಫ್ಲೆಮಿಂಗೋ ಪ್ರಶಸ್ತಿ




* ಫ್ಲೆಮಿಂಗೋ ಚಲನಚಿತ್ರ ತರಬೇತಿ ಸಂಸ್ಥೆಯು ಪ್ರತಿ ವರ್ಷ ಸ್ಯಾಂಡಲ್‌ವುಡ್'ನ ಬಣ್ಣದ ಲೋಕದಲ್ಲಿ ಸೇವೆ ಸಲ್ಲಿಸಿದ ನಟ, ನಟಿಯರಿಗೆ ಫ್ಲೆಮಿಂಗೋ ಪ್ರಶಸ್ತಿಯನ್ನು ನೀಡುತ್ತಿದೆ.
* ಈ ವರ್ಷದ ಫ್ಲೆಮಿಂಗೋ ಸಂಸ್ಥೆಯು ನೀಡುವ ಫ್ಲೆಮಿಂಗೋ ಪ್ರಶಸ್ತಿಯನ್ನು ಈ ಬಾರಿ ನಟ ಅನಿರುದ್ಧ್ ಹಾಗೂ ನಟಿ ಭಾವನಾ ಅವರು ಪಡೆದುಕೊಂಡಿದ್ದಾರೆ.

# 31-01-2021

## ಇತಿಹಾಸದಲ್ಲಿ ಮೊದಲ ಬಾರಿಗೆ ರಣಜಿ ಪಂದ್ಯಾವಳಿ ರದ್ದು ಮಾಡಿದ BCCI



* ಭಾರತದ ಕ್ರಿಕೆಟ್ ಮಂಡಳಿಯು ತನ್ನ 87 ವರ್ಷದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ದೇಶದ ಐತಿಹಾಸಿಕ ಕ್ರಿಕೆಟ್ ಪಂದ್ಯವಾದ 'ರಣಜಿ ಟ್ರೋಫಿ'ಯನ್ನು ಇದೇ ಮೊದಲ ಬಾರಿಗೆ ರದ್ದುಮಾಡಲು ತೀರ್ಮಾನಿಸಿದೆ. 2020 21ನೇ ಸಾಲಿನ ರಣಜಿ ಪಂದ್ಯಾವಳಿಯನ್ನು ಕೋವಿಡ್ 19 ಕಾರಣ ಹಿನ್ನಲೆಯಲ್ಲಿ ರದ್ದುಮಾಡಲಾಗಿದೆ ಎಂದು ಬಿಸಿಸಿಐ ತಿಳಿಸಿದೆ.
* 1934 35 ರಿಂದ 2019 20ನೇ ವರ್ಷದ ತನಕ ಯಾವದೇ ಅಡೆತಡೆಗಳಿಲ್ಲದೆ 'ರಣಜಿ ಟ್ರೋಫಿ' ಕ್ರಿಕೆಟ್ ಪಂದ್ಯಗಳು ಸರಾಗವಾಗಿ ನಡೆಸಲಾಗಿತ್ತು, ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರದ್ದುಮಾಡಲು ಬಿಸಿಸಿಐ ನಿರ್ಧರಿಸಿದೆ.

## ಭಾರತದಲ್ಲಿ ಮೊದಲು ಬಜೆಟ್ ಮಂಡನೆ



* ಭಾರತದ ದೇಶದ ಮೊದಲ ಬಜೆಟ್ ಅನ್ನು ಭಾರತದ ಪ್ರಥಮ ಹಣಕಾಸು ಮಂತ್ರಿ ಶ್ರೀ ಷಣ್ಮುಖಂ ಚೆಟ್ಟಿರವರು1947 ನವೆಂಬರ್ 26ರಂದು ಮಂಡಿಸಿದರು.
* ಪ್ರಸ್ತುತ ಕೇಂದ್ರ ಹಣಕಾಸು ಸಚಿವೆಯಾಗಿರುವ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು 2021ರ ಕೇಂದ್ರ ಬಜೆಟ್ ಮಂಡನೆಯನ್ನು ಮಾಡಲಿದ್ದಾರೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ ಮೂರನೇ ಬಾರಿ ಬಜೆಟ್ ಮಂಡಿನೆ ಮಾಡಲಿದ್ದಾರೆ.

## ದೇಶದ ಏಕೈಕ ಬಾಲಕಿಯರ ಸೈನಿಕ ವಸತಿ ಶಾಲೆಗೆ ಸಿಎಂ BSY ಶಂಕುಸ್ಥಾಪನೆ



* ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಇತ್ತೀಚಿಗೆ ರಾಜ್ಯದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆಯ 'ಸರ್ದಾರ್ ವಲ್ಲಭಭಾಯಿ ಪಟೇಲ್ ನಿಲಯ' ಹಾಗೂ 'ನೇತಾಜಿ ಸುಭಾಷ್ ಚಂದ್ರ ಬೋಸ್ ನಿಲಯ' ಎಂಬ ವಸತಿ ಶಾಲೆಯ ಶಂಕುಸ್ಥಾಪನೆಗೆ ಚಾಲನೆ ನೀಡಿದರು.
* ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ ಹಾಗೂ ಇದು ದೇಶದ ಏಕೈಕ ಬಾಲಕಿಯರ ಸೈನಿಕ ವಸತಿ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಇದು ರಾಜ್ಯಕ್ಕೆ ಹೆಮ್ಮೆ ತರುವ ವಿಷಯವಾಗಿದೆ.

## ಚೌರಿ ಚೌರಾ ಘಟನೆಗೆ ಶತಮಾನೋತ್ಸವ




* 2021 ರ ಚೌರಿ ಚೌರಾ ಶತಮಾನೋತ್ಸವದ ಆಚರಣೆಯನ್ನು ಫೆಬ್ರುವರಿ 4 ರಂದು ಉತ್ತರಪ್ರದೇಶ ರಾಜ್ಯದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ.
* ಈ ಕಾರ್ಯಕ್ರಮದಲ್ಲಿ ಮೋದಿ ಅವರು ಚೌರಿ ಚೌರಾ ಘಟನೆಯ ಶತಮಾನೋತ್ಸವಕ್ಕೆ ಸಂಬಂಧ ಪಟ್ಟಿರುವ ಅಂಚೆ ಚೀಟಿಯನ್ನು ಪ್ರಧಾನಿ ಬಿಡುಗಡೆ ಮಾಡಲಿದ್ದಾರೆ. * ಈ ಚೌರಿ ಚೌರಾ ಘಟನೆಯು 1922 ರ ಫೆಬ್ರುವರಿ 4 ರಂದು ಭಾರತದ ಉತ್ತರ ಪ್ರದೇಶದ ಗೋರಖ್‌ಪುರ ಜಿಲ್ಲೆಯ ಚೌರಿ ಚೌರಾ ಎಂಬಲ್ಲಿ ನಡೆಯಿತು.

## ಭಾರತ ಜಪಾನ್ 5 ನೇ ಕಾಯ್ದೆ ಪೂರ್ವ ವೇದಿಕೆ ಸಭೆ



* 2021ರ ಜನವರಿ 28 ರಂದು ಭಾರತ ಜಪಾನ್ ಈ 5ನೇ ಕಾಯ್ದೆಯ ಜಂಟಿ ಸಭೆ ಎರಡು ದೇಶಗಳ ನಡುವೆ ನಡೆಯಿತು. ಈ ಸಭೆಯ ಸಹ ಅಧ್ಯಕ್ಷತೆಯನ್ನು ವಿದೇಶಾಂಗ ಕಾರ್ಯದರ್ಶಿ ಹರ್ಷ್ ವರ್ಧನ್ ಶ್ರೀಂಗ್ಲಾ ಮತ್ತು ಭಾರತದ ಜಪಾನ್ ರಾಯಭಾರಿ ಸುಜುಕಿ ಸಟೋಶಿ ರವರು ನಿರ್ವಹಿಸಿದರು.
* ಭಾರತ ಮತ್ತು ಜಪಾನ್ ದೇಶಗಳು ಈ ಪೂರ್ವ ವೇದಿಕೆಯ ಜಂಟಿ ಸಭೆಯಲ್ಲಿ ಜಲವಿದ್ಯುತ್ ಸಂಪರ್ಕ, ಜಲಸಂಪನ್ಮೂಲವನ್ನು ಬಳಸುವುದು, ಸುಸ್ಥಿರ ಅಭಿವೃದ್ಧಿ, ಮತ್ತು ಕೌಶಲ್ಯ ಅಭಿವೃದ್ಧಿ ಹೀಗೆ ಹಲವು ಕ್ಷೇತ್ರಗಳಲ್ಲಿ ಈ ಯೋಜನೆಗಳನ್ನು ಪ್ರಾರಂಭಿಸುವ ಕುರಿತು ತಿಳಿಸಿದವು.
* ಕೃಷಿ ಕೈಗಾರಿಕೆಗಳು, ಆರೋಗ್ಯ, ಸ್ಮಾರ್ಟ್ ಸಿಟಿ, ಪ್ರವಾಸೋದ್ಯಮ, ಬಿದಿರಿನ ಮೌಲ್ಯ ಸರಪಳಿ ಅಭಿವೃದ್ಧಿ, ಮತ್ತು ಜನರಿಂದ ಜನರಿಗೆ ವಿನಿಮಯ ಸೇರಿದಂತೆ ಹೊಸ ಕ್ಷೇತ್ರಗಳಲ್ಲಿನ ಸಹಕಾರದ ಕುರಿತು ಅವರು ತಮ್ಮ ಅಭಿಪ್ರಾಯಗಳನ್ನು ಎರಡು ದೇಶಗಳು ಪರಸ್ಪರ ವಿನಿಮಯ ಮಾಡಿಕೊಳ್ಳಲಾಗಿದೆ ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷ್ ವರ್ಧನ್ ಶ್ರೀಂಗ್ಲಾ ರವರು ಮಾಹಿತಿ ನೀಡಿದರು.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App